Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ-18 | ಸಂಚಿಕೆ-21 | ಮೇ 20-26, 2024 | ಪುಟ 16 | ರೂ.10/-
Volume-18 | Issue-21 | May 20-26, 2024 | Pages:16 | Price: 10/-



ಪ್ರಜ್ವಲ್ ಬಂಧನಕ್ಕೆ ಆಗ್ರಹಿಸಿ ಮೇ 30 ಹಾಸನದಲ್ಲಿ ಬೃಹತ್ ಪ್ರತಿಭಟನೆ

ಖಜುರಾಹೊ... ಇಂದೋರ್.... ಸೂರತ್...... ಚುನಾವಣಾ-ಮುಕ್ತ ಭಾರತದೆಡೆಗೆ !!



ಪ್ರಬೀರ್ ಬಂಧನ: ಆಳುವವರಿಗೆ ಸುಪ್ರಿಂ ಕೋರ್ಟ್ ಕಪಾಳಮೋಕ್ಷ



ಬಿಹಾರ: ಫಲಿಸದ ಕೋಮು ವಿಭಜನೆಯ ಪ್ರಯತ್ನ

ರಾಜಸ್ಥಾನ: ಬಿಜೆಪಿ ಸೀಟುಗಳನ್ನು ಕಳೆದುಕೊಳ್ಳಲಿದೆ

ಪಶ್ಚಿಮ ಬಂಗಾಳ: ಗಮನ ಸೆಳೆಯುತ್ತಿರುವ ಎಡರಂಗದ ಯುವ ಅಭ್ಯರ್ಥಿಗಳ ಸ್ಪರ್ಧೆ

ಅನ್ಯಾಯದ ಜೈಲುವಾಸ: ಪ್ರಬೀರ್ ರವರಿಗೆ ಇದು ಎರಡನೇ ಬಾರಿ:

ತುರ್ತು ಪರಿಸ್ಥಿತಿಯಲ್ಲಿ ಅವರನ್ನು ಒಂದು ವರ್ಷ ಜೈಲಿನಲ್ಲಿರಿಸಲಾಗಿತ್ತು

ದೆಹಲಿ ಪೊಲೀಸ್ ವಿಶೇಷ ಕೋಶವು ಪ್ರಬೀರ್ ಪುರ್ಕಾಯಸ್ಥ ಮತ್ತು ನ್ಯೂಸ್ ಪೋರ್ಟಲ್ ನ ಮಾನವ ಸಂಪನ್ಮೂಲ ವ್ಯವಸ್ಥಾಪಕ ಅಮಿತ್ ಚಕ್ರವರ್ತಿ ಅವರನ್ನು ಅಕ್ಟೋಬರ್ 3, 2023 ರಂದು ಬಂಧಿಸಿತು. ದೆಹಲಿ, ನೋಯ್ಡಾ ಮತ್ತು ಗಾಜಿಯಾಬಾದ್ ನಲ್ಲಿ ನ್ಯೂಸ್ ಕ್ಲಿಕ್ ನ ಪತ್ರಕರ್ತರು, ಉದ್ಯೋಗಿಗಳು ಹಾಗೂ ಲೇಖನಗಳು ಮತ್ತು ವರದಿಗಳನ್ನು ನೀಡುತ್ತಿದ್ದವರೂ ಸೇರಿದಂತೆ ಸುಮಾರು 80 ಜನರ ಮನೆಗಳು ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿದ ನಂತರ ಈ ಬಂಧನಗಳು ನಡೆದಿದ್ದವು. ರೈತರ ಮುಷ್ಕರ ಮತ್ತು ಪೌರತ್ವ ಕಾಯ್ದೆ ತಿದ್ದುಪಡಿ ವಿರುದ್ದ ನಡೆದ ಪ್ರತಿಭಟನೆಯಂತಹ ಘಟನೆಗಳ ಕುರಿತು ನ್ಯೂಸ್ ಕ್ಲಿಕ್ ನ ನಿಲುವಿನಿಂದ ಕೇಂದ್ರವು ಕೋಪಗೊಂಡಿತ್ತು.



ಯುಎಪಿಎ ಪ್ರಕರಣದಲ್ಲಿ ಪ್ರಬೀರ್ ರನ್ನು ಬಂಧಿಸಿ ರಿಮಾಂಡ್ ಮಾಡಿರುವುದು ಕಾನೂನುಬಾಹಿರ ಎಂದು ತನ್ನ ಆದೇಶದಲ್ಲಿ ಉಲ್ಲೇಖಿಸುವ ಮೂಲಕ ಸುಪ್ರೀಂ ಕೋರ್ಟ್ ಪ್ರಬೀರ್ ಪುರ್ಕಾಯಸ್ಥ ಅವರನ್ನು ಬಿಡುಗಡೆ ಮಾಡುವಂತೆ ಆದೇಶಿಸಿದೆ. ಪ್ರಭೀರ್ ಅವರು ಏಳೂವರೆ ತಿಂಗಳ ನಂತರ ಮೇ 15ರಂದು ಜೈಲಿನಿಂದ ಬಿಡುಗಡೆಗೊಂಡಿದ್ದಾರೆ.

ಜೆ.ಎನ್.ಯು. ವಿದ್ಯಾರ್ಥಿಯಾಗಿದ್ದಾಗಲೂ ಬಂಧಿಸಲಾಗಿತ್ತು

48 ವರ್ಷಗಳ ಹಿಂದೆ ಇದೇ ದೆಹಲಿ ಪೊಲೀಸರು ಪ್ರಬೀರ್ ಪುರ್ಕಾಯಸ್ಥ ಅವರನ್ನು ಬಂಧಿಸಿದಾಗ ಅವರಿಗೆ 25 ವರ್ಷ ವಯಸ್ಸು. ಆಗಲೂ ಯಾವುದೇ ಅಪರಾಧ ನಡೆದಿರಲಿಲ್ಲ. ಪೊಲೀಸರ ಬಳಿ ಯಾವುದೇ ಸಾಕ್ಷ್ಯಾಧಾರಗಳು ಇರಲಿಲ್ಲ. ಆದರೆ ವಿಚಾರಣೆ ಕೂಡ ಇಲ್ಲದೆ ಒಂದು ವರ್ಷ ಜೈಲಿನಲ್ಲಿಟ್ಟರು. ಪ್ರಬೀರ್ ಆಗ ಜೆಎನ್‌ಯುನಲ್ಲಿ ಪಿಎಚ್‌ಡಿ ವಿದ್ಯಾರ್ಥಿಯಾಗಿದ್ದರು. ಆದರೆ, ದೇಶದಲ್ಲಿ ತುರ್ತು ಪರಿಸ್ಥಿತಿ ಇತ್ತು. ಕಳೆದ ಅಕ್ಟೋಬರ್ ನಲ್ಲಿ 74 ನೇ ವಯಸ್ಸಿನಲ್ಲಿ ಪೊಲೀಸರು ಪ್ರಬೀರ್ ಅವರನ್ನು ಅಪರಾಧ ಅಥವಾ ಸಾಕ್ಷ್ಯವನ್ನು ನಿರ್ದಿಷ್ಟಪಡಿಸದೆ ಮತ್ತೆ ಬಂಧಿಸಿದಾಗ, ಭಾರತದಲ್ಲಿ ಯಾವುದೇ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿರಲಿಲ್ಲ. ಇಂದು, ಪ್ರಬೀರ್ ಪತ್ರಕರ್ತ ಮತ್ತು ವಿಜ್ಞಾನ ಪ್ರಚಾರಕ. ಈಗಲೂ ತಲೆಬಾಗದೆ, ತೆವಳದೆ ಹೋರಾಡುತ್ತಿರುವ ಮಾಧ್ಯಮ ಸಂಸ್ಥೆ ನ್ಯೂಸ್ ಕ್ಲಿಕ್ ನ ಸ್ಥಾಪಕ ಸಂಪಾದಕರೂ ಹೌದು. ಆಗ ಮತ್ತು ಈಗ ಆಡಳಿತವು ಒಂದೊಂದು ಕಾರಣಕ್ಕಾಗಿ ಅವರನ್ನು ಜೈಲಿಗೆ ಹಾಕಲು ಧೈರ್ಯ ಮಾಡಿತು. ಏಕೆಂದರೆ ಪ್ರಬೀರ್ ಎಡಪಂಥೀಯ.

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಡೆದ ದೌರ್ಜನ್ಯಗಳ ತನಿಖೆ ನಡೆಸಿದ ನ್ಯಾಯಮೂರ್ತಿ ಜೆ.ಸಿ.ಷಾ ಆಯೋಗದ ವರದಿಯು ನಾಲ್ಕು ಪುಟಗಳಲ್ಲಿ ಪ್ರಬೀರ್ ಬಂಧನವನ್ನು ವಿವರಿಸಿದೆ. ಪ್ರಕರಣ ಅಥವಾ ವಾರಂಟ್ ಇಲ್ಲದೇ ಕಸ್ಟಡಿಗೆ ಪಡೆದಿರುವ ಪ್ರಬೀರ್ ವಿರುದ್ದ ಸುಳ್ಳು ದಾಖಲೆಗಳ ಆರೋಪ ಹೊರಿಸಿರುವುದನ್ನು ಆಯೋಗ ಪತ್ತೆ ಮಾಡಿದೆ. ಪ್ರಬೀರ್ ತನ್ನ ಪಿಎಚ್‌ಡಿಗಾಗಿ JNU ನಲ್ಲಿ ಸ್ಕೂಲ್ ಆಫ್ ಕಂಪ್ಯೂಟರ್ ಮತ್ತು ಸಿಸ್ಟಮ್ ಸೈನ್ಸ್ ಗೆ ಸೇರಿದರು. 1975 ರಲ್ಲಿ, ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದ ಸದಸ್ಯ ಅಶೋಕ್ ಲತಾ ಜೈನ್ ಅವರ ಉಚ್ಚಾಟನೆ ವಿರುದ್ಧ ಕ್ಯಾಂಪಸ್ ನಲ್ಲಿ ಪ್ರತಿಭಟನೆ ನಡೆಯುತ್ತಿತ್ತು. ಸೆಪ್ಟೆಂಬರ್ 24 ರಂದು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದರು. ಪ್ರಬೀರ್ ಅದರಲ್ಲಿ ಭಾಗವಹಿಸಿದ್ದರು. 25ರಂದು ಮುಷ್ಕರ ಮುಂದುವರಿದಿತ್ತು. ಆ ದಿನ ಬೆಳಿಗ್ಗೆ ಪ್ರಬೀರ್ ಅವರು ಸ್ನೇಹಿತರಾದ ಸರಸ್ವತಿ ಮೆನನ್, ಶಕ್ತಿ ಕಾಕ್ ಮತ್ತು ಇಂದ್ರಾಣಿ ಮಜುಂದಾರ್ ಅವರೊಂದಿಗೆ ಭಾಷಾ ಶಾಲೆ ಬಳಿಯ ಹುಲ್ಲುಹಾಸಿನ ಮೇಲೆ ಕುಳಿತಿದ್ದರು.

> **ಸುಪ್ರೀಂ ಕೋರ್ಟ್ ಆದೇಶದ ನಂತರ ನ್ಯೂಸ್ ಕ್ಲಿಕ್ ಸುದ್ದಿ ಮಾಧ್ಯಮದ ಸಂಪಾದಕ ಪ್ರಬೀರ್ ಪುರ್ಕಾಯಸ್ಥ ಅವರನ್ನು ಮೇ 15ರಂದು ಬಂಧನದಿಂದ ಬಿಡುಗಡೆ ಮಾಡಲಾಗಿದೆ. ಯುಎಪಿಎ ಪ್ರಕರಣದಲ್ಲಿ ಪ್ರಬೀರ್ ರನ್ನು ಬಂಧಿಸಿ ರಿಮಾಂಡ್ ಮಾಡಿರುವುದು ಕಾನೂನುಬಾಹಿರ ಎಂದು ಸುಪ್ರೀಂ ಕೋರ್ಟಿನ ಆದೇಶದಲ್ಲಿ ತಿಳಿಸಲಾಗಿದೆ. ಏಳು ತಿಂಗಳಿಗೂ ಹೆಚ್ಚು ಕಾಲ ಜೈಲಿನಲ್ಲಿರುವ ಪ್ರಬೀರ್ ನನ್ನು ಬಿಡುಗಡೆ ಮಾಡುವಂತೆ ನ್ಯಾಯಾಲಯ ಆದೇಶಿಸಿತು. ಪ್ರಬೀರ್ ಅಕ್ರಮ ಬಂಧನದಲ್ಲಿರುವುದು ಇದೇ ಮೊದಲನೆಯದೇನಲ್ಲ. 48 ವರ್ಷಗಳ ಹಿಂದೆ ಇದೇ ದೆಹಲಿ ಪೊಲೀಸರು ಬಂಧಿಸಿದಾಗ ಅವರಿಗೆ 25 ವರ್ಷ. ಆಗಲೂ ಅವರು ಯಾವುದೇ ಅಪರಾಧ ಮಾಡಿರಲಿಲ್ಲ. ಪೊಲೀಸರ ಬಳಿ ಸಾಕ್ಷಿ ಇರಲಿಲ್ಲ. ಆದರೆ ವಿಚಾರಣೆಯಿಲ್ಲದೆ ಒಂದು ವರ್ಷ ಜೈಲಿನಲ್ಲಿಟ್ಟರು. ಪ್ರಬೀರ್ ಆಗ ಜೆಎನ್‌ಯುನಲ್ಲಿ ಪಿಎಚ್‌ಡಿ ವಿದ್ಯಾರ್ಥಿಯಾಗಿದ್ದರು. ಆದರೆ, ಅಂದು ದೇಶದಲ್ಲಿ ತುರ್ತು ಪರಿಸ್ಥಿತಿ ಇತ್ತು.**

"ಈ ಬಂಧನ ಮತ್ತು ಅವರು ಎದುರಿಸಿದ ಚಿತ್ರಹಿಂಸೆಯು ಪ್ರಧಾನಿಯ ನಿವಾಸದಲ್ಲಿ ಯಾರನ್ನಾದರೂ ತೃಪ್ತಿಪಡಿಸಲು ಉದ್ದೇಶಿಸಲಾಗಿತ್ತು ಎಂಬುದು ಸ್ಪಷ್ಟವಾಗಿದೆ. ಅಧಿಕಾರ ವಹಿಸಿಕೊಂಡರೆ ಎಲ್ಲಿಯೂ ತಮ್ಮ ಕಾರ್ಯಗಳನ್ನು ವಿವರಿಸಬೇಕಾಗಿಲ್ಲ ಎಂದು ಭಾವಿಸಿದವರ ದುರದೃಷ್ಟಕರ ಫಲಿತಾಂಶವಾಗಿದೆ" – ನ್ಯಾಯಮೂರ್ತಿ ಷಾ ಅವರ ಆಯೋಗದಲ್ಲಿನ ವರದಿ.

ಇದ್ದಕ್ಕಿದ್ದಂತೆ ಕಪ್ಪು ಬಣ್ಣದ ಅಂಬಾಸಿಡರ್ ಕಾರು ಕ್ಯಾಂಪಸ್ ಗೇಟ್ ಪ್ರವೇಶಿಸಿತು. ಕಾರಿನಲ್ಲಿದ್ದ ನಾಲ್ವರಲ್ಲಿ ಒಬ್ಬರು ಇಳಿದು ಕುಳಿತಿದ್ದವರ ಹತ್ತಿರ ಬಂದರು. ಪ್ರಬೀರ್ ಅವರನ್ನು ನೋಡಿ, 'ದೇವಿಪ್ರಸಾದ್ ತ್ರಿಪಾಠಿ, ವಿದ್ಯಾರ್ಥಿ ಸಂಘದ ಅಧ್ಯಕ್ಷರಲ್ಲವೇ?' ಎಂದು ಪ್ರಶ್ನಿಸಿದರು. 'ಅಲ್ಲ' ಎಂಬ ಉತ್ತರ ಪ್ರಭೀರ್ ಅವರದಾಗಿತ್ತು. ಆದರೆ, ಆತ ಪ್ರಬೀರ್ ನನ್ನು ಕಾರಿಗೆ ಎಳೆದೊಯ್ದ. ಪ್ರಬೀರ್ ಜೊತೆಯಲ್ಲಿದ್ದವರ ಆಕ್ಷೇಪವನ್ನು ನಿರ್ಲಕ್ಷಿಸಿ ಕಾರಿನ ಬಾಗಿಲು ಕೂಡ ಮುಚ್ಚದೆ ಕಾರನ್ನು ವೇಗವಾಗಿ ಚಲಾಯಿಸಿಕೊಂಡು ಹೋದರು. ತೆರೆದ ಬಾಗಿಲಿನಿಂದ ಪ್ರಬೀರನ ಕಾಲು ಕೂಡ ಹೊರಗಿತ್ತು. ಒಬ್ಬ ಪೊಲೀಸ್ ಅಧಿಕಾರಿ ಕ್ಯಾಂಪಸ್ ನಲ್ಲಿಯೇ ಉಳಿದರು. ವಿದ್ಯಾರ್ಥಿಗಳು ಆ ಅಧಿಕಾರಿಯನ್ನು ಸುತ್ತುವರೆದರು. ಆದರೆ ಹೊರಗಿದ್ದ ಪೊಲೀಸರು ಬಂದು ಆತನನ್ನು ರಕ್ಷಿಸಿದರು.

ಪ್ರಬೀರ್ ನನ್ನು ಯಾರೋ ಕಿಡ್ನಾಪ್ ಮಾಡಿದ್ದಾರೆ ಎಂಬ ಸುದ್ದಿ ಕ್ಯಾಂಪಸ್ ನಲ್ಲಿ ಹಬ್ಬಿತು. ತುರ್ತು ಪರಿಸ್ಥಿತಿಯ ಸಮಯದಲ್ಲಿ, ಈ ವಿಷಯದ ಬಗ್ಗೆ ಯಾವುದೇ ಪ್ರಮುಖ ತನಿಖೆ ಇರಲಿಲ್ಲ. ಏನಾಗಿದೆ ಎಂದು ಯಾರಿಗೂ ತಿಳಿಯಲಿಲ್ಲ.

ಡಿಐಜಿ ಪಿ.ಎಸ್.ಭಿಂದರ್ ಮತ್ತು ಅವರ ತಂಡ ಕಾರಿನಲ್ಲಿತ್ತು. ಭಿಂದರ್ ಅವರು ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರ ಮಗ ಸಂಜಯ್ ಗಾಂಧಿಯವರಿಂದ ನೇರ ಆದೇಶವನ್ನು ಪಡೆದ ಅಧಿಕಾರಿಯಾಗಿದ್ದರು. ಪ್ರಬೀರ್ ನನ್ನು ಆರ್.ಕೆ. ಪುರಂ ಠಾಣೆಗೆ ಕರೆದೊಯ್ದರು. ಅಲ್ಲಿಯೇ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಪೊಲೀಸರು 'ತ್ರಿಪಾಠಿ ಅಲ್ಲವೇ' ಎಂಬ ಪ್ರಶ್ನೆಯನ್ನು ಪುನರುಚ್ಚರಿಸಿದರು ಮತ್ತು ಪ್ರಬೀರ್ 'ಇಲ್ಲ' ಎಂದು ಉತ್ತರಿಸಿದರು.

ಅಂದು ಮೇನಕಾ ಗಾಂಧಿ ಜೆಎನ್‌ಯು ವಿದ್ಯಾರ್ಥಿನಿ

1977ರಲ್ಲಿ ತುರ್ತುಪರಿಸ್ಥಿತಿ ಹಿಂಪಡೆದ ಬಳಿಕ ನೇಮಕಗೊಂಡ ನ್ಯಾಯಮೂರ್ತಿ ಷಾ ಆಯೋಗ ನಡೆಸಿದ ಸಾಕ್ಷ್ಯದಲ್ಲಿ ಬಂಧನದ ವಿಷಯವನ್ನು ಮುಚ್ಚಿಡಲಾಗಿದೆ ಎಂದು ತಿಳಿಯಿತು. ಸಂಜಯ್ ಗಾಂಧಿಯನ್ನು ಮೆಚ್ಚಿಸಲು ಪ್ರಬೀರ್ ಬಂಧನವಾಗಿದೆ ಎಂಬುದು ಷಾ ಆಯೋಗದ ವರದಿಯಲ್ಲಿ ಬಹಿರಂಗವಾಗಿದೆ. ಆಗ ಸಂಜಯ್ ಪತ್ನಿ ಮೇನಕಾ ಗಾಂಧಿ ಜೆಎನ್‌ಯು ವಿದ್ಯಾರ್ಥಿನಿ. ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದಾಗ ಮೇನಕಾ ತರಗತಿ ಪ್ರವೇಶಿಸಲು ಬಂದರು. ವಿಧ್ಯಾರ್ಥಿ ಒಕ್ಕೂಟದ ಅಧ್ಯಕ್ಷ ತ್ರಿಪಾಠಿ ಮತ್ತಿತರರು ಅವರನ್ನು ತಡೆದರು. ಅವರು ಮನೆಗೆ ಹಿಂತಿರುಗಿದರು. ಇದರ ಮಾಹಿತಿ ತಿಳಿದ ಸಂಜಯ್ ಗಾಂಧಿ ಕೋಪಗೊಂಡರು. ತುರ್ತು ಪರಿಸ್ಥಿತಿಯ ಉಸ್ತುವಾರಿ ಹೊತ್ತಿದ್ದ ಸಂಜಯ್ ಅವರು ತ್ರಿಪಾಠಿ ಮತ್ತು ಅವರ ಸ್ನೇಹಿತರನ್ನು ಬಂಧಿಸುವಂತೆ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಅವರನ್ನು ಕೇಳಿಕೊಂಡರು. ತ್ರಿಪಾಠಿ ವಿರುದ್ಧ ಅಂದಿನ ರಾಷ್ಟ್ರೀಯ ಭದ್ರತಾ ಕಾಯಿದೆ (ಆಂತರಿಕ ಭದ್ರತಾ ಕಾಯಿದೆ ನಿರ್ವಹಣೆ–MISA) ಅಡಿಯಲ್ಲಿ ವಾರಂಟ್ ಕೂಡ ಕಳುಹಿಸಲಾಗಿತ್ತು. ತ್ರಿಪಾಠಿ ತಲೆಮರೆಸಿಕೊಂಡಿದ್ದ. ಆದರೆ ಪೊಲೀಸರು ಪ್ರಬೀರ್ ಅವರನ್ನು ಹಿಡಿಯುವಲ್ಲಿ ಯಶಸ್ವಿಯಾದರು.

ಪ್ರಬೀರ್ ಮುಷ್ಕರದಲ್ಲಿ ಪಾಲ್ಗೊಂಡಿದ್ದರೂ ಮೇನಕಾ ತರಗತಿಗೆ ಹೋಗುವುದನ್ನು ತಡೆಯಲಿಲ್ಲ. ಪ್ರಬೀರ್ ಬಂಧನಕ್ಕೆ ಯಾವುದೇ ವಾರಂಟ್ ಇರಲಿಲ್ಲ. ಈ ಬಗ್ಗೆ ಉನ್ನತ

ಪುಟ 6 ಕ್ಕೆ

ದಬ್ಬಾಳಿಕೆಗೆ ಸುಪ್ರೀಂ ಕೋರ್ಟ್ ಕಪಾಳ ಮೋಕ್ಷ

ನ್ಯೂಸ್‌ಕ್ಲಿಕ್ ಆನ್‌ಲೈನ್ ಪೋರ್ಟಲ್ ಸಂಸ್ಥಾಪಕ ಪ್ರಬೀರ್ ಪುರ್ಕಾಯಸ್ಥ ಅವರ ಬಂಧನ ಅಸಿಂಧುವಾಗಿದ್ದು, ಅವರನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ದೇಶದ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪು ಪ್ರಜಾಪ್ರಭುತ್ವವಾದಿಗಳಿಗೆ ದೊಡ್ಡ ಸಮಾಧಾನವಾಗಿದೆ. ಇದು ಬಿಜೆಪಿ ಸರ್ಕಾರಕ್ಕೆ ಕಪಾಳಮೋಕ್ಷವಾಗಿದೆ. ನ್ಯಾಯಮೂರ್ತಿ ಗವಾಯಿ ಮತ್ತು ನ್ಯಾಯಮೂರ್ತಿ ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಪೀಠವು "ಪ್ರಬೀರ್ ವಿರುದ್ಧದ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖಾ ಸಂಸ್ಥೆಯು ಯಾವುದೇ ಪುರಾವೆಗಳನ್ನು ತೋರಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ಬಂಧನ ಮತ್ತು ರಿಮಾಂಡ್‌ನಂತಹ ಎಲ್ಲಾ ಪ್ರಕರಣಗಳಲ್ಲಿ, ಪೊಲೀಸರು ಕಾನೂನಿನ ಕನಿಷ್ಠ ನಿಯಮಗಳನ್ನು ಅನುಸರಿಸಲಿಲ್ಲ ಮತ್ತು ಹಿಂದಿನ ತೀರ್ಪುಗಳ ನಿರ್ದೇಶನಗಳನ್ನು ಉಲ್ಲಂಘಿಸಿದ್ದಾರೆ." ಎಂದು ಹೇಳಿದೆ.

ಸುಪ್ರೀಂ ತೀರ್ಪಿನ ಹಿನ್ನೆಲೆಯಲ್ಲಿ ವಿಚಾರಣಾ ನ್ಯಾಯಾಲಯದಿಂದ ಜಾಮೀನು ಪಡೆದು ಮೇ 15ರ ರಾತ್ರಿ ತಿಹಾರ್ ಜೈಲಿನಿಂದ ಬಿಡುಗಡೆಯಾಗಿರುವ 74 ವರ್ಷದ ಪ್ರಬೀರ್ ಪುರ್ಕಾಯಸ್ಥ ಅವರು, ತನ್ನನ್ನು ಅಕ್ರಮ ಬಂಧನಕ್ಕೆ ಒಳಪಡಿಸಿದ ಕ್ರಮದ ವಿರುದ್ಧ ದೇಶಾದ್ಯಂತ ಹೋರಾಡಿದ ಪತ್ರಕರ್ತರು, ಸಾರ್ವಜನಿಕ ಸಂಘಟನೆಗಳು ಮತ್ತು ಪ್ರಗತಿಪರ ಶಕ್ತಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು. "ನಾನು ದೀರ್ಘಕಾಲದಿಂದ ದೌರ್ಜನ್ಯದ ವಿರುದ್ಧ ಹೋರಾಡುತ್ತಿದ್ದೇನೆ. ನಾನು ಅದೇ ಚಲದಿಂದ ಹೋರಾಟವನ್ನು ಮುಂದುವರಿಸುತ್ತೇನೆ" ಎಂದರು.

ಪ್ರಕರಣವು ಆಧಾರರಹಿತ ಮತ್ತು ಸಮರ್ಥನೀಯವಲ್ಲ ಮತ್ತು ಸರ್ಕಾರದ ಬಂಧನದಲ್ಲಿನ ಲೋಪದೋಷವು ಎಂದಾದರೂ ಬಯಲಾಗುವುದು ತಪ್ಪುವುದಿಲ್ಲ ಎಂಬುದು ಮೋದಿ ಶಾ ಜೋಡಿಗೆ ತಿಳಿಯದ ವಿಷಯವೇನಲ್ಲ. ಆದರೆ, ಪ್ರಶ್ನಿಸುವವರನ್ನು ಭಯಪಡಿಸಲು ಅಕ್ರಮ ಬಂಧನಕ್ಕೆ ಒಳಪಡಿಸುತ್ತದೆ. ಅಮೆರಿಕದ ನಿಯತಕಾಲಿಕೆ 'ನ್ಯೂಯಾರ್ಕ್ ಟೈಮ್ಸ್' ಕಳೆದ ವರ್ಷ ಆಗಸ್ಟ್‌ನಲ್ಲಿ ಬರೆದ ಆಧಾರರಹಿತ ಕಾಲ್ಪನಿಕ ಕಥನವನ್ನು ಇಟ್ಟುಕೊಂಡು ಪಿತೂರಿ ಹೂಡಿತು.

ಬಿಜೆಪಿ ಸರ್ಕಾರದ ಜನವಿರೋಧಿ ನೀತಿಗಳ ಬಗ್ಗೆ ಬರೆದ, ಪ್ರಸಾರ ಮಾಡಿದ ಎಲ್ಲಾ ಮಾಧ್ಯಮ ಸಂಸ್ಥೆಗಳ ಮೇಲೆ ಇದೇ ರೀತಿಯ ದಬ್ಬಾಳಿಕೆಯನ್ನು ಪ್ರಯೋಗಿಸಿದೆ. ಎನ್‌ಡಿಟಿವಿಯನ್ನು ಬಿಜೆಪಿ ಪರ ಶಕ್ತಿಗಳು ಅಕ್ರಮ ಮಾರ್ಗದಲ್ಲಿ ವಶಪಡಿಸಿಕೊಂಡಿವೆ. ಬಿಬಿಸಿ, ದೈನಿಕ್ ಭಾಸ್ಕರ್ ಮತ್ತು ದಿ ವೈರ್ ನಂತಹ ಮಾಧ್ಯಮ ಸಂಸ್ಥೆಗಳಿಗೆ ಕಿರುಕುಳ ನೀಡಲಾಯಿತು. ಕ್ರೂರ ಭಯೋತ್ಪಾದನಾ ವಿರೋಧಿ ಕಾಯಿದೆ (ಯುಎಪಿಎ) ಅನ್ನು ಅನೇಕ ಜನಪರ ಕಾರ್ಯಕರ್ತರ ವಿರುದ್ಧ ಬಳಸಲಾಗಿದೆ ಮತ್ತು ಯಾವುದೇ ವಿಚಾರಣೆಯಿಲ್ಲದೆ ಅವರನ್ನು ವರ್ಷಗಳ ಕಾಲ ಜೈಲುಗಳಲ್ಲಿ ಬಂಧಿಸಲಾಗಿದೆ. ಈ ನಿರಂಕುಶ ಧೋರಣೆಗಳ ವಿರುದ್ಧ ಇತ್ತೀಚೆಗೆ ಸುಪ್ರೀಂ ಕೋರ್ಟ್‌ನ ಟೀಕೆಗಳಿಂದ ಬಿಜೆಪಿ ಸರ್ಕಾರ ತಲೆ ತಗ್ಗಿಸುವಂತಾದರೂ ಅದರ ಧೋರಣೆ ಮಾತ್ರ ಬದಲಾಗುತ್ತಿಲ್ಲ.

ಪ್ರಜ್ವಲ್ ರೇವಣ್ಣ ತುರ್ತು ಬಂಧನಕ್ಕೆ ಆಗ್ರಹ
ಮೇ 30: ಹಾಸನದಲ್ಲಿ ಬೃಹತ್ ಪ್ರತಿಭಟನೆಗೆ ಕರೆ
ರಾಜ್ಯಮಟ್ಟದ ಸಮಾರೋಚನಾ ಸಭೆಯ ನಿರ್ಧಾರ:

ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯಗಳ ಆರೋಪಗಳಡಿ ದೂರು ದಾಖಲಾಗಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆಗೆ ಗುರಿ ಪಡಿಸಬೇಕು, ಸಂತ್ರಸ್ತ ಮಹಿಳೆಯರ ಘನತೆ ರಕ್ಷಣೆ ಆಗಬೇಕು ಎಂದು ಆಗ್ರಹಿಸಿ ಇದೇ ತಿಂಗಳ 30 ರಂದು ಹಾಸನದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಮೇ 18, 2024 ರಂದು ಹಾಸನ ಜಿಲ್ಲಾ ಕಸಾಪ ಭವನದಲ್ಲಿ ನಡೆದ ರಾಜ್ಯಮಟ್ಟದ ಸಮಾಲೋಚನೆ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಕರ್ನಾಟಕ ರಾಜ್ಯದ ಜನಪರ ಚಳವಳಿಗಳ ನೇತೃತ್ವದಲ್ಲಿ ಹೋರಾಟಕ್ಕೆ ಕರೆ ನೀಡಲಾಯಿತು. ಈ ನಿರ್ಣಯಕ್ಕೆ ವಿವಿಧ ಜನಪರ, ರೈತ, ಕಾರ್ಮಿಕ, ಯುವಜನ,



ಮಹಿಳಾ, ವಿದ್ಯಾರ್ಥಿ ಸಂಘಟನೆಗಳು ಸಂಪೂರ್ಣ ಬೆಂಬಲ ಸೂಚಿಸಿದವು.

ಸಭೆಯಲ್ಲಿ ಮಾತನಾಡಿದ ಸಾಹಿತಿ ರೂಪ ಹಾಸನ್, ಅಶ್ಲೀಲ ವೀಡಿಯೋ ಸುನಾಮಿ ರೀತಿ ಅಪ್ಪಳಿಸಿದೆ. ಇದೊಂದು ಲೈಂಗಿಕ ಹತ್ಯಾಕಾಂಡ, ಇದರ ಪರಿಣಾಮ ಊಹಿಸಲು ಅಸಾಧ್ಯ, ನೊಂದ ಹೆಣ್ಣು ಮಕ್ಕಳ ಕುಟುಂಬದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದೆ. ಇದು ಪುರುಷ ರಾಜಕಾರಣ ಅಧೋಗತಿಗೆ ಇಳಿದ ರೀತಿ ತೋರಿಸಿದೆ ಎಂದು ವಿಷಾದಿಸಿದರು. ಕೂಡಲೇ ಸಂಸದ ಪ್ರಜ್ವಲ್ ಬಂಧನ ಆಗಬೇಕಿದೆ. ಅವರ ರಾಜತಾಂತ್ರಿಕ ಪಾಸ್ ಪೋರ್ಟ್ ರದ್ದು ಮಾಡಲು ಕ್ರಮ ಕೈಗೊಳ್ಳಬೇಕಿದೆ ಎಂದರು. ಕೇಂದ್ರ ಸರ್ಕಾರ ಮನಸ್ಸು ಮಾಡಿದರೆ ಪ್ರಜ್ವಲ್ ರೇವಣ್ಣ ಅವರನ್ನು ಉಸಿರುಗಟ್ಟಿಸಲು ಸಾಧ್ಯ ಇದೆ. ರಾಜತಾಂತ್ರಿಕ ಪಾಸ್ ಪೋರ್ಟ್ ರದ್ದು ಮಾಡಲು ಕೋರ್ಟ್ ಅನುಮತಿ ಬೇಕಾಗಿಲ್ಲ. ಬ್ರೌನ್ ಕಲರ್‌ನ ಪಾಸ್ ಪೋರ್ಟ್ ರದ್ದು ಮಾಡುವುದು ಅತ್ಯಂತ ಸುಲಭ. ಅದನ್ನು ಮಾಡಿದರೆ ಪ್ರಜ್ವಲ್ ಎಲ್ಲೂ ಓಡಾಡಲು ಆಗುವುದಿಲ್ಲ. ಪ್ರಜ್ವಲ್ ಎಲ್ಲಿದ್ದಾರೆ ಎಂದು ಕೇಂದ್ರ ಗೃಹ ಇಲಾಖೆಗೆ ಖಂಡಿತಾ ಗೊತ್ತಿದೆ ಎಂದು ಹೈಕೋರ್ಟ್ ವಕೀಲ ಬಿ.ಟಿ.ವೆಂಕಟೇಶ ಹೇಳಿದರು.

ಕೆಪಿಆರ್‌ಎಸ್ ರಾಜ್ಯ ಕಾರ್ಯದರ್ಶಿ ಟಿ. ಯಶವಂತ್ ಮಾತನಾಡಿ, ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ದೇವೇಗೌಡರ ಮೇಲೆ ಸಹಾನುಭೂತಿ ಬರುತ್ತಿದೆ. ಈ ವಯಸ್ಸಿನಲ್ಲಿ ಇಂತಹ ಪರಿಸ್ಥಿತಿ ಎದುರಿಸ ಬೇಕಾಯ್ತಲ್ಲ ಎನ್ನುವ ಮಾತುಗಳು ಕೇಳಿಬರುತ್ತಿವೆ. ದೇವೇಗೌಡರು ಅನುಕಂಪಕ್ಕೆ ಅರ್ಹ ಆಗಬೇಕಾದರೆ ಕೇಂದ್ರಕ್ಕೆ ಪತ್ರ ಬರೆದು ಪ್ರಜ್ವಲ್ ರೇವಣ್ಣ ಅವರ ರಾಜತಾಂತ್ರಿಕ ಪಾಸ್ ಪೋರ್ಟ್ ರದ್ದು ಪಡಿಸಲು ಒತ್ತಾಯಿಸಬೇಕು ಎಂದರು.

ಈ ನಡುವೆ ನಮ್ಮ ನಾಡಿನ ಹಿರಿಯ ಸಾಹಿತಿ–ಚಿಂತಕರು, ನಾನಾ ಜನಪರ ಸಂಘಟನೆಗಳು ಹಾಗೂ ಚಳುವಳಿಗಳ ನಾಯಕರು ಈ ಪ್ರಕರಣದ ಸಂಬಂಧ ರಾಜ್ಯದ ಮುಖ್ಯಮಂತ್ರಿಗಳಿಗೆ ಬಹಿರಂಗ ಪತ್ರವೊಂದನ್ನು ಬರೆದಿದ್ದು ಪತ್ರ ತಿರುಳನ್ನು ಇಲ್ಲಿ ಮುಂದೆ ನೀಡಲಾಗಿದೆ. ●



ರಾಜ್ಯ ಸರಕಾರ ಸಂವೇದನಾಶೀಲವಾಗಿ ಕ್ರಮ ವಹಿಸಲಿ
ಮುಖ್ಯಮಂತ್ರಿಗಳಿಗೆ ಪ್ರಜ್ಞಾವಂತ ನಾಗರಿಕರ ಪತ್ರ

ಹಾಸನದ ಸಂಸದ ಪ್ರಜ್ವಲ್ ರೇವಣ್ಣ, ಅವನ ತಂದೆ ಮತ್ತು ಶಾಸಕ ಎಚ್.ಡಿ. ರೇವಣ್ಣ ಅವರುಗಳು ನಡೆಸಿದ್ದಾರೆನ್ನಲಾದ ವಿಕೃತ ಲೈಂಗಿಕ ಸಮೂಹ ಅತ್ಯಾಚಾರ ಹಗರಣವು ಅತ್ಯಂತ ಹೇಯವೂ, ನಾಗರಿಕ ಸಮಾಜ ತಲೆತಗ್ಗಿಸುವಂತಹುದೂ ಆಗಿದೆ. ಈ ಲೈಂಗಿಕ ಕ್ರಿಯೆಗಳನ್ನು ಸುಮಾರು 2900 ವಿಡಿಯೋಗಳು ಮತ್ತು ಫೋಟೋಗಳಲ್ಲಿ ದಾಖಲಿಸಿ ಇಟ್ಟುಕೊಂಡಿರುವುದು, ಸಂತ್ರಸ್ತರು ದೂರು ನೀಡದಂತೆ ಬೆದರಿಸುವುದು, ಅಪಹರಿಸುವುದು, ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರುವ ಹಗರಣವನ್ನು ಮಾಹಿತಿ ಇರುವ ಯಾರೊಬ್ಬರೂ ಕಾನೂನು ಪಾಲಕರಿಗೆ ತಿಳಿಸದೆ ಮುಚ್ಚಿಟ್ಟಿರುವುದು ಘೋರ ಅಪರಾಧವಾಗಿದೆ.

ಜಗತ್ತಿನಲ್ಲಿ ಹಿಂದೆಂದೂ ಕೇಳರಿಯದಂತಹ ಈ ಹಗರಣವನ್ನು ರಾಜಕೀಯ ಪಕ್ಷಗಳು ಮತ್ತು ರಾಜಕೀಯ ನಾಯಕರು ತಮ್ಮ ಹಿತಾಸಕ್ತಿಗೆ, ಚುನಾವಣೆಯ ಲಾಭಕ್ಕಾಗಿ ಬಳಸುತ್ತಿರುವುದು ಮತ್ತಷ್ಟು ಆಘಾತಕಾರಿಯಾಗಿದೆ. ರಾಜಕೀಯ ಶಕ್ತಿಗಳ ಈ ಬೇಜವಾಬ್ದಾರಿ ನಡವಳಿಕೆಯು ಮೂಲ ಅಪರಾಧ ಮತ್ತು ಅದರಿಂದ ಆಗಲಿರುವ ಪರಿಣಾಮಗಳನ್ನು ಗೌಣ ಮಾಡುತ್ತಿದೆ.

ಪ್ರಜ್ವಲ್ ರೇವಣ್ಣನ ತಾತ, ತಂದೆ, ತಾಯಿ, ಅಣ್ಣ, ಚಿಕ್ಕಪ್ಪ, ಚಿಕ್ಕಮ್ಮ ಇವರುಗಳು ಪ್ರಧಾನ ಮಂತ್ರಿ, ಮುಖ್ಯಮಂತ್ರಿ, ಸಂಪುಟ ದರ್ಜೆ ಸಚಿವರು, ರಾಜ್ಯಸಭೆ, ಲೋಕಸಭೆ, ವಿಧಾನ ಸಭೆ, ವಿಧಾನ ಪರಿಷತ್ ಹಾಗೂ ಜಿಲ್ಲಾ ಪಂಚಾಯತ್ ಸದಸ್ಯತ್ವ– ಹೀಗೆ ಪ್ರಜಾಪ್ರಭುತ್ವದ ಎಲ್ಲ ಹುದ್ದೆಗಳನ್ನು, ಸರ್ಕಾರದ ಎಲ್ಲ ಸವಲತ್ತುಗಳನ್ನು ಬಳಸಿಕೊಳ್ಳುತ್ತಾ ಬಂದಿದ್ದಾರೆ. ರಾಜ್ಯದಲ್ಲೇ ಇಂತಹ ಮತ್ತೊಂದು ರಾಜಕೀಯ ಕುಟುಂಬ ಇರಲಿಕ್ಕಿಲ್ಲ. ಇಂತಹ ಕುಟುಂಬದ ಈ ಹಗರಣವು ನಮ್ಮನ್ನು 19ನೇ ಶತಮಾನದ ಊಳಿಗಮಾನ್ಯ, ಪಾಳೇಗಾರಿ, ಮಹಿಳಾ ವಿರೋಧಿ, ಪಿತೃಪ್ರಧಾನ ಸಮಾಜದ ದಿನಗಳಿಗೆ ಕೊಂಡೊಯ್ಯುತ್ತದೆ. ಈ ಕುರಿತು ಬರುತ್ತಿರುವ ತಳಮೂಲದ ಮಾಧ್ಯಮ ವರದಿಗಳು ಎಚ್. ಡಿ. ರೇವಣ್ಣ, ಪ್ರಜ್ವಲ್ ರೇವಣ್ಣ ಮತ್ತು ಅವರ ಕುಟುಂಬಸ್ಥರು ಪ್ರಜಾಪ್ರಭುತ್ವದ ಮುಸುಕಿನೊಳಗೆ, ಪ್ರಜಾಪ್ರತಿನಿಧಿಗಳೆಂಬ ಧಿರಿಸು ಧರಿಸಿ ನಡೆಸಿರುವ ಪಾಳೇಗಾರಿ ಆಡಳಿತದ ವಿವರಗಳನ್ನು ಬಯಲು ಮಾಡುತ್ತಿವೆ.

ಈ ಹಗರಣ ಬಯಲಾದ ಕೂಡಲೆ ಹಾಸನ ಕ್ಷೇತ್ರದ ಚುನಾವಣೆಯನ್ನು ಸ್ಥಗಿತಗೊಳಿಸದೆ ಆರೋಪಿಯು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಒದಗಿಸಿದ್ದು ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಮಾಡಿದ ಅಪಚಾರವಾಗಿದೆ. ಹಗರಣ ಬಯಲಾದರೂ ಐದು ದಿನಗಳು (ಏಪ್ರಿಲ್ 22ರಿಂದ 26, 2024) ಆರೋಪಿಯು ಸ್ವತಂತ್ರವಾಗಿ ಇರಲು ಬಿಟ್ಟಿದ್ದು, ಅವನ ಚಲನವಲನದ ಮೇಲೆ ಕಣ್ಗಾವಲು ಹಾಕದೆ ಇದ್ದಿದ್ದು ನೋಡಿದರೆ ಈ ಸಮಾಜದಲ್ಲಿ ಸರ್ಕಾರದ ಮೇಲೆ ವಿಶ್ವಾಸವಿಟ್ಟು ಮಹಿಳೆಯರು ಸುರಕ್ಷಿತವಾಗಿ ಇರಲು ಸಾಧ್ಯವೇ ಎಂಬ ಪ್ರಶ್ನೆ ಹುಟ್ಟು ಹಾಕಿದೆ. ಬೇರೆ ಬೇರೆ ವರ್ಗಗಳು, ವೃತ್ತಿಗಳು, ಪ್ರದೇಶಗಳಿಗೆ ಸೇರಿದ ನೂರಾರು ಜನ ಮಹಿಳೆಯರ ಮೇಲೆ ಜನಪ್ರತಿನಿಧಿಗಳು ನಡೆಸಿರುವ ಈ ಅಪರಾಧದ ಗಹನತೆಯು ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಎತ್ತಿ ಹಿಡಿಯಬೇಕಾದ ಸರ್ಕಾರಕ್ಕೆ, ರಾಜಕೀಯ ನಾಯಕರಿಗೆ ಅರ್ಥವಾಗಿಲ್ಲವೇ ಎಂಬ ಅನುಮಾನ ಮೂಡುತ್ತದೆ.

ಈಗ ಪ್ರತಿದಿನದ ಆರೋಪ–ಪ್ರತ್ಯಾರೋಪಗಳು, ಜಾತಿ ಆಧರಿತ ಹೇಳಿಕೆಗಳು, ರಾಜಕೀಯ ನಾಯಕರ ಲಿಂಗತ್ವ ಸೂಕ್ಷ್ಮತೆ ಇಲ್ಲದ ಹೇಳಿಕೆಗಳು, ಸಂತ್ರಸ್ತರನ್ನೇ ಅಪರಾಧಿಗಳಂತೆ ಬಿಂಬಿಸುವ ಸಮೂಹ ಮಾಧ್ಯಮಗಳ ವರದಿಗಳು ಸಾಮಾಜಿಕ ಸ್ವಾಸ್ಥ್ಯವನ್ನು, ಮಾನಸಿಕ ನೆಮ್ಮದಿಯನ್ನು ಹಾಳುಮಾಡಿವೆ. ಸಂತ್ರಸ್ತರ ಘನತೆಯನ್ನು ಕುಂದಿಸುತ್ತಿವೆ. ಸಂತ್ರಸ್ತರು ಈಗ ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿದ್ದು ದೂರು ಕೊಡುವುದಕ್ಕೆ ಹಿಂಜರಿಯುತ್ತಿದ್ದಾರೆ. ಸರೀಕರ ಎದುರು ಕಾಣಿಸಿಕೊಳ್ಳುವುದು ಕಷ್ಟವಾಗಿದೆ. ಗುರುತು ಬಯಲಾದ ಸಂತ್ರಸ್ತರ ಕುಟುಂಬಗಳು ತೀವ್ರ ಮಾನಸಿಕ ಯಾತನೆಗೆ ಗುರಿಯಾಗಿವೆ. ಕುಟುಂಬ ಸದಸ್ಯರು ಮತ್ತು ಮಕ್ಕಳು ಈ ಪರಿಸ್ಥಿತಿಯನ್ನು ಅರ್ಥೈಸಲಾಗದೆ ಕ್ಷೋಭೆಗೆ ತುತ್ತಾಗಿದ್ದಾರೆ. ಹಲವಾರು ಕುಟುಂಬಗಳು ಮನೆ ಮತ್ತು ಊರು ತೊರೆದಿವೆ ಎನ್ನಲಾಗಿದೆ. ಮೂರ್ನಾಲ್ಕು ಮಹಿಳೆಯರು ಆತ್ಮಹತ್ಯೆಗೆ ಪ್ರಯತ್ನಿಸಿದ ವರದಿಗಳು ಕೇಳಿಬಂದಿವೆ. ಆ ವಿಡಿಯೋಗಳು ಲಕ್ಷಾಂತರ ಜನರನ್ನು ತಲುಪಿರುವುದರಿಂದ ಅವು ಯುವಜನರು, ಕಾಮುಕರು ಮತ್ತು ಮಕ್ಕಳ ಮೇಲೆ ಬೀರಬಹುದಾದ ಪರಿಣಾಮ ಘೋರವಾಗಲಿದೆ. ಇದೊಂದು ಗಂಭೀರ ಸಾಮಾಜಿಕ ಮತ್ತು ಮಾನಸಿಕ ಸಮಸ್ಯೆಯಾಗುತ್ತಿದೆ.

ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಈ ನಾಡಿನ ಜವಾಬ್ದಾರಿಯುತ ನಾಗರಿಕರಾದ ನಾವು ಈ ಕೆಳಗಿನ ಬೇಡಿಕೆಗಳನ್ನು ಆಗ್ರಹಪೂರ್ವಕವಾಗಿ ಮಂಡಿಸುತ್ತಿದ್ದೇವೆ.

1. ಆರೋಪಿ ಪ್ರಜ್ವಲ್ ರೇವಣ್ಣ ಎಲ್ಲಿದ್ದರೂ ಪತ್ತೆಮಾಡಿ ಈ ಕೂಡಲೇ ಬಂಧಿಸಬೇಕು. ಐಟಿ ಕಾಯಿದೆ, ಐಪಿಸಿ ಕಾಯಿದೆಗಳ ಅಡಿಯಲ್ಲಿ ಮೊಕದ್ದಮೆ ಹೂಡಬೇಕು.
2. ಸಂತ್ರಸ್ತ ಮಹಿಳೆಯರು ಭೀತಿ ಇಲ್ಲದೆ ದೂರು ನೀಡುವಂತಹ ವಾತಾವರಣ ನಿರ್ಮಾಣ ಮಾಡಬೇಕು. ರಾಜ್ಯದ ಮುಖ್ಯಸ್ಥರಾಗಿ ತಾವು ಸಂತ್ರಸ್ತ ಮಹಿಳೆಯರನ್ನು ಉದ್ದೇಶಿಸಿ ಧೈರ್ಯ ತುಂಬುವ ಮಾತುಗಳನ್ನು ಹೇಳಬೇಕು. ಸಂತ್ರಸ್ತರಿಗೆ ತೊಂದರೆ ಕೊಡುವ,

ಪುಟ 4 ಕ್ಕೆ

ರಾಜ್ಯ ಸರಕಾರ ಸಂವೇದನಾಶೀಲವಾಗಿ ಕ್ರಮ ವಹಿಸಲಿ

ಮುಖ್ಯಮಂತ್ರಿಗಳಿಗೆ ಪ್ರಜ್ಞಾವಂತ ನಾಗರಿಕರ ಪತ್ರ

ಪುಟ 3 ರಿಂದ


ದೂರು ನೀಡದಂತೆ ತಡೆಯೊಡ್ಡುವ, ದೂರು ಹಿಂತೆಗೆದುಕೊಳ್ಳುವಂತೆ ಒತ್ತಡ ತರುವ, ಸಂತ್ರಸ್ತರ ಕುರಿತು ಅವಹೇಳನ– ಅಪಪ್ರಚಾರ ಮಾಡುವ, ಸಂತ್ರಸ್ತರ ಮಕ್ಕಳು ಹಾಗೂ ಕುಟುಂಬದವರಿಗೆ ತೊಂದರೆ ನೀಡುವ ಯಾರದೇ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ತಾವು ಮಾಧ್ಯಮಗಳ ಮೂಲಕ ಪ್ರಕಟಣೆ ನೀಡಬೇಕು. ಈ ಭರವಸೆ ತುಂಬುವ ಹೇಳಿಕೆಯನ್ನು ವಿಡಿಯೋ ಮೂಲಕವೂ ಬಿಡುಗಡೆ ಮಾಡಬೇಕು.

3. ಹಗರಣ ಕುರಿತು ಆರೋಪ–ಪ್ರತ್ಯಾರೋಪಗಳಲ್ಲಿ ತೊಡಗಿರುವ ರಾಜಕೀಯ ನಾಯಕರ ನಡವಳಿಕೆಗೆ ನೀವು ಕಡಿವಾಣ ಹಾಕಬೇಕು. ಹಗರಣವನ್ನು ಗಂಭೀರವಾಗಿ ಪರಿಗಣಿಸಿ, ಸಮರ್ಥ ತನಿಖೆಗೆ ಅವಕಾಶ ಮಾಡಿಕೊಡುವಂತೆ ರಾಜಕೀಯ ನಾಯಕರಿಗೆ ಸೂಚನೆ ನೀಡಬೇಕು.
4. ಎಸ್‌ಐಟಿ ತನಿಖೆಯು ಕಾಯಿದೆಯ ಅನುಸಾರ ಕಾಲಮಿತಿಯೊಳಗೆ ನಡೆಯಬೇಕು. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 173ಕ್ಕೆ 2018ರಲ್ಲಿ ತಂದಿರುವ ತಿದ್ದುಪಡಿಯ ಅತ್ಯಾಚಾರ ಪ್ರಕರಣಗಳ ತನಿಖೆಯನ್ನು ಎರಡು ತಿಂಗಳ ಒಳಗೆ ಮುಗಿಸಬೇಕು ಎನ್ನುತ್ತದೆ. ಹಾಗೂ 60 ದಿನಗಳ ಒಳಗಾಗಿ ತನಿಖೆ ಮುಗಿಯದಿದ್ದಲ್ಲಿ ಆರೋಪಿಯ ಜಾಮೀನು ಪಡೆಯಲು ಅವಕಾಶ ಕಲ್ಪಿಸುತ್ತದೆ. ಹಾಗಾಗಿ ಕಾಲಮಿತಿಯ ತನಿಖೆಯನ್ನು ಪ್ರಕಟಿಸಬೇಕು.
5. ಈ ಲೈಂಗಿಕ ಕೃತ್ಯಗಳ ಚಿತ್ರೀಕರಣದಲ್ಲಿ ಪ್ರಜ್ವಲ್ ಜೊತೆಗೆ ಭಾಗಿ ಆಗಿರಬಹುದಾದವರನ್ನು ಪತ್ತೆಮಾಡಿ ಮೊಕದ್ದಮೆ ಹೂಡಬೇಕು.
6. ಈ ವಿಡಿಯೋಗಳು ತಮ್ಮ ಬಳಿ ಇದ್ದವೆಂದು ಹಲವಾರು ತಿಂಗಳುಗಳಿಂದ ಹೇಳುತ್ತಿರುವ ಪ್ರಜ್ವಲ್ ರೇವಣ್ಣನ ಕಾರು ಚಾಲಕ ಕಾರ್ತಿಕ್‌ನನ್ನು ಕೂಡಲೇ ಬಂಧಿಸಬೇಕು.
7. ಈ ವಿಡಿಯೋಗಳು ತಮ್ಮ ಬಳಿ ಇದ್ದವೆಂದು ಹೇಳಿದ ಬಿಜೆಪಿ ನಾಯಕ ಬಿ. ದೇವರಾಜೇಗೌಡ ಮತ್ತು ಕಾರ್ತಿಕ್ ವಿರುದ್ಧ ಈ ಕೆಳಗಿನ ಕೃತ್ಯಗಳಿಗಾಗಿ ಗಂಭೀರ ಪ್ರಕರಣಗಳನ್ನು ದಾಖಲಿಸಬೇಕು: ಈ ಹಗರಣವನ್ನು ಮುಚ್ಚಿಟ್ಟಿದ್ದಕ್ಕೆ, ಆರೋಪಿಯು ತಪ್ಪಿಸಿಕೊಳ್ಳಲು ಪರೋಕ್ಷವಾಗಿ ಅವಕಾಶ ಮಾಡಿಕೊಟ್ಟಿದ್ದಕ್ಕೆ, ಕಾನೂನು ಪಾಲಕರ ಕೈತಪ್ಪಿಸಿ ವಿಡಿಯೋಗಳು ಸಮಾಜಘಾತುಕರ ಕೈಗೆ ಸಿಗುವಂತೆ ಮಾಡಿದಕ್ಕೆ, ನೂರಾರು ಮಹಿಳೆಯರ ಮತ್ತು ಅವರ ಕುಟುಂಬದವರ ಬದುಕಿನ ಘನತೆಗೆ ಕುಂದು ತಂದಿರುವುದಕ್ಕೆ, ಸಾಮಾಜಿಕ ಸ್ವಾಸ್ಥ್ಯವನ್ನು ಹಾಳು ಮಾಡಿದ್ದಕ್ಕೆ ಚುನಾವಣೆಯ ಮೇಲೆ ಈ ಹಗರಣವು ಪ್ರತಿಕೂಲ ಪರಿಣಾಮ ಬೀರುವಂತೆ ಸಂಚು ರೂಪಿಸಿದ್ದಕ್ಕೆ ಸೂಕ್ತ ಕಾನೂನುಗಳ ಅಡಿಯಲ್ಲಿ ಮೊಕದ್ದಮೆ ಹೂಡಬೇಕು.
8. ವಿಡಿಯೋಗಳನ್ನು ಸಾರ್ವಜನಿಕರಿಗೆ ಹಂಚಿದವರ ವಿರುದ್ಧ ಮಾನವಹಕ್ಕುಗಳಿಗೆ ಧಕ್ಕೆ ತಂದಿರುವುದು, ಸಾಮಾಜಿಕ ಸ್ವಾಸ್ಥ್ಯವನ್ನು ಕದಡುವುದು, ಚುನಾವಣೆಯನ್ನು ಹಾಳು ಮಾಡಲು ಸಂಚು ಮಾಡಿರುವ ಆರೋಪದ ಮೇಲೆ ಮೊಕದ್ದಮೆ ಹೂಡಬೇಕು.
9. ವಿಡಿಯೋಗಳ ಕುರಿತು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಮತ್ತು ರಾಜ್ಯ ಅಧ್ಯಕ್ಷರಿಗೆ ಬಿ.ದೇವರಾಜೇಗೌಡ ಬರೆದಿರುವುದಾಗಿ ಹೇಳುತ್ತಿರುವ ಪತ್ರಗಳನ್ನು ಆಧರಿಸಿ, ಆ ಇಬ್ಬರು ರಾಜಕೀಯ ನಾಯಕರು ಈ ಕುರಿತು ಪೊಲೀಸರಿಗೆ ಮಾಹಿತಿ ನೀಡಿಲ್ಲದೆ ಇರುವುದಕ್ಕೆ ಅವರುಗಳನ್ನೂ ಸಂಚಿನ ಭಾಗವಾಗಿ ಪರಿಗಣಿಸಬೇಕು.
10. ಕೆಲವು ವಿಡಿಯೋಗಳು ಐದಾರು ವರ್ಷಗಳಷ್ಟು ಹಳೆಯವು ಎಂದು ಎಚ್. ಡಿ. ರೇವಣ್ಣ ಹೇಳಿರುವುದು ವರದಿಯಾಗಿದೆ. ಅಷ್ಟು ವರ್ಷಗಳಿಂದ ನಡೆಯುತ್ತಿರುವ ಈ ಲೈಂಗಿಕ ವಿಕೃತಿಯನ್ನು ಮುಂದುವರೆಯಲು ಬಿಟ್ಟಿರುವುದರಿಂದ ಅವರ ಕುಟುಂಬದ ಎಲ್ಲ ಸದಸ್ಯರನ್ನು ಈ ಕೃತ್ಯದ ಸಹವರ್ತಿ(ಚಿಛಿಛಿಠಿಟಠಿಟುಛಿಜ)ಗಳೆಂದು ಪರಿಗಣಿಸಿ ಅವರ ಮೇಲೆಯೂ ಮೊಕದ್ದಮೆ ಹೂಡಬೇಕು. ತಂದೆ ಮತ್ತು ಮಗ ಇಬ್ಬರೂ ಭಾಗಿಯಾಗಿರುವುದರಿಂದ ಪ್ರಜ್ವಲ್‌ನ ತಾಯಿಯನ್ನೂ ವಿಚಾರಣೆಗೆ ಗುರಿಪಡಿಸಬೇಕು. ಸಂತ್ರಸ್ತರು ಅತ್ಯಾಚಾರ ನಡೆದಿದೆ ಎಂದು ಹೇಳಲಾದ ಮನೆಗಳಲ್ಲಿ ಆರೋಪಿಯ ತಾಯಿಯೂ ನೆಲೆಸಿದ್ದು, ಈ ಕೃತ್ಯ ಮೇಲಿಂದ ಮೇಲೆ ನಡೆದಿರುವುದರಿಂದ ತಾಯಿಯನ್ನು ಕೃತ್ಯದ ಸಹವರ್ತಿ ಮಾಡಬೇಕು.
11. ಏಪ್ರಿಲ್ 22, 2024ರಂದು ವಿಡಿಯೋಗಳು ಬಹಿರಂಗವಾಗಿವೆ. ಏಪ್ರಿಲ್ 25ಕ್ಕೆ ರಾಜ್ಯ ಮಹಿಳಾ ಆಯೋಗವು ತನಿಖೆಗೆ ಶಿಫಾರಸ್ಸು ಮಾಡಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದೆ. ಆದರೂ ಏಪ್ರಿಲ್ 27ರಂದು ಆರೋಪಿಯು ದೇಶ ಬಿಟ್ಟು ಪರಾರಿಯಾಗಿರುವುದು ಗೃಹ ಇಲಾಖೆಯ ಮತ್ತು ಇಂಟೆಲಿಜೆನ್ಸ್ ವಿಭಾಗದ ವೈಫಲ್ಯವನ್ನು ತೋರಿಸುತ್ತದೆ. ಆದ್ದರಿಂದ ಈ ಇಲಾಖೆಗಳ ಸಂಬಂಧಿಸಿದ ಅಧಿಕಾರಿಗಳನ್ನು ಈ ಕೂಡಲೇ ವಜಾ ಮಾಡಿ, ವಿಚಾರಣೆ ನಡೆಸಬೇಕು.
12. ಸುಮಾರು ಒಂದು ವರ್ಷದ ಹಿಂದೆಯೇ ಪ್ರಜ್ವಲ್ ರೇವಣ್ಣ 86 ಮಾಧ್ಯಮ ಸಂಸ್ಥೆಗಳು ಮತ್ತು ಮೂವರು ವ್ಯಕ್ತಿಗಳು ತನ್ನ ವಿರುದ್ಧ ಯಾವುದೇ ಮಾನಹಾನಿಕರ ವರದಿ, ವಿಡಿಯೋ, ಚಿತ್ರ ಪ್ರಸಾರ ಮಾಡಬಾರದೆಂದು ತಡೆಯಾಜ್ಞೆ ಪಡೆದಿದ್ದಾನೆ. ಒಬ್ಬ ಜನಪ್ರತಿನಿಧಿ ಹೀಗೆ ದೀರ್ಘಕಾಲದ ತಡೆಯಾಜ್ಞೆಯನ್ನು ಪಡೆಯುವುದು ಜನರ ಮಾಹಿತಿಯ ಹಕ್ಕಿನ ಉಲ್ಲಂಘನೆಯಾಗುತ್ತದೆ. ಜನಪ್ರತಿನಿಧಿಯು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ, ಜನಪ್ರತಿನಿಧಿ ಕಾಯಿದೆಗೆ ವಿರುದ್ಧವಾಗಿ ನಡೆದುಕೊಂಡಲ್ಲಿ ಅದನ್ನು ತಿಳಿದುಕೊಳ್ಳುವ ಹಕ್ಕು ಎಲ್ಲ ಪ್ರಜೆಗಳಿಗೆ ಇರುತ್ತದೆ. ತನ್ನ ವೈಯಕ್ತಿಕ ವ್ಯವಹಾರಗಳೂ ಕೂಡ ಜನರ ಹಿತಾಸಕ್ತಿಗೆ ಮಾರಕವಾಗದಂತೆ ಇಟ್ಟುಕೊಳ್ಳಬೇಕಾದ್ದು ಜನಪ್ರತಿನಿಧಿಯ ಕರ್ತವ್ಯ. ಹೀಗಿರುವಾಗ ತನ್ನ ಹುಳುಕುಗಳನ್ನು ಮುಚ್ಚಿಟ್ಟುಕೊಳ್ಳಲು ಪಡೆದ ಈ ತಡೆಯಾಜ್ಞೆಯಿಂದ ಜನರ ಹಕ್ಕಿನ ಉಲ್ಲಂಘನೆಯಾಗಿದ್ದು ಜನರ ಹಕ್ಕುಗಳ ಸಂರಕ್ಷಕನಾಗಿರುವ (ಕಸ್ಟೋಡಿಯನ್) ರಾಜ್ಯ ಸರ್ಕಾರವು ಈ ಕುರಿತು ಮೊಕದ್ದಮೆ ದಾಖಲಿಸಬೇಕು. ಜನರ ಮಾಹಿತಿಯ ಹಕ್ಕನ್ನು ಎತ್ತಿ ಹಿಡಿಯಬೇಕು.
13. ಎಚ್.ಡಿ. ರೇವಣ್ಣ ಕುಟುಂಬವು ಹಾಸನ ಜಿಲ್ಲೆಯ ಕಂದಾಯ ಇಲಾಖೆ, ಪೊಲೀಸ್ ಇಲಾಖೆಗಳಲ್ಲಿ ಆಯಕಟ್ಟಿನ ಜಾಗಗಳಲ್ಲಿ ತಮಗೆ ಬೇಕಾದ ಅಧಿಕಾರಿಗಳನ್ನು ನೇಮಕ ಮಾಡಿಸಿಕೊಂಡು ಅನೇಕ ಭೂವ್ಯವಹಾರಗಳನ್ನು ನಡೆಸುತ್ತಿದೆ ಎಂಬ ಆರೋಪಗಳಿವೆ. ಅಂತಹ ಅಧಿಕಾರಿಗಳು ಅದೇ ಸ್ಥಾನದಲ್ಲಿ ಮುಂದುವರೆದರೆ ನಿಷ್ಪಕ್ಷಪಾತ ತನಿಖೆಗೆ ಅಡ್ಡಿಯಾಗುತ್ತಾರೆ. ಈ ಅಧಿಕಾರಿಗಳನ್ನು ಬಳಸಿಕೊಂಡು ಸಂತ್ರಸ್ತರು ದೂರು ನೀಡದಂತೆ ತಡೆಯುವ ಅಥವಾ ಬೆದರಿಸುವ ಸಾಧ್ಯತೆಗಳಿವೆ. ಆದ್ದರಿಂದ, ಇವರಿಂದ ನೇಮಕಗೊಂಡಿರುವ ಅಧಿಕಾರಿಗಳನ್ನು ಎಲ್ಲ ಈ ಕೂಡಲೆ ವರ್ಗಾವಣೆ ಮಾಡಬೇಕು.
14. ಎಸ್‌ಐಟಿ ತನಿಖೆ ಪೂರ್ಣಗೊಳ್ಳುವವರೆಗೆ ಎಚ್.ಡಿ. ರೇವಣ್ಣ ಅವರ ವಿಧಾನ ಸಭೆ ಸದಸ್ಯತ್ವವನ್ನು ತಾತ್ಕಾಲಿಕವಾಗಿ ರದ್ದುಪಡಿಸಬೇಕು. ಇದು ಇದುವರೆಗೂ ನಡೆದಿಲ್ಲದಿರುವ ಹೇಯ ಪ್ರಕರಣವಾಗಿದ್ದು, ಇದರ ವಿಕೃತಿಯ ಪ್ರಮಾಣ ಮತ್ತು ಸಂತ್ರಸ್ತರ ಸಂಖ್ಯೆ ಬೃಹತ್ತಾಗಿದೆ. ಇಲ್ಲಿ ಸರ್ಕಾರದ ಸವಲತ್ತುಗಳ ದುರ್ಬಳಕೆ ಮತ್ತು ಸ್ಥಾನಮಾನದ ದುರ್ಬಳಕೆ ಗಂಭೀರವಾಗಿದೆ. ಹಾಗಾಗಿ ಇದನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಕಾನೂನಿನ ವ್ಯಾಪ್ತಿಯಲ್ಲಿ ಮಾತ್ರ ಪರಿಗಣಿಸದೆ ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕಿದೆ.
15. ಈ ಆರೋಪಿಗಳ ನಡೆಯು ಸಂವಿಧಾನ ವಿರೋಧಿ, ಪ್ರಜಾಪ್ರಭುತ್ವ ವಿರೋಧಿ ಕೃತ್ಯವಾಗಿದೆ. ಆ ನಿಟ್ಟಿನಲ್ಲಿ ಸಂವಿಧಾನಾತ್ಮಕ ಹುದ್ದೆಗೆ ಎಸಗಿದ ಅಪಚಾರಕ್ಕೆ, ಸರ್ಕಾರಿ ಬಂಗ್ಲೆಯನ್ನು ಅಪರಾಧಕ್ಕೆ ಕೃತ್ಯಕ್ಕೆ ಬಳಸಿರುವುದಕ್ಕೆ ಮೊಕದ್ದಮೆ ಹೂಡಬೇಕು ಮತ್ತು ಈ ಕುಟುಂಬಕ್ಕೆ ಒದಗಿಸಲಾಗಿರುವ ಎಲ್ಲ ಸರ್ಕಾರಿ ಸವಲತ್ತುಗಳನ್ನು ಈ ಕೂಡಲೆ ಹಿಂದಕ್ಕೆ ಪಡೆಯಬೇಕು.
16. ಈ ಹಗರಣವು ಭುಗಿಲೆದ್ದಿರುವ ಸಂದರ್ಭದಲ್ಲಿ ಎಚ್.ಡಿ. ದೇವೇಗೌಡ ಮತ್ತು ಎಚ್.ಡಿ. ಕುಮಾರಸ್ವಾಮಿ ತಮ್ಮನ್ನು ಈ ಹಗರಣಕ್ಕೆ ತಳಕು ಹಾಕುವಂತಹ ಯಾವುದೇ ವರದಿ ಮಾಡಬಾರದೆಂದು ಸಾಮಾಜಿಕ ಮಾಧ್ಯಮಗಳು, ಮುದ್ರಣ, ಟಿವಿ, ಡಿಜಿಟಲ್ ಮಾಧ್ಯಮಗಳ ವಿರುದ್ಧ ನ್ಯಾಯಾಲಯದ ತಡೆಯಾಜ್ಞೆ ತಂದಿದ್ದಾರೆ. ಇದು ಮಾಧ್ಯಮಗಳ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜೆಗಳ ಮಾಹಿತಿ ಹಕ್ಕಿನ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತದೆ.




ಒಂದು ಕಡೆ ಮಾಧ್ಯಮಗಳ ಸ್ವತಂತ್ರ ವರದಿಗೆ ತಡೆಹಾಕಿಸಿರುವ ಎಚ್.ಡಿ.ಕುಮಾರಸ್ವಾಮಿ ಮತ್ತೊಂದು ಕಡೆ ತಾವೇ ಈ ಹಗರಣ ಕುರಿತಾಗಿಯೇ ಪತ್ರಿಕಾಗೋಷ್ಠಿ ನಡೆಸುತ್ತಾರೆ. ಇದು ಅಪ್ರಜಾಸತ್ತಾತ್ಮಕ ನಡೆಯಾಗಿದೆ. ಕಾನೂನಿನ ಮೂಲಕ ಏಕಮುಖಿ ವರದಿಗಾರಿಕೆಯನ್ನು ಮಾಡಿಸಲಾಗುತ್ತಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ತಡೆಯಾಜ್ಞೆ ತೆರವುಗೊಳಿಸಬೇಕು. ಈ ಇಬ್ಬರು ಅರ್ಜಿದಾರರಿಗೆ ಆರೋಪಿಯು ಹತ್ತಿರದ ಸಂಬಂಧಿಯಾಗಿದ್ದು, ಅವರದೇ ಪಕ್ಷದ ಲೋಕಸಭೆ ಚುನಾವಣೆ ಅಭ್ಯರ್ಥಿಯೂ ಆಗಿದ್ದಾನೆ. ಪ್ರಜೆಗಳ ಹಕ್ಕಿನ ರಕ್ಷಕನಾಗಿರುವ (ಕಸ್ಟೋಡಿಯನ್ ಆಫ್ ಸಿಟಿಜನ್ಸ್ ರೈಟ್ಸ್) ರಾಜ್ಯ ಸರ್ಕಾರವು ಈ ತಡೆಯಾಜ್ಞೆ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

ಪ್ರಜಾಪ್ರಭುತ್ವದ ಉಳಿವಿಗೆ, ಪಿತೃಪ್ರಧಾನ ಸಮಾಜದ ನಿರ್ಮೂಲನೆಗೆ, ಸಂವಿಧಾನದತ್ತವಾದ ಮಹಿಳೆಯರ ಘನತೆಯನ್ನು ಎತ್ತಿ ಹಿಡಿಯುವುದಕ್ಕಾಗಿ ನೀವು ನಮ್ಮ ಆಗ್ರಹಗಳನ್ನು ಪರಿಗಣಿಸಬೇಕು. ಬಹಳ ಎಚ್ಚರಿಕೆಯಿಂದ ಬರೆದಿರುವ ಮೇಲಿನ ಪ್ರತಿಯೊಂದು ಅಂಶಗಳಿಗೂ ಸೂಕ್ತವಾದ ಕಾನೂನು ಕ್ರಮ ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು. (ಈ ಬಹಿರಂಗ ಪತ್ರಕ್ಕೆ ಡಾ.ಜಿ. ರಾಮಕೃಷ್ಣ, ಡಾ. ವಿಜಯ, ಡಾ. ವಸುಂದರ ಭೂಪತಿ, ಕೆ ಷರೀಫಾ ಸೇರಿದಂತೆ ಸುಮಾರು ನೂರಕ್ಕೂ ಹೆಚ್ಚು ಜನರು ಸಮ್ಮತಿ ಸೂಚಿಸಿದ್ದಾರೆ.)



NDA seat distribution



INDIA seat distribution



ಆಂಧ್ರಪ್ರದೇಶದಲ್ಲಿ ಹಿನ್ನಡೆಯತ್ತ ಬಿಜೆಪಿ

ಲೋಕಸಭೆ ಮತ್ತು ಆಂಧ್ರಪ್ರದೇಶ ವಿಧಾನಸಭೆಗೆ ಮೇ 13 ರಂದು ನಾಲ್ಕನೇ ಹಂತದಲ್ಲಿ ಚುನಾವಣೆಗಳು ನಡೆದಿವೆ. ಶೇ. 81.86 ರಷ್ಟು ದಾಖಲೆಯ ಮತದಾನ ದಾಖಲಾಗಿದ್ದು, ಕೆಲವು ಸ್ಥಳಗಳಲ್ಲಿ ಮೇ 14 ರಂದು ಬೆಳಗಿನ ಜಾವ 2 ಗಂಟೆಯವರೆಗೆ ಮತದಾನ ಮುಂದುವರಿದಿತ್ತು. 2019 ರಲ್ಲಿ ನಡೆದ ಚುನಾವಣೆಯಲ್ಲಿ ಶೇ. 79.84 ರಷ್ಟು ಮತದಾನವಾಗಿತ್ತು. ಈ ಚುನಾವಣೆಯಲ್ಲಿ ಯಾವುದೇ ರಾಜ್ಯದಲ್ಲಿ ಚಲಾವಣೆಯಾದ ಗರಿಷ್ಠ ಶೇಕಡಾವಾರು ಮತ ಇದಾಗಿದೆ ಎಂದು ಮುಖ್ಯ ಚುನಾವಣಾಧಿಕಾರಿ ತಿಳಿಸಿದ್ದಾರೆ. ಎನ್‌ಡಿಎ ಮತ್ತು ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಎರಡೂ ಕಡೆಯವರು ಹೆಚ್ಚಿನ ಮತದಾನವನ್ನು ತಮ್ಮ ಪರವಾಗಿವೆ ಎಂದು ನಂಬಿಕೊಂಡಿವೆ. ಇಂಡಿಯಾ ಮೈತ್ರಿಕೂಟದ ಭಾಗವಾಗಿ ಸಿಪಿಐ(ಎಂ), ಸಿಪಿಐ ತಲಾ ಒಂದು ಸಂಸದೀಯ ಮತ್ತು ತಲಾ ಎಂಟು ವಿಧಾನಸಭಾ ಸ್ಥಾನಗಳಲ್ಲಿ ಸ್ಪರ್ಧಿಸಿದ್ದು, ಉಳಿದ ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿವೆ. ಇಲ್ಲಿ ಬಿಜೆಪಿಗೆ ಹಿನ್ನಡೆಯಾಗಲಿದೆ ಎಂಬುದನ್ನು ಕಾಣಬಹುದಾಗಿದೆ.

ಸಾಮಾನ್ಯವಾಗಿ, ಪ್ರಾದೇಶಿಕ ಪಕ್ಷಗಳು ಆಯಾ ಪ್ರದೇಶದ ಜನರ ಆಕಾಂಕ್ಷೆಗಳಿಂದ ಹೊರಹೊಮ್ಮುತ್ತವೆ ಮತ್ತು ತಮ್ಮ ರಾಜ್ಯದ ಹಿತಾಸಕ್ತಿಗಳನ್ನು ಸಾಧಿಸಲು ಸ್ಪರ್ಧಿಸುತ್ತವೆ. 1982 ರಲ್ಲಿ 'ಆಂಧ್ರದ ಆತ್ಮ ಗೌರವ' ಎಂಬ ಘೋಷಣೆಯೊಂದಿಗೆ ತೆಲುಗು ದೇಶಂ ಪಕ್ಷವನ್ನು ಸ್ಥಾಪಿಸಲಾಯಿತು. 1980ರ ದಶಕದಲ್ಲಿ ಎನ್.ಟಿ.ರಾಮರಾವ್, ಜ್ಯೋತಿಬಸು, ರಾಮಕೃಷ್ಣ ಹೆಗಡೆ, ಫಾರೂಕ್ ಅಬ್ದುಲ್ಲಾ ಮುಂತಾದ ನಾಯಕರು ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ಕಠೋರ ಧೋರಣೆಗಳ ವಿರುದ್ಧ ಪ್ರತಿಭಟನೆಗಳನ್ನು ನಡೆಸಿ, ಕೇಂದ್ರದ ಮೇಲೆ ಒತ್ತಡ ತಂದು, ಕೇಂದ್ರ–ರಾಜ್ಯ ಸಂಬಂಧಗಳಲ್ಲಿ ಬದಲಾವಣೆ, ಮತ್ತು ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡಲು ಸರ್ಕಾರಿಯಾ ಆಯೋಗ ನೇಮಕ ಹೀಗೆ ಹಲವು ಬದಲಾವಣೆಗಳನ್ನು ತಂದದ್ದು ಗೊತ್ತೇ ಇದೆ.

18ನೇ ಲೋಕಸಭೆ ಚುನಾವಣೆಗೆ ಹಾಗೂ ಆಂಧ್ರಪ್ರದೇಶದ ವಿಧಾನಸಭೆ ಚುನಾವಣೆಗೆ ವೈಎಸ್ ಆರ್ ಕಾಂಗ್ರೆಸ್ ಪಕ್ಷ, ತೆಲುಗು ದೇಶಂ ಮತ್ತು ಜನಸೇನಾ ಪಕ್ಷಗಳು ಬಿಡುಗಡೆ ಮಾಡಿರುವ ಚುನಾವಣಾ ಪ್ರಣಾಳಿಕೆಗಳನ್ನು ನೋಡಿದರೆ, ಮೂರು ಪ್ರಾದೇಶಿಕ ಪಕ್ಷಗಳು ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದ ಪ್ರಮುಖ ಅಂಶಗಳನ್ನು ನಿರ್ಲಕ್ಷಿಸಿವೆ. ಕಳೆದ ಹತ್ತು ವರ್ಷಗಳಿಂದ ವಿಶೇಷ ಸ್ಥಾನಮಾನ, ವಿಭಜನಾ ಕಾಯ್ದೆಯ ಖಾತ್ರಿ ಅನುಷ್ಠಾನ, ವಿಶಾಖಪಟ್ಟಣ ಉಕ್ಕು ಸ್ಥಾವರ ಖಾಸಗೀಕರಣ, ಪೋಲಾವರಂ ನಿರ್ಮಾಣ ಇತ್ಯಾದಿ ವಿಷಯಗಳಲ್ಲಿ ಹೋರಾಟ ಮಾಡಿ ಹಕ್ಕುಗಳನ್ನು ಸಾಧಿಸುವ ಕುರಿತ ಅಂಶಗಳು ಈ ಮೂರು ಪ್ರಾದೇಶಿಕ ಪಕ್ಷಗಳ ಚುನಾವಣಾ ಪ್ರಣಾಳಿಕೆಯಲ್ಲಿ ಕಾಣಿಸಿಕೊಂಡಿಲ್ಲ.

ರಾಜ್ಯಕ್ಕೆ ಬಿಜೆಪಿ ಮಾಡಿದ ಎಲ್ಲಾ ದ್ರೋಹಗಳ ಹೊರತಾಗಿಯೂ, ತೆಲುಗು ದೇಶಂ ಪಕ್ಷ (ಟಿಡಿಪಿ) ಮತ್ತು ಜನಸೇನಾ ಪಕ್ಷ (ಜೆಎಸ್‌ಪಿ) ಅದರೊಂದಿಗೆ ಮೈತ್ರಿ ಮಾಡಿಕೊಂಡು ಎನ್.ಡಿ.ಎ. ಕೂಟದಲ್ಲಿ ಪಾಲುದಾರರಾಗಿದ್ದಾರೆ. ಕಳೆದ ದಶಕದಲ್ಲಿ ವೈಎಸ್ ಜಗನ್ಮೋಹನ್ ರೆಡ್ಡಿ ಅವರ ಆಡಳಿತಾರೂಢ ವೈ. ಎಸ್.ಆರ್. ಕಾಂಗ್ರೆಸ್ ಪಕ್ಷ ಬಿಜೆಪಿಗೆ ಅಧೀನವಾಗಿ ನಡೆದುಕೊಂಡಿದೆ. ಈ ಪಕ್ಷಗಳು ರಾಷ್ಟ್ರಪತಿ ಮತ್ತು ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿದವು ಮತ್ತು ಸಿಎಎ ಸೇರಿದಂತೆ ಬಹುತೇಕ ಎಲ್ಲಾ ಮಸೂದೆಗಳನ್ನು ಅನುಮೋದಿಸಿದವು. ಈಗ ಈ ಮೂರು ಪ್ರಾದೇಶಿಕ ಪಕ್ಷಗಳು ಕೇಸರಿ ಪಕ್ಷದ ಜೊತೆ ಕೈಜೋಡಿಸಿವೆ. ಒಂದೆಡೆ ಎನ್.ಡಿ.ಎ. ಪಾಳಯ ಮತ್ತೊಂದೆಡೆ ವೈ. ಎಸ್.ಆರ್. ಕಾಂಗ್ರೆಸ್ ಪಕ್ಷ.

ಆಂಧ್ರಪ್ರದೇಶದಲ್ಲಿ ನಡೆಯುತ್ತಿರುವ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ವೈಎಸ್ ಆರ್ ಕಾಂಗ್ರೆಸ್ ಪಕ್ಷ ಏಕಾಂಗಿಯಾಗಿ ಸ್ಪರ್ಧೆ ಮಾಡುತ್ತಿದೆ. ಇದು ವಿಧಾನಸಭೆ ಮತ್ತು ಲೋಕಸಭೆಯ ಎಲ್ಲಾ ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ವಿಧಾನಸಭೆಯ ಒಟ್ಟು 175 ಸ್ಥಾನಗಳಿದ್ದು ಎನ್.ಡಿ.ಎ. ಕೂಟದಲ್ಲಿ ತೆಲುಗು ದೇಶಂ ಪಾರ್ಟಿ 144, ಬಿಜೆಪಿ 10 ಮತ್ತು ಪವನ್ ಕಲ್ಯಾಣ್ ನಾಯಕತ್ವದ ಜನ ಸೇನಾ ಪಾರ್ಟಿ 21 ಸ್ಥಾನಗಳಲ್ಲಿ ಸ್ಪರ್ಧೆ ಮಾಡುತ್ತಿವೆ. ಲೋಕಸಭೆಯ ಒಟ್ಟು 25 ಸ್ಥಾನಗಳ ಪೈಕಿ ಟಿಡಿಪಿ 17, ಬಿಜೆಪಿ 6, ಜನ ಸೇನಾ ಪಾರ್ಟಿ 2 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡುತ್ತಿವೆ.

ಇಂಡಿಯಾ ಮೈತ್ರಿ ಕೂಟದ ಸ್ಪರ್ಧೆ

ಈ ಎರಡೂ ಕೂಟಗಳನ್ನು ವಿರೋಧಿಸಲು ಸಿಪಿಐ(ಎಂ) ನಿರ್ಧರಿಸಿತು ಮತ್ತು ಈ ಸಂಬಂಧ ಸಿಪಿಐ ಜೊತೆ ಮಾತುಕತೆ ನಡೆಸಿತು. ಪರಸ್ಪರ ಸ್ಪರ್ಧೆಗಳನ್ನು ತಪ್ಪಿಸಲು ಮತ್ತು ಒಗ್ಗಟ್ಟಿನಿಂದ ಸ್ಪರ್ಧಿಸಲು ಕ್ಷೇತ್ರಗಳನ್ನು ಗುರುತಿಸಲು ಒಪ್ಪಂದಕ್ಕೆ ಕಾರಣವಾಯಿತು. ಬಳಿಕ ಉಭಯ ಪಕ್ಷಗಳು ಕಾಂಗ್ರೆಸ್ ಪಕ್ಷದ ಜೊತೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದ್ದವು. ಎರಡೂ ಕಮ್ಯುನಿಸ್ಟ್ ಪಕ್ಷಗಳು ತಲಾ ಒಂದು ಸಂಸದೀಯ ಕ್ಷೇತ್ರ ಮತ್ತು ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದು, ಉಳಿದ ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುವುದಾಗಿ ಅವರು ಒಪ್ಪಂದಕ್ಕೆ ಬಂದರು. ಈ ಒಪ್ಪಂದದ ಭಾಗವಾಗಿ, ಸಿಪಿಐ(ಎಂ) ಅರಕು



(ಎಸ್ಟಿ) ಸಂಸದೀಯ ಸ್ಥಾನ ಮತ್ತು ಕುರುಪಾಂ (ಎಸ್ಟಿ), ಗಜುವಾಕ, ರಂಪಚೋಡವರಂ (ಎಸ್ಟಿ), ಗನ್ನವರಂ, ವಿಜಯವಾಡ ಸೆಂಟ್ರಲ್, ಮಂಗಳಗಿರಿ, ನೆಲ್ಲೂರು ನಗರ ಮತ್ತು ಪಾಣ್ಯಂ ವಿಧಾನಸಭಾ ಸ್ಥಾನಗಳಿಗೆ ಸ್ಪರ್ಧಿಸಿದೆ. ಬಿಜೆಪಿ, ಅದರ ಮಿತ್ರಪಕ್ಷಗಳಾದ ಟಿಡಿಪಿ ಮತ್ತು ಜನಸೇನೆ ಹಾಗೂ ನಿರಂಕುಶ ವೈಎಸ್‌ಆರ್ ಕಾಂಗ್ರೆಸ್ ಪಕ್ಷವನ್ನು ಸೋಲಿಸುವಂತೆ ಎರಡೂ ಕಮ್ಯುನಿಸ್ಟ್ ಪಕ್ಷಗಳು ಜನರಿಗೆ ಕರೆ ನೀಡಿದವು. ಇದರ ಪರಿಣಾಮವಾಗಿ, ಆಂಧ್ರಪ್ರದೇಶದಲ್ಲಿ, ಚುನಾವಣಾ ಸನ್ನಿವೇಶವು ಎನ್.ಡಿ.ಎ. ಮೈತ್ರಿಕೂಟ, ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಮತ್ತು ಇಂಡಿಯಾ ಮೈತ್ರಿಕೂಟ ಇವುಗಳ ನಡುವಿನ ಸ್ಪರ್ಧೆಯಾಗಿದೆ.

ವ್ಯಾಪಕವಾಗಿ ಹಣ ಮತ್ತು ಮದ್ಯ ಹಂಚಿಕೆ

ಚುನಾವಣೆಯ ಹಿಂದಿನ ವಾರದಲ್ಲಿ ಹಣ ಮತ್ತು ಮದ್ಯವನ್ನು ವ್ಯಾಪಕವಾಗಿ ಹಂಚಲಾಯಿತು. ಹಿಂದಿನ ಯಾವುದೇ ಚುನಾವಣೆಯಲ್ಲಿ ಹಂಚಿಕೆಯಾದ ಮೊತ್ತಕ್ಕಿಂತ ಈ ಮೊತ್ತವು ಅತ್ಯಧಿಕವಾಗಿದೆ ಎಂದು ವರದಿಗಳು ಹೇಳುತ್ತವೆ. ಅನೇಕ ಯುವ ಮತದಾರರು ಈ ಚುನಾವಣೆಯ ಸಮಯದಲ್ಲಿ ಮೊದಲ ಬಾರಿಗೆ ಮದ್ಯವನ್ನು ಕುಡಿಯಲು ಪ್ರಾರಂಭಿಸಿರಬಹುದು. ಆಳುವ ವರ್ಗಗಳ ಇಂತಹ ಚಟುವಟಿಕೆಗಳು ಸಮಾಜದ ಸಂಸ್ಕೃತಿಯ ಮೇಲೆ ದುಷ್ಪರಿಣಾಮ ಬೀರುತ್ತವೆ.

ಸಂಯೋಜಿತ ರಾಜ್ಯ ಇಬ್ಭಾಗವಾದ ನಂತರ ಕಳೆದ ಒಂದು ದಶಕದಿಂದ ಬಿಜೆಪಿ ಆಂಧ್ರಪ್ರದೇಶದ ಜನತೆಗೆ ದ್ರೋಹ ಬಗೆಯುತ್ತಿದೆ. 2014ರ ಚುನಾವಣೆಯಲ್ಲಿ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡುವುದಾಗಿ ಭರವಸೆ ನೀಡಿದ್ದರೂ ಕೇಂದ್ರ ಬಿಜೆಪಿ ಸರ್ಕಾರ ಅದನ್ನು ಈಡೇರಿಸುವಲ್ಲಿ ವಿಫಲವಾಗಿದೆ. ರಾಜ್ಯ ಪುನರ್ ವಿಂಗಡಣೆ ವಿಧೇಯಕ ಅಂಗೀಕಾರದ ವೇಳೆ ಸಂಸತ್ತಿನಲ್ಲಿ ನೀಡಿದ್ದ ಭರವಸೆಗಳನ್ನು ಇದುವರೆಗೂ ಈಡೇರಿಸಿಲ್ಲ. ಮರುಸಂಘಟನೆ ಕಾಯಿದೆಯಲ್ಲಿ ಭರವಸೆ ನೀಡಲಾದ ಕೇಂದ್ರೀಯ ಶಿಕ್ಷಣ ಮತ್ತು ವೈದ್ಯಕೀಯ ಸಂಸ್ಥೆಗಳು ಅಪೂರ್ಣವಾಗಿ ಉಳಿದಿವೆ, ಹಲವು ಸಂಸ್ಥೆಗಳಿಗೆ ಕಟ್ಟಡಗಳ ಕೊರತೆಯಿದೆ.

ಪೊಲಾವರಂ ನೀರಾವರಿ ಯೋಜನೆ

ವಿಭಜಿತ ಆಂಧ್ರಪ್ರದೇಶದ ಜೀವನಾಡಿ ಎಂದು ಬಣ್ಣಿಸಲಾಗುತ್ತಿರುವ ಪೊಲಾವರಂ ನೀರಾವರಿ ಯೋಜನೆಗಾಗಿ ತಮ್ಮ ಜಮೀನು, ಮನೆ, ಜೀವ ತ್ಯಾಗ ಮಾಡಿದ ಲಕ್ಷಾಂತರ ಆದಿವಾಸಿಗಳು ಮತ್ತು ಇತರ ನಿರಾಶ್ರಿತ ಜನರನ್ನು ಕೇಂದ್ರ ಸರ್ಕಾರವೂ ನಿರ್ಲಕ್ಷಿಸಿದೆ. ಪ್ರತಿ ಬಾರಿ ಚುನಾವಣೆ ಬಂದಾಗ ಬಿಜೆಪಿ, ಟಿಡಿಪಿ, ಜನಸೇನೆ ಮತ್ತು ವೈಸಿಪಿ ಪೊಲವರಂ ಭರವಸೆಯ ಮೇಲೆ ಪ್ರಚಾರ ಮಾಡುವುದು ವಾಡಿಕೆಯಾಗಿದೆ. ರಾಜ್ಯ ವಿಭಜನೆಯ ನಂತರ ಮೂರನೇ ಬಾರಿಗೆ ನಡೆಯುತ್ತಿರುವ ಈ ಚುನಾವಣೆಯಲ್ಲಿ ನಾಲ್ಕೂ ಪಕ್ಷಗಳು ಪೊಲಾವರಂ ಅನ್ನು ಪ್ರಮುಖ ಚರ್ಚೆಯ ವಿಷಯವನ್ನಾಗಿ ಮಾಡಿಕೊಂಡಿವೆ. ಇದರಲ್ಲಿ ಬಿಜೆಪಿ ಮತ್ತು ಪ್ರಧಾನಿ ಮೋದಿ ಮುಂಚೂಣಿಯಲ್ಲಿದ್ದಾರೆ. 2014ರಲ್ಲಿ ಟಿಡಿಪಿ ಮತ್ತು ಜನಸೇನೆ ಜತೆ ಮೈತ್ರಿ ಮಾಡಿಕೊಂಡಿದ್ದ ಮೋದಿ, ಪೊಲವರಂ ನಿರ್ಮಿಸುವುದಾಗಿ ಭರವಸೆ ನೀಡಿದ್ದರು.

ಹಿಂದಿನ ಟಿಡಿಪಿ ಮತ್ತು ಪ್ರಸ್ತುತ ವೈಸಿಪಿ ಸರ್ಕಾರಗಳು ಪೊಲವರಂ ಅನ್ನು ತಮ್ಮ ಅವಕಾಶವಾದಿ, ರಾಜಕೀಯ ಮತ್ತು ವೈಯಕ್ತಿಕ ಹಿತಾಸಕ್ತಿಗಾಗಿ ಬಳಸಿಕೊಂಡ ಹಲವು ಉದಾಹರಣೆಗಳಿವೆ. ಕೇಂದ್ರದಿಂದ ಆಗಬೇಕಿದ್ದ ಪೊಲವರಂ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಟಿಡಿಪಿ ಸರಕಾರ ವಿಶೇಷ ಸ್ಥಾನಮಾನವನ್ನು ಕೈಬಿಟ್ಟಿರುವುದು ಅಂದಿನ ಬೆಳವಣಿಗೆಗಳಿಂದ ಅರ್ಥವಾಗುತ್ತದೆ. ಸ್ಥಾನಮಾನಕ್ಕೆ ಸಮಾನವಾದ ವಿಶೇಷ ಪ್ಯಾಕೇಜ್ ಎಂದು ಬಿಜೆಪಿ ಹೇಳಿದ್ದರೂ ಪ್ರಾಯೋಗಿಕವಾಗಿ ಏನನ್ನೂ ನೀಡದಿದ್ದರೂ ಟಿಡಿಪಿ ನಾಲ್ಕು ವರ್ಷಗಳ ಕಾಲ ಎನ್‌ಡಿಎ ಮತ್ತು ಕೇಂದ್ರ ಸರ್ಕಾರದಲ್ಲಿ ಮುಂದುವರೆಯಿತು. ಕಳೆದ ವರ್ಷ ಕೇಂದ್ರ ಮೋಸ ಮಾಡಿರುವುದು ಹೊರಬಿದ್ದಿದೆ. ಬೀದಿಗಿಳಿದು ಪ್ರತಿಭಟನೆಯನ್ನೂ ನಡೆಸಲಾಯಿತು. ಈಗ ಮತ್ತೆ ಅದೇ ಬಿಜೆಪಿ ಮೈತ್ರಿಕೂಟ ಸೇರಿದ್ದಾರೆ. ಬಿಜೆಪಿ ರಾಜ್ಯಕ್ಕೆ ಅನ್ಯಾಯ ಮಾಡಿದೆ ಎಂದು ಜಸಸೇನಾ ಹೇಳುತ್ತಿದೆ. ಐದು ವರ್ಷಗಳಲ್ಲಿ ವೈಎಸ್ ಆರ್ ಸರ್ಕಾರವು ಪೋಲವರಂ ಸುತ್ತ ರಕ್ಷಣಾಗೋಡೆ ನಿರ್ಮಾಣಕ್ಕೆ ಮತ್ತೆ ಟೆಂಡರ್ ಕರೆದಿದೆ. ಕೇಂದ್ರದಿಂದ ಹಣ ಬಂದಿಲ್ಲ. ಮೋದಿ ಕೊಟ್ಟಿದ್ದಾರೆ ಎನ್ನಲಾದ ಹಣವೆಲ್ಲ ಗುತ್ತಿಗೆದಾರರ ಜೇಬು ಸೇರಿದೆ. ಜನರ ಮೇಲೆ ಸೆಸ್ ವಿಧಿಸುತ್ತೇವೆ ಮತ್ತು ನಿರಾಶ್ರಿತರಿಗೆ 33 ಸಾವಿರ ಕೋಟಿ ರೂ. ಗಳ ಪರಿಹಾರಕ್ಕಾಗಿ ಹಣ ಸಂಗ್ರಹಿಸುತ್ತೇವೆ ಎಂದು ಪವನ್ ಕಲ್ಯಾಣ್ ಹೇಳುತ್ತಾರೆ. ಕಳೆದ ಚುನಾವಣೆ ವೇಳೆ ಬಾಬು ಸರ್ಕಾರ ಪೊಲವರಂ ಅನ್ನು ಎಟಿಎಂ ಆಗಿ ಬಳಸಿಕೊಂಡಿದೆ ಎಂದು ಆರೋಪಿಸಿದ ಮೋದಿ, ಈಗ ವೈಸಿಪಿ ಸರ್ಕಾರಕ್ಕೆ ಈ ಯೋಜನೆ ಬಗ್ಗೆ ಪ್ರಾಮಾಣಿಕತೆ ಇಲ್ಲ, ಭ್ರಷ್ಟಾಚಾರ ನಡೆದಿದೆ ಎಂದು ಹೇಳುತ್ತಿದ್ದಾರೆ. ಮೇಲಿಂದ ಮೇಲೆ ಬಿಜೆಪಿ ಸರ್ಕಾರ ಇರುವುದರಿಂದ ಟಿಡಿಪಿ ಮತ್ತು ವೈಸಿಪಿ ಭ್ರಷ್ಟಾಚಾರ ಅವ್ಯಾಹತವಾಗಿ ಸಾಗಿದೆ ಎಂದು ಜನ ಭಾವಿಸಿದ್ದಾರೆ. ಈ ನಿದರ್ಶನದಿಂದ ಬಿಜೆಪಿ ಪೊಲವರಂ ವಿಚಾರದಲ್ಲಿ ಬೂಟಾಟಿಕೆ ಎಂಬುದು ಸ್ಪಷ್ಟವಾಗಿದೆ.

ಪುಟ 7 ಕ್ಕೆ

ಕೇರಳ ಮುಖ್ಯಮಂತ್ರಿ ವಿರುದ್ಧ ಭ್ರಷ್ಟಾಚಾರದ ಆರೋಪ:

ಕಾಂಗ್ರೆಸ್–ಯುಡಿಎಫ್‌ಗೆ ತೀವ್ರ ಮುಖಭಂಗ

ಕೇರಳ ರಾಜ್ಯದ ಮುಖ್ಯಮಂತ್ರಿ ಕಾಂ.ಪಿಣರಾಯ್ ವಿಜಯನ್ ಮತ್ತು ಅವರ ಮಗಳ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದ ಕಾಂಗ್ರೆಸ್ ಮತ್ತು ಯು.ಡಿ.ಎಫ್.ಗೆ ತೀವ್ರವಾದ ಮುಖಭಂಗವಾಗಿದೆ. ಕಾಂಗ್ರೆಸ್ ರಾಜ್ಯ ನಾಯಕರು ಮತ್ತು ಯು.ಡಿ.ಎಫ್.ನ ಬೆಂಬಲದೊಂದಿಗೆ ಕಾಂಗ್ರೆಸ್ ಶಾಸಕ ಮ್ಯಾಥ್ಯೂ ಕುಜಲನಾಡನ್ ವಿಚಕ್ಷಣ ನ್ಯಾಯಾಲಯ (ವಿಜಿಲೆನ್ಸ್ ಕೋರ್ಟ್) ದಲ್ಲಿ ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಆಗ್ರಹಿಸಿ ಸಲ್ಲಿಸಿದ್ದ ಅರ್ಜಿಯನ್ನು, ತಿರುವನಂತಪುರಂ ವಿಚಕ್ಷಣ ನ್ಯಾಯಾಲಯವು, ಪದೇ ಪದೇ ಕೇಳಿದರೂ ಸಹ ಆರೋಪಕ್ಕೆ ಪೂರಕವಾಗಿ ಯಾವುದೇ ಸಾಕ್ಷ್ಯಾಧಾರಗಳನ್ನು ನೀಡಲು ಅರ್ಜಿದಾರರು ವಿಫಲವಾಗಿದ್ದಾರೆ ಮತ್ತು ಸಾಕ್ಷ್ಯಗಳೆಂದು ಕೊಟ್ಟ ದಾಖಲೆಗಳಲ್ಲಿ ಯಾವುದೇ ಹುರುಳಿಲ್ಲ ಎಂಬ ಕಾರಣಕ್ಕಾಗಿ ವಜಾಗೊಳಿಸಿದೆ. ಅಷ್ಟು ಮಾತ್ರವಲ್ಲ ನ್ಯಾಯಾಲಯವು ಈ ಪ್ರಕರಣದಲ್ಲಿ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಬರುವಂತಹ ಯಾವುದೇ ಅಕ್ರಮಗಳು ಕಂಡುಬಂದಿಲ್ಲ ಎಂದೂ ಹಾಗೂ ಮ್ಯಾಥ್ಯೂ ಕುಜಲನಾಡನ್ ಅವರ ಅರ್ಜಿಯು ರಾಜಕೀಯ ಪ್ರೇರಿತ ಎಂದು ನಿಸ್ಸಂದಿಗ್ಧವಾಗಿ ಘೋಷಿಸಿದೆ.



ಗಣಿಗಾರಿಕೆ ಕಂಪನಿಯಾದ ಸಿ.ಎಂ.ಆರ್.ಎಲ್. ತಾನು ಅಕ್ರಮ ಲಾಭಗಳಿಸಿಕೊಳ್ಳುವ ಉದ್ದೇಶದಿಂದ ಪಿಣರಾಯಿಯವರ ಮಗಳಾದ ಟಿ.ವೀಣಾ ಅವರ ‘ಎಕ್ಸಾಲಾಜಿಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್’ಗೆ 1.72 ಕೋಟಿ ರೂಪಾಯಿಗಳನ್ನು ಪಾವತಿಸಿದೆ, ಅರ್ಥಾತ್ ಲಂಚ ನೀಡಿದೆ ಎಂದೂ, ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಈ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸಿದ್ದು, ಈ ಪ್ರಕರಣದಲ್ಲಿ ವಿಚಕ್ಷಣ ನ್ಯಾಯಾಲಯವು ನೇರ ತನಿಖೆ ನಡೆಸಬೇಕೆಂದು ಕೋರಿ ಮ್ಯಾಥ್ಯೂ ಕುಜಲನಾಡನ್ ಅರ್ಜಿ ಸಲ್ಲಿಸಿದ್ದರು.

ಈ ಸಂಬಂಧ ನ್ಯಾಯಾಲಯವು ಮತ್ತೆ ಮತ್ತೆ ಕೇಳಿದರೂ ಸಹ ಕುಜಲನಾಡನ್ ಅವರಾಗಲಿ, ಅವರ ಬೆನ್ನಿಗೆ ನಿಂತಿರುವ ಇತರ ಕಾಂಗ್ರೆಸ್ ಅಥವಾ ಯು.ಡಿ.ಎಫ್. ನಾಯಕರಾಗಲಿ, ತಮ್ಮ ಆರೋಪಗಳನ್ನು ಸಮರ್ಥಿಸುವಂತಹ ಯಾವುದೇ ಪುರಾವೆಗಳನ್ನು ನೀಡಲು ವಿಫಲರಾದರು. ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್. ಪರವಾಗಿರುವ ಟಿ.ವಿ.ಗಳು, ಪತ್ರಿಕೆಗಳ ಸಹಾಯದಿಂದ, ಆಧಾರರಹಿತ ಆರೋಪಗಳನ್ನು ಅಪಪ್ರಚಾರಗಳನ್ನು ಮಾಡಿ, ಸಿಪಿಐ(ಎಂ) ಮತ್ತು ಎಲ್.ಡಿ.ಎಫ್. ಹೆಸರಿಗೆ ಕಳಂಕ ಮೆತ್ತಬಹುದು, ಜನರ ಮನಸ್ಸಿನಲ್ಲಿ ಗುಮಾನಿಗಳನ್ನು ಹುಟ್ಟುಹಾಕಬಹುದು ಎಂಬ ರಾಜಕೀಯ ಕುತಂತ್ರವೊಂದು ನ್ಯಾಯಾಲಯದ ಈ ತೀರ್ಪಿನಿಂದ ವಿಫಲವಾದಂತಾಗಿದೆ. ಅರ್ಜಿಯ ಪರಿಗಣನೆಯ ಸಂದರ್ಭದಲ್ಲಿ, ನ್ಯಾಯಾಲಯವು ಪುರಾವೆಗಳನ್ನು ಹಾಜರುಪಡಿಸುವಂತೆ ಅರ್ಜಿದಾರ ಮ್ಯಾಥ್ಯೂ ಕುಜಲನಾಡನ್ ಅವರನ್ನು ಪದೇ ಪದೇ ಒತ್ತಾಯಿಸಿತ್ತು. ಆದರೆ, ಕುಜಲನಾಡನ್ ಅವರು ಸಾಕ್ಷ್ಯ ಒದಗಿಸುವ ಬದಲು ಅರ್ಜಿಯ ಮರು ವಿಚಾರಣೆ ನಡೆಸುವಂತೆ ಕೋರುತ್ತಾ ಬಂದಿದ್ದರು. ಅಂತಿಮವಾಗಿ ಕುಜಲನಾಡನ್ ಅವರ ಈ ಮನವಿಯನ್ನು ವಜಾಗೊಳಿಸಿದ ನ್ಯಾಯಾಲಯ, ಸಾಕ್ಷ್ಯಾಧಾರಗಳಿಲ್ಲದೆ ನ್ಯಾಯಾಲಯದ ಮೆಟ್ಟಿಲೇರಲು ಕಾರಣವೇನು ಎಂದು ಕುಜಲನಾಡನ್ ಅವರನ್ನು ತೀಕ್ಷ್ಣವಾಗಿ ಪ್ರಶ್ನಿಸಿತು. ಮತ್ತು ಗಣಿಗಾರಿಕೆ ಕಂಪನಿಯಾದ ಸಿ.ಎಂ.ಆರ್. ಎಲ್. ಮುಂದಿಟ್ಟಿದ್ದ ಎಲ್ಲಾ ಬೇಡಿಕೆಗಳನ್ನು ರಾಜ್ಯ ಸರ್ಕಾರವು ತಿರಸ್ಕರಿಸಿದೆ ಎಂದು ಗಮನಿಸಿರುವುದನ್ನು ಉಲ್ಲೇಖಿಸಿತು. ಈ ಪ್ರಕರಣದಲ್ಲಿ ಇನ್ನೊಂದು ತಮಾಷೆಯ ಮತ್ತು ವಿಷಾದದ ವಿಷಯವಿದೆ. ಅದೇನೆಂದರೆ ತಮ್ಮ ಆರೋಪಕ್ಕೆ ಆಧಾರವಾದ ಸಾಕ್ಷ್ಯಾಧಾರಗಳು ಎಂದು ಅರ್ಜಿದಾರರು 28 ದಾಖಲೆಗಳನ್ನು ಸಲ್ಲಿಸಿದ್ದರು. ಈ ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಾಲಯವು ಅವುಗಳಲ್ಲಿ ಒಂದಾದರೂ ದಾಖಲೆಯು ಅರ್ಜಿದಾರರ ಆರೋಪಗಳನ್ನು ಸಮರ್ಥಿಸುವಂತಿಲ್ಲ ಎಂದು ಸ್ಪಷ್ಟವಾಗಿ ಘೋಷಿಸಿತು. ಇದಲ್ಲದೆ, ಗಣಿ ಕಂಪನಿ ಮತ್ತು ರಾಜ್ಯ ಸರ್ಕಾರದ ಒಡೆತನದ ಕೇರಳ ಮಿನರಲ್ಸ್ ಮತ್ತು ಮೆಟಲ್ಸ್ ಲಿಮಿಟೆಡ್ ನಡುವೆ ಯಾವುದೇ ಒಪ್ಪಂದಗಳಿಲ್ಲ. ಹೆಚ್ಚುವರಿಯಾಗಿ, ಗಣಿ ಕಂಪನಿಗೆ ಭೂ ಮಿತಿಯನ್ನು ಮೀರಿ ಭೂಮಿ ನೀಡಲು ಮುಖ್ಯಮಂತ್ರಿ ಮಧ್ಯಸ್ಥಿಕೆ ವಹಿಸಿದ್ದಾರೆ ಎಂದು ಅರ್ಜಿದಾರರು ಆರೋಪಿಸಿದ್ದು, ಈ ಪ್ರಸಂಗದಲ್ಲಿ ಮುಖ್ಯಮಂತ್ರಿ ಭಾಗಿಯಾಗಿರುವುದು ಕೇವಲ ಅಧಿಕೃತ ಕಾರ್ಯವಿಧಾನದ ಭಾಗವಾಗಿದೆ ಎಂದು ನ್ಯಾಯಾಲಯವು ಈ ಆರೋಪವನ್ನು ತಳ್ಳಿಹಾಕಿತು.

ಅರ್ಜಿ ಪರಿಶೀಲನೆಯ ಹಂತದಲ್ಲಿ ನ್ಯಾಯಾಲಯವು ನಿರ್ದಿಷ್ಟವಾಗಿ ಮೂರು ಪ್ರಶ್ನೆಗಳನ್ನು ಕೇಳಿತು:

1) ರಾಜ್ಯ ಸರಕಾರದ ಒಂದು ಸಾರ್ವಜನಿಕ ಉದ್ದಿಮೆಯಾದ ಕೆ.ಎಂ.ಎಂ.ಎಲ್. ಮತ್ತು ಗಣಿಗಾರಿಕೆ ಸಂಸ್ಥೆ ಸಿ.ಎಂ.ಆರ್.ಎಲ್. ನಡುವೆ ಒಪ್ಪಂದವಿದೆಯೇ?
2) ವೀಣಾ ಟಿ. ಅವರಿಗೆ ಮಾಡಿದ ಪಾವತಿಗಳಿಗೆ ಸಿ.ಎಂ.ಆರ್.ಎಲ್. ಅಕ್ರಮವಾಗಿ ಅನುಕೂಲಗಳನ್ನು ಪಡೆದಿದೆಯೇ?
3) ಸಿ.ಎಮ್.ಆರ್.ಎಲ್.ಗೆ ಅನುಕೂಲವಾಗುವಂತೆ ಸರ್ಕಾರ ಕಾನೂನುಬಾಹಿರವಾಗಿ ಭೂ ಮಿತಿಯನ್ನು ಸಡಲಿಸಿದೆ ಎಂದು ಸಾಬೀತುಪಡಿಸಲು ಪುರಾವೆಗಳಿವೆಯೇ?

ಉತ್ತರ, ಇಲ್ಲ ಇಲ್ಲ ಇಲ್ಲ. ಹೀಗಾಗಿ ಅರ್ಜಿದಾರರು ತಮ್ಮ ವಾದವನ್ನು ಸಾಬೀತುಪಡಿಸಲು ಪುರಾವೆಗಳನ್ನು ಒದಗಿಸುವುದರಲ್ಲಿ ಸಂಪೂರ್ಣ ವಿಫಲರಾದರು. ಏಕೆಂದರೆ ಅಲ್ಲಿ ಯಾವುದೇ ಅಕ್ರಮಗಳು ನಡೆದಿರಲಿಲ್ಲ.

ಈ ಪ್ರಕರಣದಲ್ಲಿ ಆರೋಪಗಳು ಬಂದಾಗ ಸ್ಪಷ್ಟವಾಗಿ ಇದೊಂದು ರಾಜಕೀಯ ಕುತಂತ್ರ ಎಂದು ಮುಖ್ಯಮಂತ್ರಿಗಳು ಹೇಳಿದರು. ಆದರೆ ಅದೇ ಸಮಯದಲ್ಲಿ ಈ ಸಂಬಂಧ ತಾವು ಯಾವುದೇ ತನಿಖೆಯನ್ನೂ ಎದುರಿಸಲು ಸಿದ್ಧ ಎಂದೂ ಘೋಷಿಸಿದ್ದರು. ಸಿಪಿಐ(ಎಂ) ನಾಯಕರು ಮತ್ತು ಎಲ್.ಡಿ.ಎಫ್. ಪ್ರಮುಖರು ಇದೇ ನಿಲುವು ತಳೆದರು. ರಾಜ್ಯದ ಮುಖ್ಯಮಂತ್ರಿಯನ್ನು ಭ್ರಷ್ಟಾಚಾರದ ಪ್ರಕರಣದಲ್ಲಿ ಸಿಲುಕಿಸಲು ಮತ್ತು ಅವರ ಹೆಸರಿಗೆ ಕಳಂಕ ತರಲು ಕೇಂದ್ರೀಯ ಸಂಸ್ಥೆಗಳು ಮತ್ತು ಕೆಲವು ಮಾಧ್ಯಮಗಳ ನೆರವಿನೊಂದಿಗೆ ಪ್ರತಿಪಕ್ಷಗಳು ನಡೆಸಿದ ರಾಜಕೀಯ ಷಡ್ಯಂತ್ರವು ಈಗ ಬಯಲಾಗಿದ್ದು, ವಿಪಕ್ಷ ನಾಯಕರು ತಮ್ಮ ಆಧಾರರಹಿತ ಆರೋಪಗಳಿಗೆ ಕ್ಷಮೆಯಾಚಿಸಬೇಕು ಎಂದು ಸಿಪಿಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ ಮಂಡಳಿ ಒತ್ತಾಯಿಸಿದೆ. ಸಂಕುಚಿತ ರಾಜಕೀಯ ಲಾಭಗಳಿಗಾಗಿ ಸುಳ್ಳು ಆರೋಪ ಮಾಡಿದವರಿಗೆ ಕ್ಷಮೆ ಕೇಳಬೇಕೆಂಬ ಸೌಜನ್ಯ ಇರುತ್ತದೆಯೇ? ●

ಅನ್ಯಾಯದ ಜೈಲುವಾಸ: ಪ್ರಬೀರ್ ರವರಿಗೆ.... ಪುಟ 2 ರಿಂದ

ಅಧಿಕಾರಿಗಳಿಗೆ ತಿಳಿಸಿರುವುದಾಗಿ ಠಾಣೆಯ ಉಸ್ತುವಾರಿ ಅಧಿಕಾರಿಗಳು ಷಾ ಆಯೋಗದ ಎದುರು ಹೇಳಿಕೆ ನೀಡಿದ್ದಾರೆ. ಆದರೆ ಸಂಜಯ್ ಗಾಂಧಿಗೆ ತಾವೇ ಖುದ್ದಾಗಿ ಯಾರನ್ನಾದರೂ ಬಂಧಿಸಿರುವುದಾಗಿ ತಿಳಿಸಲು ಅಧಿಕಾರಿಗಳು ಹೆದರಿದ್ದರು. ಅವರು ಸುಲಭದ ಹಾದಿ ಹಿಡಿದರು. ಬಂಧಿತ ಪ್ರಬೀರ್ ನನ್ನು ಶಂಕಿತನನ್ನಾಗಿ ಮಾಡಲು ಭಿಂದರ್ ನಿರ್ಧರಿಸುತ್ತಾರೆ. ಲೆಫ್ಟಿನೆಂಟ್ ಗವರ್ನರ್ ರಾತ್ರಿಯೇ ಮಧ್ಯಪ್ರವೇಶಿಸಿದರು. ಜಿಲ್ಲಾ ಮ್ಯಾಜಿಸ್ಟ್ರೇಟ್ ಪ್ರಬೀರ್ ವಿರುದ್ಧ ಮಿಸಾ ವಾರೆಂಟ್ ಹೊರಡಿಸಿದ್ದರು. ಹಳೆಯ ದಿನಾಂಕದಂದು ದಾಖಲೆಗಳನ್ನು ತಿದ್ದಿದ ಆರೋಪದಡಿಯೂ ಪ್ರಕರಣ ದಾಖಲಾಗಿದೆ. ‘ರಾಷ್ಟ್ರೀಯ ಭದ್ರತೆಗೆ ಅಪಾಯ’ ಎಂಬ ಕಾರಣಕ್ಕಾಗಿ ಪ್ರಬೀರ್ ನನ್ನು ತಿಹಾರ್ ಜೈಲಿನಲ್ಲಿ ಇರಿಸಲಾಗಿತ್ತು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಮಾಧ್ಯಮಗಳ ಸೆನ್ಸಾರ್‌ಶಿಪ್ ನಿಂದಾಗಿ ಈ ಸುದ್ದಿಯೂ ಹೊರಬೀಳಲಿಲ್ಲ.

ಪ್ರಬೀರ್ ಸ್ನಾತಕೋತ್ತರ ಕೋರ್ಸ್‌ನ ವೈವಾವೋಸಿಗೆ ಹಾಜರಾಗಬೇಕಾಗಿತ್ತು. ಅವರು ಪೆರೋಲ್ ಕೇಳಲು ಪತ್ರವನ್ನು ಕಳುಹಿಸಿದರು ಆದರೆ ಅದನ್ನು ತಿರಸ್ಕರಿಸಲಾಯಿತು. ದೆಹಲಿ ಹೈಕೋರ್ಟ್‌ನ ಪ್ರಬಲ ಮಧ್ಯಪ್ರವೇಶದ ನಂತರ ವೈವಾ ಮಂಡಿಸಿದರು. ಅದೂ ಕೈಗೆ ತೊಡಿಸಿದ ಬೇಡಿ ತೆಗೆಯದೆ. ಅಷ್ಟರಲ್ಲಿ ತಿಹಾರ್ ಜೈಲಿನಿಂದ ಯಾರೋ ಒಬ್ಬರು ಪರಾರಿಯಾದರು. ಇದರೊಂದಿಗೆ ಮಾರ್ಚ್ 1976 ರಲ್ಲಿ ಪ್ರಬೀರ್ ಅವರನ್ನು ಆಗ್ರಾ ಜೈಲಿಗೆ ಸ್ಥಳಾಂತರಿಸಲಾಯಿತು. ಅಲ್ಲಿ 25 ದಿನಗಳ ಕಾಲ ಏಕಾಂತದಲ್ಲಿ ಇರಿಸಲಾಗಿತ್ತು.

ಪ್ರಬೀರ್ ಬಿಡುಗಡೆಗೆ ಕೋಲಾಹಲ ಎದ್ದಿತ್ತು. ಸಿಪಿಐ–ಎಂ ರಾಜ್ಯಸಭಾ ಸದಸ್ಯ ಸಮರ್ ಮುಖರ್ಜಿ ಅವರು ಕೇಂದ್ರ ಗೃಹ ಸಚಿವ ಓಂ ಮೆಹ್ತಾ ಅವರಿಗೆ ಪತ್ರ ಬರೆದರು. ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಜೈಲು ಶಿಕ್ಷೆಯನ್ನು ಮರುಪರಿಶೀಲಿಸಲು ನಿರಾಕರಿಸಿದರು. ಸಿಪಿಐ(ಎಂ) ನಾಯಕರು ಮತ್ತು ಹೆಚ್ಚಿನ ಸಂಸದರು ತೀವ್ರ ಒತ್ತಡ ಹೇರುತ್ತಲೇ ಇದ್ದರು. ಅಂತಿಮವಾಗಿ, 25 ಸೆಪ್ಟೆಂಬರ್ 1976 ರಂದು, ಒಂದು ವರ್ಷದ ನಂತರ, ಸರ್ಕಾರವು ಪ್ರಬೀರ್ ಅವರನ್ನು ಬಿಡುಗಡೆ ಮಾಡಿತು.

"ಅನಿಯಮಿತ ಅಧಿಕಾರದ ದುರಹಂಕಾರವು ನ್ಯಾಯವನ್ನು ನಿರ್ವಹಿಸುವ ಆರೋಪ ಹೊತ್ತಿರುವ ಅಧಿಕಾರಿಗಳ ಬೆನ್ನುಮೂಳೆ ಇಲ್ಲದಿರುವಿಕೆಯೊಂದಿಗೆ ಏನಾಗುತ್ತದೆ ಎಂಬುದನ್ನು ಇದು ತೋರಿಸುತ್ತದೆ. ಈ ಕ್ರಮಗಳು ಆಡಳಿತದ ಖ್ಯಾತಿಗೆ ಶಾಶ್ವತ ಕಳಂಕವಾಗಿ ಉಳಿಯುತ್ತವೆ."

ಪ್ರಬೀರ್ ಬಂಧನದ ಎಲ್ಲಾ ಅಂಶಗಳನ್ನು ಮತ್ತು ಪೊಲೀಸ್ ಅಧಿಕಾರಿಗಳು ಸೇರಿದಂತೆ ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಿದ ನಂತರ, ನ್ಯಾಯಮೂರ್ತಿ ಷಾ ಆಯೋಗವು 26 ಏಪ್ರಿಲ್ 1978 ರಂದು ಜನತಾ ಸರ್ಕಾರಕ್ಕೆ ಸಲ್ಲಿಸಿದ ಮಧ್ಯಂತರ ವರದಿಯಲ್ಲಿ ಹೀಗೆ ಬರೆದಿದೆ:

“ಪ್ರಧಾನಿ ನಿವಾಸದಿಂದ ಸೂಚನೆಗಳನ್ನು ಪಡೆದ ಅಧಿಕಾರಿ ಕ್ಯಾಂಪಸ್‌ಗೆ ಆಗಮಿಸಿ ಅವರು ನೋಡಿದ ಮೊದಲ ಪುರುಷ ವಿದ್ಯಾರ್ಥಿಯನ್ನು ಬಂಧಿಸಿದರು. ತಾನು ಆರೋಪಿಯಲ್ಲ ಎಂದು ಗೊತ್ತಿದ್ದರೂ ಸುಳ್ಳು ಕಥೆ ಕಟ್ಟಿ ಮಿಸಾ ಅಡಿಯಲ್ಲಿ ಜೈಲು ಪಾಲಾಗಿದ್ದಾನೆ. ಇದು ಸಂಪೂರ್ಣ ಅಧಿಕಾರ ದುರುಪಯೋಗವಾಗಿದೆ. ಪುರ್ಕಾಯಸ್ಥನ ಬಂಧನ ಮತ್ತು ಮ್ಯಾಜಿಸ್ಟ್ರೇಟ್ ವಾರಂಟ್ ಹೊರಡಿಸಿದ ರೀತಿ ನ್ಯಾಯಾಂಗ ಆಡಳಿತದಲ್ಲಿ ಸಂಪೂರ್ಣ ಹದಗೆಟ್ಟಿರುವುದನ್ನು ತೋರಿಸುತ್ತದೆ. ಅಧಿಕಾರದ ಕಡಿವಾಣವಿಲ್ಲದ ದುರಹಂಕಾರ ಮತ್ತು ಜವಾಬ್ದಾರಿಯುತ ಅಧಿಕಾರಿಗಳ ಬೆನ್ನುಮೂಳೆ ಇಲ್ಲದಿರುವುದು ಸೇರಿಕೊಂಡಾಗ ಏನಾಗುತ್ತದೆ ಎಂಬುದನ್ನು ಈ ಘಟನೆ ತೋರಿಸುತ್ತದೆ. ಈ ಕ್ರಮಗಳು ಆಡಳಿತದ ಖ್ಯಾತಿಗೆ ಶಾಶ್ವತ ಕಳಂಕವಾಗಿ ಉಳಿಯುತ್ತವೆ. ಪ್ರಧಾನಿ ನಿವಾಸದಲ್ಲಿ ಯಾರನ್ನೋ ತೃಪ್ತಿಪಡಿಸಲು ಈ ಬಂಧನ ಮಾಡಲಾಗಿದೆ. ಅಧಿಕಾರವು ತಮ್ಮ ಕೈಯಲ್ಲಿದೆ ಮತ್ತು ಅವರು ಯಾರಿಗೂ ಏನನ್ನೂ ವಿವರಿಸಬೇಕಾಗಿಲ್ಲ ಎಂದು ಭಾವಿಸುವ ದುರದೃಷ್ಟಕರ ಫಲಿತಾಂಶ ಇದು.” ಎಂದು ವರದಿ ಹೇಳಿದೆ.

ಇಂದು ಪ್ರಬೀರ್ ಮತ್ತೆ ಜೈಲು ಸೇರಿ, ಏಳೂವರೆ ತಿಂಗಳ ನಂತರ ಬಿಡುಗಡೆಯಾಗಿದ್ದಾರೆ. ಏನೂ ಬದಲಾಗುವುದಿಲ್ಲ. ಭಿನ್ನಮತೀಯರನ್ನು ಹತ್ತಿಕ್ಕಲು ಏನು ಬೇಕಾದರೂ ಮಾಡಲು ಸಿದ್ಧವಿರುವ ನಾಯಕತ್ವ... ಕಾನೂನು ಬಾಹಿರವಾಗಿದ್ದರೂ ಆ ಆದೇಶಗಳನ್ನು ಪಾಲಿಸಲು ಮುಂದಾಗುವ ಅಧಿಕಾರಿಗಳು... ಪುನರಾವರ್ತಿತ ಘಟನೆಗಳು; ಮತ್ತಷ್ಟು ಭಯಾನಕ, ಮತ್ತಷ್ಟು ಭಯಾನಕ. ಆದರೆ...ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಮಾಡಿದ್ದು ಅಂತಿಮವಾಗಿ ಸಾರ್ವಜನಿಕ ಶಕ್ತಿಯ ಬಿರುಗಾಳಿಯಾಗಿ ಸರ್ಕಾರವನ್ನು ಆವರಿಸಿ ಉಸಿರುಗಟ್ಟಿಸಿತ್ತು ಎಂಬುದನ್ನು ನೆನಪಿನಲ್ಲಿಡಬೇಕು.

ಕೃಪೆ: ದೇಶಾಭಿಮಾನಿ–ಅನು: ಸಿಚಿ

ಸಂಭಾಲ್ ದೌರ್ಜನ್ಯ: ಮುಸ್ಲಿಮರೇ ಟಾರ್ಗೆಟ್
ಪೊಲೀಸರೇ ಮತದಾರರನ್ನು ಹೊಡೆದೋಡಿಸಿದರು

ನರೇಂದ್ರ ಮೋದಿ ಇತ್ತೀಚಿನ ದಿನಗಳಲ್ಲಿ ಸತ್ಯದ ಲವಲೇಶವನ್ನಾದರೂ ಹೇಳಲಾಗದ ಸ್ಥಿತಿಗೆ ತಲುಪಿದ್ದಾರೆ. ವಾರಾಣಸಿ ಲೋಕಸಭೆ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿದ ನಂತರ ನೀಡಿದ ಸಂದರ್ಶನವೊಂದರಲ್ಲಿ ಬಡಬಡಾಯಿಸಿರುವುದು ಅವರ ಸುಳ್ಳಿನ ಸರಮಾಲೆಯಲ್ಲಿ ಇತ್ತೀಚಿನ ಸೇರ್ಪಡೆಯಾಗಿದೆ. 'ಹೆಚ್ಚು ಮಕ್ಕಳ ಬಗ್ಗೆ' ಮಾತಾಡಿದ್ದು ಮುಸ್ಲಿಮರನ್ನು ಉದ್ದೇಶಿಸಿ ಅಲ್ಲ ಎಂದು ಮೋದಿ ಸಂದರ್ಶನದಲ್ಲಿ ಹೇಳಿದ್ದಾರೆ. 'ಹಿಂದೂ-ಮುಸ್ಲಿಂ ಎಂದು ತಾರತಮ್ಯ ಮಾಡಿದ ದಿನವೇ ನಾನು ಸಾರ್ವಜನಿಕ ಜೀವನದಲ್ಲಿರಲು ಅರ್ಹನಾಗುವುದಿಲ್ಲ' ಎಂದೂ ಅವರು ಹೇಳಿದ್ದಾರೆ.

ಏಪ್ರಿಲ್ 9ರಂದು ರಾಜಸ್ಥಾನದ ಬನ್ಸ್‌ವಾರಾದಲ್ಲಿ ಮೋದಿ ಮಾಡಿದ ಭಾಷಣವನ್ನು ಕೇಳಿದ ಅಥವಾ ನೋಡಿದ ಯಾರೇ ಆದರೂ ಅವರು 'ನುಸುಳುಕೋರರು' ಮತ್ತು 'ಹೆಚ್ಚು ಮಕ್ಕಳನ್ನು ಹೊಂದಿರುವವರು' ಎಂದಿದ್ದು ಮುಸ್ಲಿಮರನ್ನು ಟಾರ್ಗೆಟ್ ಮಾಡಿಯೇ ಎನ್ನುವುದು ಗೊತ್ತಾಗದೇ ಇರದು. ದೇಶದ ಸಂಪನ್ಮೂಲಗಳ ಮೇಲೆ ಮುಸ್ಲಿಮರಿಗೆ ಹಕ್ಕಿದೆ ಎಂದು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಹೇಳಿದ್ದನ್ನು ಮೋದಿ ಉಲ್ಲೇಖಿಸಿ ಈ ಮಾತನ್ನು ಹೇಳಿರುವುದರಿಂದ ಸಂದರ್ಭ ಸ್ಪಷ್ಟವಾಗಿಯೇ ಇದೆ. ವಾಸ್ತವವಾಗಿ, ಮುಸ್ಲಿಮರು ಹೆಚ್ಚು ಮಕ್ಕಳನ್ನು ಹೆರುತ್ತಾರೆ ಎನ್ನುವುದು ಮೋದಿಯ ನಿರಂತರ ಥೀಮ್ ಆಗಿದೆ. 2002ರ ಗುಜರಾತ್ ವಿಧಾನಸಭೆ ಚುನಾವಣೆ ಪ್ರಚಾರದ ಸಂದರ್ಭದಲ್ಲೇ ಮೋದಿ 'ಹಮ್ ಪಾಂಚ್, ಹಮಾರೆ ಪಚ್ಚೀಸ್' (ನಾವು ಐವರು, ನಮಗೆ ಇಪ್ಪತ್ತೈದು ಮಕ್ಕಳು) ಎಂದು ಹೇಳಿದ್ದರು. ಗಲಭೆಗಳ ನಂತರ ಮುಸ್ಲಿಮರಿಗೆ ತೆರೆಯಲಾದ ನಿರಾಶ್ರಿತರ ಶಿಬಿರಗಳು 'ಮಕ್ಕಳನ್ನು ಉತ್ಪಾದಿಸುವ ಕೇಂದ್ರಗಳಾಗಿವೆ' ಎಂದು ಆರೋಪಿಸಿದ್ದರು.

ಪ್ರಕಾಶ್ ಕಾರತ್

ಈ ಹಿಂದೂ-ಮುಸ್ಲಿಂ ಬಡಬಡಿಕೆಯೇ ಹಲವು ವರ್ಷಗಳ ನಂತರ ಮೋದಿ ಉತ್ತರ ಪ್ರದೇಶದ ಚುನಾವಣಾ ಪ್ರಚಾರದಲ್ಲಿ 'ಕಬರಿಸ್ತಾನ್' ಮತ್ತು 'ಶಂಶಾನ್ ಘಾಟ್' (ಸ್ಮಶಾನಗಳು) ಎಂದೆಲ್ಲಾ ಹೇಳುವವರೆಗೆ ಹೋಯಿತು.

ಪ್ರಧಾನ ಮಂತ್ರಿ ಮತ್ತು ಅವರ ಬಳಗವು ಮುಸ್ಲಿಮರನ್ನು ರಾಕ್ಷಸೀಕರಿಸುವುದು ಮತ್ತು ಟಾರ್ಗೆಟ್ ಮಾಡುವುದು ಅವರನ್ನು ಮತದಾನದಿಂದ ವಂಚಿತಗೊಳಿಸುವ ಸಕ್ರಿಯ ಪ್ರಯತ್ನಗಳ ಮಟ್ಟಕ್ಕೆ ಹೋಗಿದೆ. ಉತ್ತರ ಪ್ರದೇಶದ ಪಶ್ಚಿಮ ಭಾಗದ ಸಂಭಾಲ್ ಲೋಕಸಭಾ ಕ್ಷೇತ್ರದಲ್ಲಿ ಮೇ 7ರಂದು ಮೂರನೇ ಹಂತದಲ್ಲಿ ಚುನಾವಣೆ ನಡೆದಾಗ ಆಗಿದ್ದು ಅದೇ. ಸಂಭಾಲ್ ಕ್ಷೇತ್ರದ ಮುಸ್ಲಿಂ ಬಾಹುಳ್ಯವಿರುವ ಅನೇಕ ಗ್ರಾಮಗಳಲ್ಲಿ ಮತದಾನ ಮಾಡಲೆಂದು ಮತಗಟ್ಟೆಗಳಲ್ಲಿ ನಿಂತ ಮುಸ್ಲಿಮರ ಮೇಲೆ ಪೊಲೀಸರ ಗುಂಪುಗಳೇ ಆಕ್ರಮಣ ನಡೆಸಿವೆ. ಸ್ಕ್ರಾಲ್.ಇನ್ ಸುದ್ದಿ ವೆಬ್‌ಸೈಟ್‌ನಲ್ಲಿ ಇದನ್ನು ಎಳೆಎಳೆಯಾಗಿ ವರದಿ ಮಾಡಲಾಗಿದೆ.

ಮನ್ಸೂರ್‌ಪುರ, ಒವಾರಿ, ಶಹಬಾಜ್‌ಪುರ ಕಲಾನ್, ಮುಬಾರಕ್‌ಪುರ ಮತ್ತಿತರ ಗ್ರಾಮಗಳಲ್ಲಿ ಒಂದೇ ಮಾದರಿಯಲ್ಲಿ ಇಂಥ ಕೃತ್ಯ ನಡೆದಿದೆ. 30ರಿಂದ 40ರಷ್ಟು ಪೊಲೀಸರನ್ನು ಹೊಂದಿರುವ ವಾಹನಗಳ ಸಾಲು ಬೆಳಿಗ್ಗೆ 10ರಿಂದ 11 ಗಂಟೆ ನಡುವೆ ಮತದಾನ ಕೇಂದ್ರಗಳಿಗೆ ಬಂದು ಮತದಾನ ಮಾಡಲು ಸರದಿ ಸಾಲಿನಲ್ಲಿ ನಿಂತ ಮತದಾರರ ಆಧಾರ್ ಕಾರ್ಡ್ ಮತ್ತು ವೋಟರ್ ಸ್ಲಿಪ್‌ಗಳನ್ನು ಕಸಿದುಕೊಂಡರು. ಮಹಿಳೆಯರ ಸಹಿತ ಅನೇಕ ಮತದಾರರನ್ನು ಲಾಠಿಗಳು ಮತ್ತು ಫೈಬರ್ ಬೆತ್ತಗಳಿಂದ ಹೊಡೆದು ಓಡಿಸಿದರು. ಒವಾರಿಯ ಜೂನಿಯರ್ ಹೈ ಸ್ಕೂಲ್ ಮತಗಟ್ಟೆಯಲ್ಲಂತೂ ಮತದಾರರನ್ನು ಹೊಡೆದೋಡಿಸಿದ ದೃಶ್ಯಗಳ ವಿಡಿಯೋವೊಂದು ಲಭ್ಯವಿದೆ.

ಈ ಪೈಕಿ ಅನೇಕ ಮತಗಟ್ಟೆಗಳು ಅಸಮೌಲಿ ಅಸೆಂಬ್ಲಿ ಕ್ಷೇತ್ರದಲ್ಲಿವೆ. ಸಂಭಾಲ್ ಪಟ್ಟಣದ ಮುಸ್ಲಿಂ ಪ್ರದೇಶಗಳ ಮತ ಕೇಂದ್ರಗಳಲ್ಲಿ ಕೂಡ ಪೊಲೀಸರು ಮತದಾರರ ಮೇಲೆ ದೌರ್ಜನ್ಯ ನಡೆಸಿದರು. ಮುಸ್ಲಿಮೇತರರು ಹೆಚ್ಚಾಗಿರುವ ಕಡೆ ಪೊಲೀಸರ ಇಂಥ ದಬ್ಬಾಳಿಕೆ ನಡೆಯದ ಗ್ರಾಮ ಅಥವಾ ಮತದಾನ ಕೇಂದ್ರಗಳೇ ಇರಲಿಲ್ಲ ಎನ್ನುವುದು ಗಮನಾರ್ಹ.

ಸ್ಥಳೀಯ ವಿದ್ಯಮಾನವಲ್ಲ

ಅನೇಕ ಮತದಾನ ಕೇಂದ್ರಗಳನ್ನು ಕವರ್ ಮಾಡಿದ ಈ ಟಾರ್ಗೆಟೆಡ್ ಕಾರ್ಯಾಚರಣೆಯನ್ನು ಒಂದು ಸ್ಥಳೀಯ ಅಥವಾ ಪ್ರತ್ಯೇಕಿತ ಘಟನೆ ಎಂದು ಹೇಳಲಾಗದು. ಇದಕ್ಕೆ ಜಿಲ್ಲಾ ಮಟ್ಟದ ಪೊಲೀಸ್ ಅಧಿಕಾರಿಗಳ ಅನುಮೋದನೆ ಇದ್ದಿರಲೇಬೇಕು ಅಥವಾ ಅವರ ಕುಮ್ಮಕ್ಕಿನಿಂದಲೇ ನಡೆದಿರಬೇಕು. ಪೊಲೀಸ್ ದಾಳಿಗಳು 'ಮುಸ್ಲಿಂ ಮತದಾರರನ್ನು ಟಾರ್ಗೆಟ್ ಮಾಡುವ ಪಿತೂರಿಯಾಗಿದೆ' ಎಂದು ಕುಂದರ್ಕಿ ಕ್ಷೇತ್ರದ ಶಾಸಕರೂ ಆಗಿರುವ ಸಮಾಜವಾದಿ ಪಕ್ಷದ ಲೋಕಸಭಾ ಅಭ್ಯರ್ಥಿ ಜಿಯಾ ಉರ್ ರೆಹಮಾನ್ ಹೇಳಿದ್ದಾರೆ. ಸಂಭಾಲ್ ಲೋಕಸಭೆ ಕ್ಷೇತ್ರವನ್ನ 2019ರ ಚುನಾವಣೆಯಲ್ಲಿ ಸಮಾಜವಾದಿ ಪಕ್ಷ ಗೆದ್ದಿತ್ತು.



ಪೊಲೀಸರು ಮತ್ತು ಚುನಾವಣಾ ಅಧಿಕಾರಿಗಳಿಗೆ ದೂರುಗಳನ್ನು ಸಲ್ಲಿಸಿದರೂ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಈ ರೀತಿಯ ದಬ್ಬಾಳಿಕೆ ನಡೆದಿಲ್ಲ ಎಂದು ಹೇಳಿಕೆ ನೀಡುವಂತೆ ಒಬ್ಬ ಸಂತ್ರಸ್ತನಿಗೆ ಪೊಲೀಸರು ಬಲವಂತಪಡಿಸಿದ ಘಟನೆಯೂ ನಡೆದಿದೆ. ಆದಿತ್ಯನಾಥನ ಉತ್ತರ ಪ್ರದೇಶದಲ್ಲಿ ಮುಸ್ಲಿಮರು ಈಗಾಗಲೇ ಎರಡನೇ ದರ್ಜೆಯ ಪ್ರಜೆಗಳಾಗಿದ್ದಾರೆ ಎನ್ನುವುದನ್ನು ಸಂಭಾಲ್ ಘಟನೆ ತೋರಿಸುತ್ತದೆ. ಇದಕ್ಕೂ ಮುನ್ನ, ಏಪ್ರಿಲ್ 19ರಂದು ಮೊದಲ ಹಂತದ ಮತದಾನ ನಡೆದ ನಂತರ ಮತದಾರರಿಗೆ ಕಿರುಕುಳ ನೀಡಲಾಗಿತ್ತು ಹಾಗೂ ರಾಮಪುರ, ಮೊರಾದಾಬಾದ್ ಮತ್ತು ಮುಜಾಫರ್‌ಪುರ ಕ್ಷೇತ್ರಗಳ ಮುಸ್ಲಿಂ ಪ್ರದೇಶಗಳಲ್ಲಿ ಪೊಲೀಸರು ಮತದಾರರನ್ನು ತಡೆದಿದ್ದರು ಎಂದು ಸಮಾಜವಾದಿ ಪಕ್ಷದ ಅಭ್ಯರ್ಥಿಗಳು ದೂರಿದ್ದರು.

ನಿಷ್ಕ್ರಿಯ ಚುನಾವಣೆ ಆಯೋಗ

ಸಂತ್ರಸ್ತ ಮತದಾನ ಕೇಂದ್ರಗಳಲ್ಲಿ ಮರುಮತದಾನ ನಡೆಸಲು ಹಾಗೂ ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಚುನಾವಣೆ ಆಯೋಗ ತ್ವರಿತವಾಗಿ ಮಧ್ಯಪ್ರವೇಶ ಮಾಡಬೇಕಾಗಿತ್ತು. ಆದರೆ ಆ ರೀತಿಯ ಯಾವುದೇ ಕೆಲಸ ನಡೆದಿಲ್ಲ. ಪ್ರಧಾನ ಮಂತ್ರಿ ಮುಸ್ಲಿಮರ ವಿರುದ್ಧ ಮಾನಹಾನಿಕರ ಭಾಷಣ ಮಾಡುವುದರಲ್ಲಿ ಯಾವುದೇ ತಪ್ಪನ್ನು ಕಾಣದ ಚುನಾವಣೆ ಆಯೋಗವೊಂದು ಮುಸ್ಲಿಮರ ಮತದಾನದ ಹಕ್ಕನ್ನು ರಕ್ಷಿಸುತ್ತದೆಂದು ನಿರೀಕ್ಷಿಸುವುದು ತಪ್ಪಾಗುತ್ತದೆ.

ನರೇಂದ್ರ ಮೋದಿಯ ಕೊಳಕು ಮುಸ್ಲಿಂ-ವಿರೋಧಿ ಬಡಬಡಿಕೆ ಮತ್ತು ಸಂಭಾಲ್ ಕ್ಷೇತ್ರದಲ್ಲಿ ಮುಸ್ಲಿಂ ಮತದಾರರ ಮತದಾನದ ಹಕ್ಕನ್ನು ದಮನಿಸಲು ಉತ್ತರ ಪ್ರದೇಶ ಪೊಲೀಸರು ನಡೆಸಿದ ಪ್ರಯತ್ನಗಳ ನಡುವೆ ನೇರ ಸಂಬಂಧವಿದೆ ಎನ್ನುವುದು ನಿಶ್ಚಿತ.

ಅನು: ವಿಶ್ವ

ವಿಶಾಖಾ ಸ್ಟೀಲ್-ಖಾಸಗೀಕರಣ

ಈ ವೈಫಲ್ಯಗಳನ್ನು ಒಳಗೊಂಡಂತೆ, ಮೋದಿ ಸರ್ಕಾರವು ವಿಶಾಖಪಟ್ಟಣಂ ಸ್ಟೀಲ್ ಪ್ಲಾಂಟ್ ಅನ್ನು ಖಾಸಗೀಕರಣಗೊಳಿಸಲು ನಿರ್ಧರಿಸಿದೆ. "ವಿಶಾಖ ಉಕ್ಕು-ಆಂಧ್ರ ಜನರ ಹಕ್ಕು" ಎಂಬ ಘೋಷಣೆಯೊಂದಿಗೆ ವಿಶಾಖಪಟ್ಟಣಂ ಸ್ಟೀಲ್ ಪ್ಲಾಂಟ್ ಅನ್ನು ಅನೇಕ ತ್ಯಾಗಗಳ ಮೂಲಕ ಸಾಧಿಸಲಾಯಿತು. ಆ ಆಂದೋಲನದಲ್ಲಿ 32 ಜನರು ಪ್ರಾಣ ತ್ಯಾಗ ಮಾಡಿದರು. 64 ಹಳ್ಳಿಗಳ ರೈತರು ಸ್ಟೀಲ್ ಪ್ಲಾಂಟ್ ಗಾಗಿ 26 ಸಾವಿರ ಎಕರೆ ಭೂಮಿ ತ್ಯಾಗ ಮಾಡಿ ನಿರಾಶ್ರಿತರಾದರು. ಈಗ ಉಕ್ಕು ಕಾರ್ಖಾನೆಯ ಆಸ್ತಿ ಮೌಲ್ಯ ಎರಡು ಲಕ್ಷ ಕೋಟಿಗೂ ಹೆಚ್ಚು. ಉಕ್ಕು ಉದ್ಯಮದಿಂದಾಗಿ ವಿಶಾಖಪಟ್ಟಣ ಮತ್ತು ಗಜುವಾಕ ಸಾಕಷ್ಟು ಅಭಿವೃದ್ಧಿ ಕಂಡಿವೆ. ಉಕ್ಕಿನ ಕಾರ್ಖಾನೆಗೆ ತನ್ನದೇ ಆದ ಗಣಿಗಳನ್ನು ನೀಡದೆ ತಾರತಮ್ಯ ಮಾಡಿದ್ದರಿಂದ ಉಕ್ಕಿನ ಕಾರ್ಖಾನೆ ಸ್ವಲ್ಪ ಮಟ್ಟಿಗೆ ನಷ್ಟ ಅನುಭವಿಸಿತು. ಇದೀಗ ಮೋದಿ ಸರಕಾರ ಉಕ್ಕಿನ ಕಾರ್ಖಾನೆಯನ್ನು ಖಾಸಗೀಕರಣಗೊಳಿಸಿ ಜಿಂದಾಲ್-ಅದಾನಿಗಳಂತಹ ಕ್ರೋನಿ ಹೂಡಿಕೆದಾರರಿಗೆ ಮಾರಾಟ ಮಾಡುವುದಾಗಿ ಘೋಷಿಸಿದೆ. ಸಾವಿರಕ್ಕೂ ಹೆಚ್ಚು ದಿನಗಳಿಂದ ಖಾಸಗೀಕರಣದ ವಿರುದ್ಧ ದೊಡ್ಡ ಚಳವಳಿ ನಡೆಯುತ್ತಿದೆ. ಎಡಪಕ್ಷಗಳು ಪ್ರಮುಖ ಪಾತ್ರ ವಹಿಸಿವೆ. ಕೆಲವು ಸಂದರ್ಭಗಳಲ್ಲಿ "ಸನ್ನಾಯಿ ನಪ್ಪುಲು" ಹೊರತುಪಡಿಸಿದರೆ ಮೂರು ಪ್ರಾದೇಶಿಕ ಪಕ್ಷಗಳು ಖಾಸಗೀಕರಣ ವಿರೋಧಿ ಚಳವಳಿಯಲ್ಲಿ ನಿರ್ದಿಷ್ಟವಾಗಿ ತೊಡಗಿಸಿಕೊಂಡಿಲ್ಲ. ಉಕ್ಕು ಕಾರ್ಖಾನೆಯ ಕಾರ್ಮಿಕರು ಮತ್ತು ಆಂಧ್ರಪ್ರದೇಶದ ಜನರು ಅದರ ಖಾಸಗೀಕರಣದ ವಿರುದ್ಧ ಹೋರಾಡುತ್ತಿರುವುದರಿಂದಾಗಿ ಸರ್ಕಾರವು ಖಾಸಗೀಕರಣಗೊಳಿಸುವ ತನ್ನ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವ ಧೈರ್ಯ ಮಾಡಿಲ್ಲ.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು...

ಆಂಧ್ರಪ್ರದೇಶದ ಜನರು ಬಿಜೆಪಿಯ ಮೇಲೆ ಬಹಳಷ್ಟು ಕೋಪಗೊಂಡಿದ್ದಾರೆ ಮತ್ತು ಬಿಜೆಪಿ ವಿರೋಧಿ ಜಾಗವನ್ನು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಬಳಸಿಕೊಳ್ಳಬೇಕಾಗಿದೆ. ಆದ್ದರಿಂದ, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಈ ದಿಕ್ಕಿನಲ್ಲಿ ಇತರ ಜಾತ್ಯತೀತ ಶಕ್ತಿಗಳನ್ನು ಸಜ್ಜುಗೊಳಿಸಿತು. ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಪಾಲಿಟ್ ಬ್ಯೂರೋ ಸದಸ್ಯರಾದ ಬೃಂದಾ ಕಾರಟ್, ಬಿ.ವಿ. ರಾಘವುಲು ಮತ್ತು ಎಂ.ಎ. ಬೇಬಿ ಅವರು ಭಾಗವಹಿಸಿದ್ದ ದೊಡ್ಡ ಸಾರ್ವಜನಿಕ ಸಭೆಗಳು ಮತ್ತು ರ್‍ಯಾಲಿಗಳನ್ನು ನಡೆಸಿತು. ವಿ. ಶ್ರೀನಿವಾಸ್ ರಾವ್, ಪಿ. ಮಧು ಮತ್ತು ಇತರ ರಾಜ್ಯ ಕಾರ್ಯದರ್ಶಿಗಳು ವ್ಯಾಪಕ ಪ್ರವಾಸ ಮಾಡಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಜನರಿಗೆ ವಿವರಿಸಿದರು. ವೈಎಸ್ಆರ್ ಕಾಂಗ್ರೆಸ್ ಪಕ್ಷದ ರಾಜ್ಯ ಸರ್ಕಾರವು ಕೇಂದ್ರದಲ್ಲಿ ಬಿಜೆಪಿಗೆ ಅಧೀನವಾಗಿದೆ, ವಿಶೇಷವಾಗಿ ವಿದ್ಯುತ್, ಶಿಕ್ಷಣ ಮತ್ತು ನಗರ ಸುಧಾರಣೆಗಳನ್ನು ಅನುಷ್ಠಾನಗೊಳಿಸುವಲ್ಲಿ, ಹೆಚ್ಚಿದ ಆಸ್ತಿ ತೆರಿಗೆ, ಕಸದ ಶುಲ್ಕಗಳು ಮತ್ತು ವಿದ್ಯುತ್ ದರಗಳಿಂದ ಜನರಿಗೆ ಹೊರೆಯಾಗಿದೆ ಎಂಬುದನ್ನು ಸಿಪಿಐ(ಎಂ) ತನ್ನ ಪ್ರಚಾರ ಕಾರ್ಯಕ್ರಮಗಳಲ್ಲಿ ಎತ್ತಿ ತೋರಿಸಿತು. ಆಂಧ್ರಪ್ರದೇಶದಲ್ಲಿ ಸಹ ಕೋಮು ಉದ್ವಿಗ್ನತೆಯನ್ನು ಪ್ರಚೋದಿಸಲು ಪ್ರಯತ್ನಿಸುತ್ತಿರುವ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವಲ್ಲಿ ಟಿಡಿಪಿ ಮತ್ತು ಜನಸೇನೆಯ ಪಾತ್ರವನ್ನು ಸಿಪಿಐ(ಎಂ) ಬಹಿರಂಗಪಡಿಸಿದೆ.

ಸಿಪಿಐ ಕೆಲವು ಸ್ವತಂತ್ರ ಸಭೆಗಳನ್ನು ಹಾಗೂ ಜಂಟಿ ಸಭೆಗಳನ್ನು ನಡೆಸಿತು. ಸಿಪಿಐ(ಎಂ), ಸಿಪಿಐ ಮತ್ತು ಕಾಂಗ್ರೆಸ್ ಒಟ್ಟಾಗಿ ಬೃಹತ್ ಸಭೆಗಳನ್ನು ನಡೆಸಿದ್ದು, ಮೇ 10 ರಂದು ವಿಜಯವಾಡದಲ್ಲಿ ಪ್ರಚಾರದ ಕೊನೆಯ ದಿನದಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಕಾರ್ಯದರ್ಶಿ ಡಿ ರಾಜಾ ಭಾಗವಹಿಸಿ, ಮೋದಿಯವರ ದುರಾಡಳಿತ ಮತ್ತು ಬಿಜೆಪಿ ನೀತಿಗಳ ವಿನಾಶಕಾರಿ ಪರಿಣಾಮವನ್ನು ತೆರೆದಿಟ್ಟರು. ಪ್ರಜಾಶಕ್ತಿ ಬುಕ್ ಹೌಸ್ ಹಲವಾರು ಕಿರುಪುಸ್ತಕಗಳನ್ನು ಪ್ರಕಟಿಸಿತು, ಮುಖ್ಯವಾಗಿ "ನಯವಂಚನ", ಇದು ಮೋದಿ ಕೇಂದ್ರ ಸರ್ಕಾರದ ಹತ್ತು ದುಷ್ಕೃತ್ಯಗಳನ್ನು ವಿವರಿಸುತ್ತದೆ.

ಸಿಪಿಎಂ ರಾಜ್ಯದ ಅಭಿವೃದ್ಧಿಯ ಕುರಿತು ಹಲವಾರು ಕಾರ್ಯಾಗಾರಗಳನ್ನು ನಡೆಸಿತು ಮತ್ತು 'ರಾಜ್ಯದ ಸಮಗ್ರ ಅಭಿವೃದ್ಧಿ' ಯೋಜನೆಯನ್ನು ಘೋಷಿಸಿತು. ಸಿಪಿಐ ರಾಜ್ಯದ ಅಭಿವೃದ್ಧಿಗೆ ಸ್ಪಷ್ಟ ನೀತಿಗಳನ್ನು ಪ್ರಕಟಿಸಿತು.

ಈ ಅಭಿಯಾನದಲ್ಲಿ, ಬಿಜೆಪಿಯ ದುರಾಡಳಿತ ಮತ್ತು ಮೋದಿ ಸರ್ಕಾರದಿಂದ ರಾಜ್ಯಕ್ಕೆ ಉಂಟಾದ ಹಾನಿಯ ವಿರುದ್ಧ ಪ್ರಚಾರ ಮಾಡಲು 'ಸಂವಿಧಾನ ಸಂರಕ್ಷಣಾ ವೇದಿಕೆ' ಗಣನೀಯ ಕೊಡುಗೆ ನೀಡಿದೆ. ಮಾಜಿ ಸಚಿವ ವಡ್ಡೆ ಶೋಭಾನಾದ್ರೀಶ್ವರ ರಾವ್, ವಿಚಾರವಾದಿ ಕೆ.ವಿಜಯ ರಾವ್, ವಿಶೇಷ ಸ್ಥಾನಮಾನ ಆಂದೋಲನದ ಮುಖಂಡ ಚಲಸಾನಿ ಶ್ರೀನಿವಾಸ್ ಮತ್ತಿತರರು ರಾಜ್ಯ ಪ್ರವಾಸ ಮಾಡಿ, ಒಳಾಂಗಣ ಸಭೆ ಮತ್ತು ರೋಡ್ ಶೋಗಳನ್ನು ಉದ್ದೇಶಿಸಿ ಮಾತನಾಡಿದರು. ಬಿಜೆಪಿ ಸ್ಪರ್ಧಿಸುವ ಕ್ಷೇತ್ರಗಳತ್ತ ಗಮನ ಹರಿಸಿದರು.

ಈ ಪ್ರಯತ್ನಗಳ ಮೂಲಕ ರಾಜ್ಯದಲ್ಲಿ ಬಿಜೆಪಿ-ವಿರೋಧಿ ಪ್ರಚಾರಕ್ಕೆ ಚಾಲನೆ ದೊರೆಯಿತು. ಎನ್‌ಡಿಎ ಮತ್ತು ವೈಎಸ್ಆರ್‌ಸಿಪಿ ನಡುವಿನ ದ್ವಿಧ್ರುವಿ ಪರಿಸ್ಥಿತಿಯ ಹೊರತಾಗಿಯೂ, ಇಂಡಿಯಾ ಮೈತ್ರಿಕೂಟವು ಪ್ರಭಾವ ಬೀರಲು ಮತ್ತು ಪ್ರಬಲ ಪಕ್ಷಗಳಿಗೆ ಸವಾಲು ಹಾಕುವಲ್ಲಿ ಯಶಸ್ವಿಯಾಯಿತು.

ಹೆಚ್ಚು ಕಡಿಮೆ ಎಲ್ಲಾ ಸೀಟುಗಳಲ್ಲಿ ಬಿಜೆಪಿ ಮತ್ತು ಇಂಡಿಯಾ ಕೂಟದ ಅಭ್ಯರ್ಥಿಗಳ ನಡುವೆ ನೇರ ಬಿರುಸಿನ ಸ್ಪರ್ಧೆಯಿದ್ದು, ಸೀಕರ್ ನಲ್ಲಿ ಸಿಪಿಐ(ಎಂ), ಬಾನ್ಸ್ ವಾರಾ ದಲ್ಲಿ ಬಿ.ಎ.ಪಿ ಸೇರಿದಂತೆ 10 ಸೀಟುಗಳಲ್ಲಿ ಇಂಡಿಯಾ ಕೂಟದ ಅಭ್ಯರ್ಥಿಗಳು ಮುನ್ನಡೆಯಲ್ಲಿದ್ದಾರೆ. ಕಳೆದ ಎರಡು ಲೋಕಸಭಾ ಚುನಾವಣೆಯ ಬಿಜೆಪಿಯ ಕ್ಲೀನ್ ಸ್ವೀಪ್ ಅಸಂಭವ ಮತ್ತು ಅದು ತನ್ನ ಪ್ರಾಬಲ್ಯ ಕಳೆದುಕೊಳ್ಳಲಿದೆ ಎಂಬುದು ಖಚಿತ.



ರಾಜಸ್ಥಾನ: ಬಿಜೆಪಿ ಕನಿಷ್ಠ 10 ಸೀಟು ಕಳೆದುಕೊಳ್ಳಲಿದೆ

ವಸಂತರಾಜ ಎನ್.ಕೆ.

ಹಿಂದಿ ರಾಜ್ಯಗಳಲ್ಲಿ ರಾಜಸ್ಥಾನದಲ್ಲಿ ಮಾತ್ರ (ಮೊದಲೆರಡು ಹಂತಗಳಲ್ಲಿ ಅಂದರೆ ಎಪ್ರಿಲ್ 19 ಮತ್ತು 26ಕ್ಕೆ) ಚುನಾವಣೆ ಪ್ರಕ್ರಿಯೆ ಮುಗಿದು, ಈಗಾಗಲೇ ಫಲಿತಾಂಶಗಳ ಕುರಿತು ಊಹಾಪೋಹಗಳು, ಅಂದಾಜುಗಳು ಆರಂಭವಾಗಿವೆ. 2019ರ ಚುನಾವಣೆಯಲ್ಲಿ 25ರಲ್ಲಿ ಬಿಜೆಪಿ 24 ಮತ್ತು ಎನ್.ಡಿ.ಎ. ಕೂಟದ ಇನ್ನೊಂದು ಪಕ್ಷ ಆರ್.ಎಲ್.ಪಿ 1 ಸೀಟು ಪಡೆದು ಕ್ಲೀನ್ ಸ್ವೀಪ್ ಮಾಡಿತ್ತು. 2014ರಲ್ಲೂ ಲೋಕಸಭಾ ಚುನಾವಣೆಯಲ್ಲಿ ಸಹ ಬಿಜೆಪಿ 25 ಸೀಟು ಪಡೆದು ಕ್ಲೀನ್ ಸ್ವೀಪ್ ಮಾಡಿತ್ತು. ಇತ್ತೀಚೆಗಷ್ಟೇ (ನವೆಂಬರ್ 2023) ಅಲ್ಲಿ ವಿಧಾನಸಭಾ ಚುನಾವಣೆಗಳು ನಡೆದಿದ್ದು ಕಾಂಗ್ರೆಸ್ ಸೋತಿದ್ದು ಬಿಜೆಪಿ ಭಾರೀ ಬಹುಮತ ಪಡೆದಿದೆ. ಹಾಗಾದರೆ ಬಿಜೆಪಿ ಈ ಬಾರಿಯ ಲೋಕಸಭಾ ಚುನಾವಣೆಯಲ್ಲೂ ಕ್ಲೀನ್ ಸ್ವೀಪ್ ಮಾಡುತ್ತಾ? ಇಲ್ಲ ಅಂತಾರೆ ರಾಜಕೀಯ ವಿಶ್ಲೇಷಕರು ಮತ್ತು ಪ್ರಮುಖ ಪತ್ರಕರ್ತರು. ಯಾಕೆ ಹೀಗಂತಾರೆ ನೋಡೋಣ?

ಮತದಾನದಲ್ಲಿ ಕುಸಿತ

ಮೊದಲನೆಯದಾಗಿ ಉತ್ತರ ರಾಜಸ್ಥಾನದ 12 ಕ್ಷೇತ್ರಗಳಲ್ಲಿ ಮೊದಲ ಹಂತದ ಚುನಾವಣೆಯಲ್ಲಿ ಶೇ. 57.65 ಮಾತ್ರ ಮತದಾನವಾಗಿತ್ತು. ದಕ್ಷಿಣ ರಾಜಸ್ಥಾನದ 13 ಕ್ಷೇತ್ರಗಳಲ್ಲಿ ಎರಡನೆಯ ಹಂತದ ಚುನಾವಣೆಯಲ್ಲಿ ಶೇ. 65.03 ಕ್ಕೆ ಉತ್ತಮಗೊಂಡರೂ, ಕಳೆದ ಬಾರಿಯ ಒಟ್ಟು ಮತದಾನದ ಪ್ರಮಾಣ ಶೇ. 66.34ಕ್ಕಿಂತ ಸಾಕಷ್ಟು ಕಡಿಮೆಯಿತ್ತು. ಇದು ವಿಧಾನಸಭಾ ಚುನಾವಣೆಗಳಲ್ಲಿನ ಶೇ. 75 ಮತದಾನಕ್ಕಿಂತಲೂ ಬಹಳ ಕಡಿಮೆಯಿತ್ತು. ಅದರಲ್ಲೂ ಹಲವು ಇತರ ರಾಜ್ಯಗಳಂತೆ ಬಿಜೆಪಿ ಪ್ರಬಲವಾಗಿರುವ ಪ್ರದೇಶಗಳಲ್ಲಿ ಮತದಾನ ಕಡಿಮೆಯಾಗಿರುವುದು ಕಂಡು ಬಂದಿದೆ. ರಾಜಸ್ಥಾನ ಸೇರಿದಂತೆ ಬಿಜೆಪಿ ರಾಜ್ಯಗಳಲ್ಲಿ ಪ್ರದೇಶಗಳಲ್ಲಿ ಮೊದಲನೆಯ ಹಂತದ ಕಡಿಮೆ ಮತದಾನದ ನಂತರವೇ, ರಾಜಸ್ಥಾನದಲ್ಲೇ ಎರಡನೆಯ ಹಂತದಲ್ಲಿ ಪ್ರಧಾನಿ ಮೋದಿ ನೇರವಾಗಿ ಮುಸ್ಲಿಂ–ವಿರೋಧಿ ಭಾಷಣ ಆರಂಭಿಸಿದ್ದು ಎಂದೂ ಗಮನಿಸಬೇಕು. ಇದು ಬಿಜೆಪಿಯ ಕಾರ್ಯಕರ್ತರನ್ನು ಉತ್ತೇಜಿಸಲು ಮತ್ತು ಕೋರ್ ಮತದಾರರನ್ನು ಮತಗಟ್ಟೆಗೆ ತರಲು ಎನ್ನಲಾಗಿದೆ.

ಈ ಕಡಿಮೆ ಮತದಾನ ಬಿಜೆಪಿಗೆ ವಿರುದ್ಧ ಹೋಗುತ್ತದೆ ಎಂಬುದು ಹಲವು ರಾಜಕೀಯ ವಿಶ್ಲೇಷಕರ ಅಭಿಪ್ರಾಯ. ‘ಪನ್ನಾ ಪ್ರಮುಖ್’ (ಮತದಾರರ ಪಟ್ಟಿಯ ಒಂದು ಪುಟಕ್ಕೊಬ್ಬ ಕಾರ್ಯಕರ್ತ) ಮುಂತಾದ ಬೂತ್ ಮಟ್ಟದ ಅಗಾಧ ಸಂಘಟನೆ ಇದ್ದರೂ ಬಿಜೆಪಿಗೆ ತಮ್ಮ ಮತದಾರರನ್ನು ಕರೆತರಲು ಸಾಧ್ಯವಾಗಿಲ್ಲ. ಇದಕ್ಕೆ ಬೇರೆ ಬೇರೆ ವಿಶ್ಲೇಷಕರು ಬೇರೆ ಬೇರೆ ಕಾರಣ ಕೊಡುತ್ತಾರೆ. ‘ಇಸ್ ಬಾರ್ ಚಾರ್ ಸೋ ಪಾರ್’ (ಈ ಬಾರಿ 400 ಸೀಟುಗಳನ್ನು ದಾಟುತ್ತೇವೆ) ಘೋಷಣೆ ನಂಬಿ ಕಾರ್ಯಕರ್ತರು ಮತದಾರರನ್ನು ಕರೆತರುವ ಅಗತ್ಯವಿಲ್ಲ ಅಂತ ರಿಲ್ಯಾಕ್ಸ್ ಮಾಡಿದ್ದಾರೆ ಅಂತ ಒಂದು ಕಾರಣ. ನಿನ್ನೆ ಮೊನ್ನೆವರೆಗೆ ‘ಮಹಾಭ್ರಷ್ಟರು’ ‘ಪರಿವಾರವಾದಿಗಳು’ ಎಂದು ಟೀಕಿಸುತ್ತಿದ್ದ ಇತರ ಪಕ್ಷಗಳ ವ್ಯಕ್ತಿಗಳನ್ನು ಬಿಜೆಪಿಗೆ ಬೇಕಾಬಿಟ್ಟಿ ಕರೆದು ಟಿಕೆಟ್ ಕೊಟ್ಟಿರುವುದು ಅಥವಾ ಟಿಕೆಟ್ ಪಡೆದ ವ್ಯಕ್ತಿ ಅನರ್ಹ ಎಂಬ ಭಾವನೆ ಈ ‘ಪ್ರಾಮಾಣಿಕ’ ಕಾರ್ಯಕರ್ತರಲ್ಲಿ ಜಿಗುಪ್ಸೆ ಹುಟ್ಟಿಸಿದೆ ಎಂಬುದು ಇನ್ನೊಂದು ಕಾರಣ. ‘ಇಂದಿನ ದುರ್ಭರ ಸನ್ನಿವೇಶದಲ್ಲಿ ನಿಜವಾದ ವಿಷಯಗಳಿಗೆ ಪರಿಹಾರ ಕ್ರಮಗಳ ಬಗ್ಗೆ ಉಸಿರೆತ್ತದೆ ಮೋದಿ ಗ್ಯಾರಂಟಿಗಳಾಗಲಿ, ವಿಕಸಿತ ಭಾರತ’ದ ಕನಸುಗಳಾಗಲಿ ಬಿಜೆಪಿ ಅಥವಾ ಸ್ವತಂತ್ರ ಮತದಾರರಲ್ಲಿ ಮತದಾನ ಮಾಡಬೇಕೆಂಬ ಉತ್ಸಾಹ ತುಂಬುತ್ತಿಲ್ಲ. ವಿರೋಧ ಪಕ್ಷಗಳ ಮತದಾರರು ಪ್ರಧಾನವಾಗಿ ಬಿಜೆಪಿಯನ್ನು ಗದ್ದಿಗೆಯಿಂದ ಇಳಿಸಬೇಕೆಂದು ಮತದಾನ ಮಾಡಿದ್ದಾರೆ ಎಂಬುದು ಮೂರನೆಯ ಅಭಿಪ್ರಾಯ. ಈ ಮೂರೂ ಕಾರಣಗಳು ವಿವಿಧ ಕ್ಷೇತ್ರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರಬಹುದು.

ಬಿಜೆಪಿ ಬಣ ಘರ್ಷಣೆ

ಈಗಿನ ಬಿಜೆಪಿ ಲೋಕಸಭಾ ಸದಸ್ಯರ ಬಗ್ಗೆ ಜನತೆಯಲ್ಲಿ ತೀವ್ರ ಅತೃಪ್ತಿ ಆಕ್ರೋಶವಿದೆ ಎಂದು ಹೇಳಲಾಗಿದೆ. ನವೆಂಬರ್ 2023ರ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಬಹುಮತ ಪಡೆದರೂ, ಇದರಲ್ಲಿ ಸ್ಪರ್ಧಿಸಿದ 7 ಲೋಕಸಭಾ ಸದಸ್ಯರಲ್ಲಿ 3 ಸದಸ್ಯರು ಸೋತಿದ್ದರು ಎಂಬುದು ಇದಕ್ಕೆ ಒಂದು ಉದಾಹರಣೆ. ಹಾಗಾಗಿ 25ರಲ್ಲಿ 11 ಪ್ರಸಕ್ತ ಸದಸ್ಯರಿಗೆ ಬಿಜೆಪಿ ಟಿಕೆಟ್ ಕೊಟ್ಟಿಲ್ಲ. ಟಿಕೆಟ್ ಸಿಗದ ನಾಯಕರು ಮತ್ತು ಅವರ ಬೆಂಬಲಿಗರು ಅತೃಪ್ತರಾಗಿದ್ದು ಅವರು ತಟಸ್ಥರಾಗಿದ್ದಾರೆ ಇಲ್ಲವೆ ಬಿಜೆಪಿ ವಿರುದ್ಧ ಕೆಲಸ ಮಾಡುತ್ತಿದ್ದಾರೆ. ಬಿಜೆಪಿಯಲ್ಲಿ ವಿಧಾನಸಭಾ ಚುನಾವಣೆಗಳ ಮತ್ತು ಮುಖ್ಯಮಂತ್ರಿಯ ಆಯ್ಕೆಯ ನಂತರ ಭಿನ್ನಮತ ಮತ್ತು ಬಣಗಳ ನಡುವೆ ಘರ್ಷಣೆ ತಾರಕ್ಕೇರಿದೆ ಎನ್ನಲಾಗಿದೆ. ಅದರಲ್ಲೂ ಯಾವುದೇ ಬೆಂಬಲವಿಲ್ಲದ ಯಾರೂ ಕೇಳಿರದ ‘ಭಜನ ಲಾಲ್ ಶರ್ಮಾ ಅವರನ್ನು ಹೈಕಮಾಂಡ್ ಮುಖ್ಯಮಂತ್ರಿ ಮಾಡಿದ್ದು ಇನ್ನಷ್ಟು ಸಮಸ್ಯೆ ಉಲ್ಬಣಗೊಳಿಸಿದೆ. ಒಂದು ಪ್ರಬಲ ಬಣದ ಮತ್ತು ಸಾಪೇಕ್ಷವಾಗಿ ಹೆಚ್ಚು ಜನಪ್ರಿಯ ನಾಯಕರಾದ ವಸುಂಧರಾ ರಾಜೇ ಸಿಂಧ್ಯ ಅವರ ಬೆಂಬಲಿಗರನ್ನು ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಗಳೆರಡೂ ಟಿಕೆಟ್ ಹಂಚಿಕೆಯಲ್ಲಿ ಹೈಕಮಾಂಡ್ ನಿರ್ಲಕ್ಷಿಸಿದ್ದು, ಆ ಬಣ ತಟಸ್ಥವಾಗಿದೆ ಎನ್ನಲಾಗಿದೆ. ಸ್ವತಃ ವಸುಂಧರಾ ಅವರೇ ತಮ್ಮ ಮಗನ (ದುಷ್ಯಂತ ಸಿಂಗ್) ಕ್ಷೇತ್ರ ಝಲವಾರ್ ಬಿಟ್ಟರೆ ಬೇರೆ ಎಲ್ಲೂ ಪ್ರಚಾರಕ್ಕೆ ಹೋಗಿಲ್ಲ. ಇವೆಲ್ಲವೂ ಕಾರ್ಯಕರ್ತರ ನಿರುತ್ಸಾಹ, ಜಿಗುಪ್ಸೆಗೂ ಕಾರಣವಾಗಿರಬಹುದು.



ಸಿಪಿಐ(ಎಂ) ನಾಯಕ, ಸೀಕಾರ್ ಕ್ಷೇತ್ರದ ಅಭ್ಯರ್ಥಿ ಆಮ್ರಾರಾಮ್

ಕೋಷ್ಟಕ–1 ರಾಜಸ್ಥಾನದ ಚುನಾವಣೆಗಳಲ್ಲಿ ಸೀಟು, ಮತ ಪ್ರಮಾಣ							
ಚುನಾವಣೆ	ಒಟ್ಟು ಸೀಟು	ಬಿಜೆಪಿ		ಕಾಂಗ್ರೆಸ್		ಇತರರು	
		ಸೀಟು	%ಮತ	ಸೀಟು	%ಮತ	ಸೀಟು	%ಮತ
2009 ಲೋಕಸಭಾ	25	4	36.6	20	47.2	1	16.2
2013 ವಿಧಾನಸಭಾ	200	163	45.2	21	33.1	16	21.7
2014 ಲೋಕಸಭಾ	25	25	55.6	0	30.7	0	13.7
2018 ವಿಧಾನಸಭಾ	200	73	38.8	100	39.3	27	21.9
2019 ಲೋಕಸಭಾ	25	24	59.1	0	34.2	1	6.7
2023 ವಿಧಾನಸಭಾ	200	115	41.7	69	39.5	16	18.8

ರೈತರ ಆಕ್ರೋಶ

ಇತ್ತೀಚಿನ ಅಭೂತಪೂರ್ವ ರೈತ ಚಳುವಳಿಯ ಕೋಪ ಬಿಜೆಪಿಯ ಕೇಂದ್ರೀಯ ನಾಯಕತ್ವದ ವಿರುದ್ಧ ತಿರುಗಿದೆ. ಚಳುವಳಿಯ ವಿರುದ್ಧ ದಮನಚಕ್ರ, ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ, ರೈತರ ಸಾಲದ ಸಮಸ್ಯೆ ಮತ್ತು ಸಾಲಮನ್ನಾದ ಒತ್ತಾಯಗಳ ಸತತ ನಿರ್ಲಕ್ಷ ಬಿಜೆಪಿ ಗೆ ಮುಳುವಾಗಬಹುದು. ಅದರಲ್ಲೂ ಪ್ರಧಾನ ರೈತ ಸಮುದಾಯ ಜಾಟರು ಪ್ರಧಾನವಾಗಿರುವ ಪಂಜಾಬ್, ಹರಿಯಾಣದ ಜತೆಗೆ ಗಡಿ ಹೊಂದಿರುವ ಉತ್ತರ ರಾಜಸ್ಥಾನದಲ್ಲಿ ಇದು ಪ್ರಬಲವಾಗಿದೆ. ಬಿಜೆಪಿಯ ನೀತಿಗಳು, ಇತ್ತೀಚಿನ ಹೇಳಿಕೆಗಳು ಅದು ಹೆಚ್ಚೆಚ್ಚು ರೈತ–ವಿರೋಧಿ, ಕಾರ್ಪೊರೆಟ್–ಪರ ಎಂಬ ಭಾವನೆಯನ್ನು ಗಟ್ಟಿಗೊಳಿಸುತ್ತಿವೆ.

ಮತ್ತು ಅದೇ ರೀತಿ ಬಹುಪಾಲು ಜಾಟ್ ಸಮುದಾಯಕ್ಕೆ ಸೇರಿದ ಮಹಿಳಾ ಕುಸ್ತಿ ಪಟುಗಳಿಗೆ ಲೈಂಗಿಕ ಕಿರುಕುಳದ ವಿರುದ್ಧ ಆಕ್ರೋಶ ಸಹ ಬಿಜೆಪಿಗೆ ಸವಾಲಾಗುವ ಸಾಧ್ಯತೆಯಿದೆ. ಜಾಟ್ ಸಮುದಾಯಕ್ಕೆ ಸೇರಿದ ಹಿಂದಿನ ಬಿಜೆಪಿ ಅಧ್ಯಕ್ಷರನ್ನು ಚುನಾವಣೆಯ ಕೆಲವೇ ತಿಂಗಳುಗಳ ಮೊದಲು ಬದಲಾಯಿಸಿ ಯಾವುದೇ ಪ್ರಮುಖ ಜವಾಬ್ದಾರಿ ಕೊಡದೆ ಮೂಲೆಗುಂಪು ಮಾಡಿದ್ದೂ ಜಾಟ್ ಸಮುದಾಯದ ಆಕ್ರೋಶ ಹೆಚ್ಚಲು ಕಾರಣವಾಗಿದೆ.

‘ಇಸ್ ಬಾರ್ ಚಾರ್ ಸೋ ಪಾರ್’ (ಈ ಬಾರಿ 400 ಸೀಟುಗಳನ್ನು ದಾಟುತ್ತೇವೆ) ಎಂಬ ಬಿಜೆಪಿಯ ಘೋಷಣೆ ದಲಿತ–ಆದಿವಾಸಿ ಜನವಿಭಾಗಗಳಲ್ಲಿ, ಬಿಜೆಪಿ ಸಂವಿಧಾನ ಬದಲಾಯಿಸಿ ಮೀಸಲಾತಿ ಕಿತ್ತು ಹಾಕುತ್ತದೆ ಎಂಬ ಆತಂಕಕ್ಕೆ ಕಾರಣವಾಗಿದೆ.

ಬಿಜೆಪಿಯ ಸಾಂಪ್ರದಾಯಿಕ ಕಟ್ಟಾ ಬೆಂಬಲಿಗ ರಜಪೂತ ಸಮುದಾಯದಲ್ಲಿ ಸಹ ತೀವ್ರ ಅತೃಪ್ತಿಯಿದೆ ಎನ್ನಲಾಗಿದೆ. ಗುಜರಾತಿನ ನಾಯಕರೊಬ್ಬರು ರಜಪೂತರ ಕುರಿತು ನೀಡಿದ ಉದ್ಧಟದ ಹೇಳಿಕೆ ನೆರೆಯ ರಾಜಸ್ಥಾನದಲ್ಲೂ ಆಕ್ರೋಶಕ್ಕೆ ಕಾರಣವಾಗಿದೆ.

ಪರಿಣಾಮಕಾರಿ ಇಂಡಿಯಾ ಕೂಟ

ವಿಧಾನಸಭಾ ಚುನಾವಣೆಯಲ್ಲಿ ‘ಅನಿರೀಕ್ಷಿತ’ ಪರಾಭವ ಮತ್ತು ಸೂಕ್ತ ಅಭ್ಯರ್ಥಿಗಳನ್ನು ಹುಡುಕುವಲ್ಲಿ ತೀವ್ರ ಸವಾಲುಗಳು ಕಾಂಗ್ರೆಸ್ ಗೆ ಆರಂಭಿಕ ಸವಾಲುಗಳನ್ನು ಒಡ್ಡಿದ್ದವು. ಭಿನ್ನಮತ ಮತ್ತು ಬಣಗಳ ನಡುವೆ ಘರ್ಷಣೆ ಕಾಂಗ್ರೆಸ್ ಗೆ ಹೊಸದೇನಲ್ಲ. ಆದರೆ ವಿಧಾನಸಭಾ ಚುನಾವಣೆಗಳಲ್ಲಿ ‘ಅನಿರೀಕ್ಷಿತ’ ಪರಾಭವದ ನಂತರ ವಿವಿಧ ಬಣಗಳು, ಅದರಲ್ಲೂ ಮುಖ್ಯವಾಗಿ ಗೆಹಲೋಟ್, ಪೈಲಟ್ ಬಣಗಳು ಹೆಚ್ಚು ಐಕ್ಯತೆಯಿಂದ ಕೆಲಸ ಮಾಡುತ್ತಿವೆ.

ಕೇಂದ್ರದಲ್ಲಿ ಬಿಜೆಪಿಯ 10 ವರ್ಷಗಳ ಆಡಳಿತದ ವಿರುದ್ಧ ತೀವ್ರ ಅತೃಪ್ತಿ ಇದ್ದೇ ಇದೆ. ಬಿಜೆಪಿಯ ಕೋಮುವಾದೀಕರಣವನ್ನು ನಿರ್ಲಕ್ಷಿಸಿ ನಿರುದ್ಯೋಗ, ಬೆಲೆಏರಿಕೆ, ಭ್ರಷ್ಟಾಚಾರ, ಕಾರ್ಪೊರೆಟ್–ಪರ ನೀತಿಗಳ ವಿರುದ್ಧ, ಕಾಂಗ್ರೆಸ್ ಮತ್ತು ಇಂಡಿಯಾ ಕೂಟದ ದೃಢ ಪ್ರಚಾರ ಈ ಅತೃಪ್ತಿಯನ್ನು ಕ್ರೋಢಿಕರಿಸುವಲ್ಲಿ ಯಶಸ್ಸು ಕಾಣುತ್ತಿದೆ.

ಬಹಳ ಮುಖ್ಯ ಅಂಶವೆಂದರೆ ಇಂಡಿಯಾ ಕೂಟ ರಾಜಸ್ಥಾನದಲ್ಲಿ ರಚನೆಗೊಂಡದ್ದು.

ಪುಟ 10 ಕ್ಕೆ

ಪಶ್ಚಿಮ ಬಂಗಾಳ: ಗಮನ ಸೆಳೆಯುತ್ತಿರುವ ಎಡರಂಗದ ಯುವ ಅಭ್ಯರ್ಥಿಗಳ ಸ್ಪರ್ಧೆ



ದ್ವೇಷ, ಮತಾಂಧತೆ ಆಧಾರಿತವಾದ, ಕೆಲವೇ ಬಂಡವಾಳಿಗರ ಅಭಿವೃದ್ಧಿಗೆ ಪೂರಕವಾದ ಜನವಿರೋಧಿ ರಾಜಕೀಯ ನೀತಿಗಳು ಮತ್ತು ಜಾತ್ಯತೀತ, ಜನಪರ ಪರ್ಯಾಯ ನೀತಿಗಳ ನಡುವೆ ದೇಶದಲ್ಲಿಂದು ಸುದೀರ್ಘ ಸಂಘರ್ಷ ನಡೆಯುತ್ತಿದೆ. ಪ್ರಸಕ್ತ ನಡೆಯುತ್ತಿರುವ ಲೋಕಸಭಾ ಚುನಾವಣೆಗಳಲ್ಲೂ ಇಂತಹ ಸಂಘರ್ಷದ ಪ್ರತಿಫಲನಗಳಿವೆ. ಪಶ್ಚಿಮ ಬಂಗಾಳದಲ್ಲಿಯೂ ಇಂತಹ ಹೋರಾಟ ನಡೆಯತ್ತಿದ್ದು, ಅದರಲ್ಲಿ ಕಾಂಗ್ರೆಸ್–ಎಡರಂಗ ಹೊಂದಾಣಿಕೆಯ ಭಾಗವಾದ ಸಿಪಿಐ(ಎಂ) ಅಭ್ಯರ್ಥಿಗಳಾಗಿ ಸ್ಪರ್ಧಿಸುತ್ತಿರುವ ಹಲವು ಯುವ ಅಭ್ಯರ್ಥಿಗಳು ವ್ಯಾಪಕವಾಗಿ ಜನರ ಗಮನ ಸೆಳೆದಿದ್ದಾರೆ.

ಡೈಮಂಡ್ ಹಾರ್ಬರ್:
ಹಣ–ತೋಳ್ಬಲಗಳ ವಿರುದ್ಧ
ಪ್ರತಿಕುರ್ ರೆಹಮಾನ್

ರಾಜ್ಯದ ಡೈಮಂಡ್ ಹಾರ್ಬರ್ ಕ್ಷೇತ್ರದಿಂದ ವಿದ್ಯಾರ್ಥಿ ಸಂಘಟನೆ ಎಸ್.ಎಫ್.ಐ.ನ ಮಾಜಿ ರಾಜ್ಯ ಅಧ್ಯಕ್ಷ ಪ್ರತಿಕುರ್ ರೆಹಮಾನ್ ಕಾಂಗ್ರೆಸ್–ಎಡಪಕ್ಷ ಬೆಂಬಲಿತ ಸಿಪಿಐ(ಎಂ) ಅಭ್ಯರ್ಥಿಯಾಗಿದ್ದಾರೆ. ಇಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯ ಸೋದರಳಿಯ ಅಭಿಶೇಕ್ ಬ್ಯಾನರ್ಜಿ ತೃಣಮೂಲದಿಂದ ಪ್ರತಿಸ್ಪರ್ಧಿ.



ರಾಜ್ಯದಲ್ಲಿ ಅಗಾಧ ಪ್ರಮಾಣದ ಅಕ್ರಮ ಹಣ ಚುನಾವಣೆಗಳಲ್ಲಿ ಬಳಕೆಯಾಗುತ್ತಿದೆ. ಈ ಕ್ಷೇತ್ರದಲ್ಲಿಯೂ ತೃಣಮೂಲ ಪಕ್ಷವು ಹಣ ಬಲ, ತೋಳ್ಬಲಗಳ ಆಧಾರದಲ್ಲಿ ಚುನಾವಣೆ ಗೆಲ್ಲಲು ಸರ್ವ ರೀತಿಯಲ್ಲೂ ಪ್ರಯತ್ನ ನಡೆಸುತ್ತಿದ್ದು ಅಕ್ರಮಗಳು ತಾಂಡವವಾಡುತ್ತಿವೆ. ಇತ್ತೀಚಿನ ಚುನಾವಣೆಗಳಲ್ಲಿ ಈ ಕ್ಷೇತ್ರದಲ್ಲಿ ಮತಗಟ್ಟೆ ವಶ, ರಿಗ್ಗಿಂಗ್ ಮಾಮೂಲಿನ ವಿದ್ಯಮಾನವಾಗಿದೆ. ಈಗ ಸಿಪಿಐ(ಎಂ) ಪಕ್ಷದ ಪೋಸ್ಟರ್‌ಗಳನ್ನು ಕಿತ್ತು ಹಾಕುವುದು, ಗೋಡೆ ಬರಹ ಅಳಿಸಿ ಹಾಕುವುದು ಮುಂತಾದವುಗಳು ವ್ಯಾಪಕವಾಗಿ ನಡೆದಿವೆ. ಹಿಂದೆಲ್ಲಾ ಹಲವು ಚುನಾವಣೆಗಳಲ್ಲಿ ಎಡರಂಗದ ಬೆಂಬಲಿಗರಿಗೆ ಮತವನ್ನೇ ಹಾಕಲು ಬಿಟ್ಟಿರಲಿಲ್ಲ. ಎಷ್ಟೋ ಕಡೆ ವಿರೋಧ ಪಕ್ಷಗಳ ಅಭ್ಯರ್ಥಿಗಳನ್ನೇ ಮತಗಟ್ಟೆಯೊಳಕ್ಕೆ ಸಹ ಬಿಟ್ಟಿರಲಿಲ್ಲ. ವಿರೋಧ ಪಕ್ಷಗಳ ಮುಖಂಡರು 'ಕಾಲಿಡಬಾರದು' ಎಂಬಂತಹ 'ನಿಷೇದಿತ ಪ್ರದೇಶ'ಗಳು ಈಗಲೂ ಕ್ಷೇತ್ರದಲ್ಲಿ ಇವೆ. ಗೂಂಡಾಗಿರಿ ಮತ್ತು ಪೋಲಿಸರ ಶಾಮೀಲುಗಳಿಂದ ಇಂತಹ ಪರಿಸ್ಥಿತಿ ಮುಂದುವರೆದಿದೆ.

ಈ ಕ್ಷೇತ್ರದ ಒಂದು ಕುಗ್ರಾಮ ಬಸುಲ್‌ದಂಗಾದಲ್ಲಿ ಹುಟ್ಟಿದ ಹುಡುಗ ಪ್ರತಿಕುರ್ ರೆಹಮಾನ್. ಈತ ಓದಿದ್ದು, ಇದೇ ಡೈಮಂಡ್ ಹಾರ್ಬರ್‌ನಲ್ಲಿ. ಇವರು ವಿದ್ಯಾರ್ಥಿ ಚಳುವಳಿಯಲ್ಲಿ ರೂಪಗೊಂಡ ಜನಪರ ಹೋರಾಟಗಾರ. ತೃಣಮೂಲ ಪಕ್ಷದ ಗೂಂಡಾಗಳು ಇವರ ಮೇಲೆ ಹಲವು ಬಾರಿ ಮಾರಣಾಂತಿಕ ಹಲ್ಲೆಗಳನ್ನು ನಡೆಸಿದ್ದಾರೆ. ಕೊಲ್ಲಲು ಯತ್ನಿಸಿದ್ದಾರೆ. ಆದರೆ ಪ್ರತಿಕುರ್ ರೆಹಮಾನ್ ಹಿಮ್ಮೆಟ್ಟಲಿಲ್ಲ. ತನ್ನ ಚಿರಪರಿಚಿತವಾದ ಕ್ಷೇತದಲ್ಲಿ ಈಗ ಚುನಾವಣೆಯ ಪ್ರಚಾರದ ಭಾಗವಾಗಿ ಮನೆ ಮನೆ ಪ್ರಚಾರದಲ್ಲಿ ತೊಡಗಿದ್ದಾರೆ. ಪ್ರಜಾಪ್ರಭುತ್ವದ ಉಳಿವಿಗಾಗಿ, ಪಾರದರ್ಶಕತೆಗಾಗಿ ನಡೆಯುತ್ತಿರುವ ಹೋರಾಟವನ್ನು ಬೆಂಬಲಿಸಿ ಎಂಬುದು ಇವರ ಮನವಿ. ಮುಖ್ಯಮಂತ್ರಿಗಳ ಸೋದರಳಿಯ ಹೇಳುವಂತಹ ರೀತಿಯಲ್ಲಿ ಈ ಕ್ಷೇತ್ರವೇನು ಪ್ರಗತಿಯ ಹೊಳಪಿನಿಂದ ಥಳಥಳಿಸುತ್ತಿಲ್ಲ. ನಿರುದ್ಯೋಗ, ವಲಸೆ, ಕಲುಷಿತ ನೀರು, ಭೂ ಕಬಳಿಕೆ, ಅಭಿವೃದ್ಧಿ ಕೊರತೆ, ಸಮಸ್ಯೆಗಳು ಕ್ಷೇತ್ರವನ್ನು ಕಾಡುತ್ತಿವೆ. ಜೊತೆಗೆ ಕೋಮು ದ್ವೇಷ, ಮತಾಂಧತೆ ಮುಂತಾದ ಹಲವು ಸಮಸ್ಯೆಗಳು ಬೇರೆ. ಈ ಸಮಸ್ಯೆಗಳ ವಿರುದ್ಧ, ಜನಪರ ಪರ್ಯಾಯ ನೀತಿಗಳಿಗಾಗಿ ಎಡಪಕ್ಷಗಳಿಂದ ಕ್ಷೇತ್ರದಲ್ಲಿ ಉತ್ಸಾಹದ ಪ್ರಚಾರ ಕಾರ್ಯ ನಡೆದಿದೆ.

ಜಾದವ ಪುರ: ಸಮಗ್ರ ಅಭಿವೃದ್ಧಿಗಾಗಿ
ಸ್ರಿಜನ್ ಭಟ್ಟಾಚಾರ್ಯ ಮನವಿ

ಜಾದವ ಪುರ ಕ್ಷೇತ್ರದಲ್ಲಿ ಎಸ್.ಎಫ್.ಐ.ನ ಮಾಜಿ ರಾಜ್ಯ ಕಾರ್ಯದರ್ಶಿ ಸ್ರಿಜನ್ ಭಟ್ಟಾಚಾರ್ಯ ಅಭ್ಯರ್ಥಿ. ಸ್ರಿಜನ್ ಜಾದವ ಪುರ್ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಜಾದವ್‌ಪುರ್ ಕೋಲ್ಕತ್ತಾದ ದಕ್ಷಿಣ ಭಾಗದ ಪಟ್ಟಣ ಪ್ರದೇಶಗಳನ್ನು ಒಳಗೊಂಡ ವಿಶಾಲ ಕ್ಷೇತ್ರ. 2009 ರಿಂದ ಮೂರು ಬಾರಿ ಟಿಎಂಸಿಯ ಅಭ್ಯರ್ಥಿಗಳು ಇಲ್ಲಿ ಗೆದ್ದಿದ್ದಾರೆ. ಆದರೆ ಸಂಸದರಿಗೆ ಜನರ ಜೊತೆ ನೇರ ಸಂಪರ್ಕವಿಲ್ಲ. ಹಾಲಿ ಸಂಸದೆ ಚಿತ್ರನಟಿ, ಗಾಯಕಿ, ಅರೆಕಾಲಿಕ ರಾಜಕಾರಣಿ, ಅನಿವಾಸಿ ಭಾರತೀಯ ಮಹಿಳೆಯೂ ಆಗಿರುವ 'ಮಿಮಿ ಚಕ್ರವರ್ತಿ'ಯವರಿಗೂ ಜನರ ಜೊತೆ ನೇರ ಸಂಪರ್ಕವಿಲ್ಲ. ಕೊರೊನ ಸಾಂಕ್ರಾಮಿಕದ ಸಂಕಷ್ಟ ಕಾಲದಲ್ಲಿಯೂ ಈ ಯುವ ಸಂಸದೆ ನಾಪತ್ತೆಯಾಗಿದ್ದರು. ಜನರ ಸಿಟ್ಟು ತಣಿಸುವ ಉದ್ದೇಶದಿಂದ ಪ್ರತಿ ಸಾರಿಯೂ ಇಲ್ಲಿ ತೃಣಮೂಲ ತನ್ನ ಅಭ್ಯರ್ಥಿಯನ್ನು ಬದಲಿಸುತ್ತಾ ಬಂದಿದೆ. ಈಗಲೂ ಅದನ್ನೆ ಮಾಡಿದೆ.

ಜಾದವಪುರದ ಇತಿಹಾಸ ನೋಡಿದರೆ ಅದು ಐತಿಹಾಸಿಕವಾಗಿ ಎಡಪಕ್ಷಗಳನ್ನು ಬೆಂಬಲಿಸುತ್ತಾ ಬಂದ ಕ್ಷೇತ್ರ. ಈಗ ಕ್ಷೇತ್ರದ ಜನರು ಮುಕ್ತವಾಗಿ, ನ್ಯಾಯಸಮ್ಮತವಾಗಿ ಮತದಾನ ಮಾಡಲು ಅವಕಾಶವಾದರೆ, ಸಿಪಿಐ(ಎಂ) ಅಭ್ಯರ್ಥಿಯ ಗೆಲುವು ಖಚಿತ ಎನ್ನುತ್ತಾರೆ ಸ್ರಿಜನ್. ಬೃಂದಾ ಕಾರತ್, ಸೂರ್ಯಕಾಂತ ಮಿಶ್ರ, ಮಹಮದ್ ಸಲೀಂ ಮುಂತಾದ ಹಿರಿಯ ಸಿಪಿಐ(ಎಂ) ನಾಯಕರು, ಹಾಗೂ ರಾಜ್ಯದ ವಿದ್ಯಾರ್ಥಿ ಯುವಜನ ಮುಖಂಡರು ಇಲ್ಲಿ ಚುನಾವಣಾ ಪ್ರಚಾರ ಮಾಡುತ್ತಿದ್ದಾರೆ. ಸಾಹಿತಿ ಚಿಂತಕರೂ ಬೆಂಬಲಿಸಿದ್ದಾರೆ. ಟಿಎಂಸಿಯು ರಾಜಕೀಯ, ಸಾಮಾಜಿಕ ವಿಷಯಗಳನ್ನು ಬಿಟ್ಟು ವೈಯುಕ್ತಿಕ ದಾಳಿ ನಡೆಸುತ್ತಿದೆ.

ವ್ಯಕ್ತಿಗಳ ಖಾಸಗಿ ಲಾಭಕ್ಕಾಗಿ ರಾಜಕಾರಣ ಸಲ್ಲದು ಎಂದು ಪ್ರತಿಪಾದಿಸುತ್ತಿರುವ ಸ್ರಿಜನ್ ಶಿಕ್ಷಣ ಸೌಲಭ್ಯಗಳ ವಿಸ್ತರಣೆ, ಮೂಲಭೂತ ಸೌಕರ್ಯಗಳಿಗಾಗಿ ಹಾಗೂ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವುದಾಗಿ ಜನತೆಗೆ ಭರವಸೆ ನೀಡುತ್ತಿದ್ದಾರೆ. ಗೆದ್ದರೆ ಮೊತ್ತ ಮೊದಲ ದಿನವೇ ಲೋಕಸಭೆಯಲ್ಲಿ ಉದ್ಯೋಗವನ್ನು ಮೂಲಭೂತ ಹಕ್ಕುಗಳ ಪಟ್ಟಿಗೆ ಸೇರಿಸುವಂತೆ, ಜನರಿಗೆ ಉದ್ಯೋಗ ಖಾತ್ರಿ ನೀಡುವಂತೆ ದನಿ ಎತ್ತುವುದಾಗಿ ಮಾತು ಕೊಡುತ್ತಿದ್ದಾರೆ.

ಗ ́ ರಿ ಂ ್ರ ́ ್ರ ದಿ ಂ ದ ́ ಬರುಯ್‌ಪುರ್‌ವರೆಗೆ ಮೆಟ್ರೋ ರೈಲುಗಳ ವಿಸ್ತರಣೆ, ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಗೆ ಸಂಬಂಧಿಸಿದಂತೆ ಕೇಂದ್ರ ಯೋಜನೆಗಳ ಜಾರಿ, ಜಲಾಶಯಗಳು ಮತ್ತು ನಾಲೆಗಳ ರಿಪೇರಿ ಮತ್ತು ಸುಧಾರಣೆ, ಭೂ ಕಬಳಿಕೆ ವಿರುದ್ಧ ಕ್ರಮ, ಸೋನಾಪುರ್‌ದಂತಹ ಕಡೆ ಮೇಲ್ ಸೇತುವೆ, ಭಂಗಾರ್‌ನಲ್ಲಿ ಆಸ್ಪತ್ರೆ, ಬರುಯ್‌ಪುರ್‌ನಲ್ಲಿ ಹಣ್ಣುಗಳ ಸಂಸ್ಕರಣಾ ಘಟಕಗಳು, ಹಣ್ಣುಗಳ ಆಮದು ಮಾಡಲು ಸಹಾಯ ಕೇಂದ್ರಗಳನ್ನು ಸ್ಥಾಪಿಸುವುದು ಕಾಂಗ್ರೆಸ್ ಬೆಂಬಲಿತ ಎಡಪಕ್ಷಗಳ ಪ್ರಚಾರದ ವಿಚಾರಗಳಾಗಿವೆ. ಸಿಪಿಐ(ಎಂ) ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ಸಮಗ್ರ ಯೋಜನೆ ರೂಪಿಸಿ ಜನರ ಮುಂದೆ ಇಟ್ಟಿದೆ.



ಭಂಗಾರ್ ವಿಧಾನ ಸಭಾ ಕ್ಷೇತ್ರವು ಇದೇ ಲೋಕಸಭಾ ಕ್ಷೇತ್ರದಲ್ಲಿ ಬರುತ್ತದೆ. ಈ ಕ್ಷೇತ್ರದಲ್ಲಿ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಎಡಪಕ್ಷಗಳು ಮತ್ತು ಕಾಂಗ್ರೆಸ್ ಬೆಂಬಲಿತ 'ಇಂಡಿಯನ್ ಸೆಕ್ಯುಲರ್ ಫ್ರಂಟ್–ಐ.ಎಸ್.ಎಫ್.' ಅಭ್ಯರ್ಥಿ ನೌಶಾದ್ ಸಿದ್ದಿಕಿಯವರು ಬಿಜೆಪಿ ಮತ್ತು ತೃಣಮೂಲ ಅಭ್ಯರ್ಥಿಗಳನ್ನು ಹಿಂದಿಕ್ಕಿ ಗೆದ್ದಿದ್ದರು. ಆದರೆ ಟಿಎಂಸಿ ಸರಕಾರ ಕಳೆದ ಮೂರು ವರ್ಷಗಳಲ್ಲಿ ನೌಶಾದ್ ಸಿದ್ದಿಕಿಯವರಿಗೆ ಹಲವು ರೀತಿಯ ಚಿತ್ರಹಿಂಸೆಗಳನ್ನು ನೀಡಿತು. ಸುಳ್ಳು ಆಪಾದನೆಗಳ ಮೇಲೆ ಜೈಲಿಗೂ ಕಳಿಸಿತ್ತು. ಕಾರಣಾಂತರಗಳಿಂದ ಈ ಚುನಾವಣೆಯಲ್ಲಿ ಎಡಪಕ್ಷಗಳು ಮತ್ತು ಕಾಂಗ್ರೆಸ್‌ಗಳ ಹೊಂದಾಣಿಕೆಯೊಂದಿಗೆ ಐ.ಎಸ್.ಎಫ್. ಸೇರಿಕೊಳ್ಳಲು ಸಾಧ್ಯವಾಗಿಲ್ಲ. ಆದರೆ ಈ ಸಂಬಂಧ ಸ್ಪಷ್ಟೀಕರಣ ನೀಡಿರುವ ಮಹಮದ್ ಸಲೀಮ್ ಅವರು ಈ ಪರಿಸ್ಥಿತಿ ತಾತ್ಕಾಲಿಕ, ಕೋಮುವಾದಿ ಬಿಜೆಪಿ ಮತ್ತು ಪ್ರಜಾಪ್ರಭುತ್ವ ವಿರೋಧಿ ತೃಣಮೂಲದ ವಿರುದ್ಧ ಇರುವ ಎಲ್ಲ ಶಕ್ತಿಗಳೂ ಒಂದುಗೂಡಬೇಕಾದ ಅಗತ್ಯವಿದ್ದು, ಮುಂದಿನ ದಿನಗಳಲ್ಲಾದರೂ ಐ.ಎಸ್.ಎಫ್. ಈ ಹೋರಾಟದಲ್ಲಿ ಜೊತೆಗೂಡುತ್ತದೆ ಎಂದು ಆಶಯ ವ್ಯಕ್ತಪಡಿಸಿದ್ದಾರೆ.

ಶ್ರೀರಾಮಪುರ್ ದಲ್ಲಿ ದೀಪ್ಸಿತಾ ಧರ್
'ಮಹಿಳಾ ಸಬಲೀಕರಣ'ದ ಪ್ರಶ್ನೆಗಳು

ಎಸ್.ಎಫ್.ಐ.ನ ಹಾಲಿ ಅಖಿಲ ಭಾರತ ಜಂಟಿ ಕಾರ್ಯದರ್ಶಿ, ಜೆ.ಎನ್.ಯು. ವಿವಿಯ ವಿದ್ಯಾರ್ಥಿ ನಾಯಕಿ, ದೀಪ್ಸಿತಾ ಧರ್, ಶ್ರೀರಾಮಪುರ್ ಕ್ಷೇತ್ರದಿಂದ ಕಾಂಗ್ರೆಸ್–ಎಡಪಕ್ಷ ಬೆಂಬಲಿತ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.



ಮೇ 20, 2024 ರಂದು ಇಲ್ಲಿ ಚುನಾವಣೆ. ದೀಪ್ಸಿತಾ ಧರ್ ಗೆದ್ದರೆ 1952 ರ ಚುನಾವಣೆಯ ಕಾಲದಿಂದಲೂ ಈ ಕ್ಷೇತ್ರದಲ್ಲಿ ಗೆದ್ದ ಮೊದಲ ಮಹಿಳಾ ಅಭ್ಯರ್ಥಿಯಾಗಲಿದ್ದಾರೆ. ಚುನಾವಣಾ ಪ್ರಚಾರದಲ್ಲಿ ಮಹಿಳಾ ಸಬಲೀಕರಣ ಒಂದು ಮುಖ್ಯ ಪ್ರಶ್ನೆಯಾಗಿದ್ದು ಈ ವಿಷಯದಲ್ಲಿ ದೀಪ್ಸಿತಾ ಧರ್ ಮಾತುಗಳು ವಿಶೇಷ ಗಮನ ಸೆಳೆಯುತ್ತಿವೆ. ಮಹಿಳೆಯರು ಕೆಲಸ ಮಾಡುವ ಕಡೆಗಳಲ್ಲಿ ಶಿಶುಪಾಲನ ಕೇಂದ್ರಗಳನ್ನು ಆರಂಭಿಸುವುದು, ತಾತ್ಕಾಲಿಕ ಮತ್ತು ಗುತ್ತಿಗೆ ಕೆಲಸಗಾರರಿಗೆ, ಅಸಂಘಟಿತ ಕಾರ್ಮಿಕರಿಗೆ ತಂಗಲು ನಿರೀಕ್ಷಣಾ ಕೇಂದ್ರಗಳು, ನಗರ ಪ್ರದೇಶಗಳಲ್ಲಿ ಮಹಿಳೆಯರಿಗೇ ಪ್ರತ್ಯೇಕವಾದ ಶೌಚಾಲಯ ಮತ್ತು ಸ್ನಾನದ ಮನೆಗಳು, ದೌರ್ಜನ್ಯಗಳ ವಿರುದ್ಧ ಸ್ವಯಂ ರಕ್ಷಣೆಗಾಗಿ ಮಹಿಳೆಯರಿಗೆ ತರಬೇತಿ ಕಾರ್ಯಾಗಾರಗಳು ಮುಂತಾದವುಗಳನ್ನು ಚರ್ಚೆಯ ಮುಖ್ಯ ವಿಷಯಗಳನ್ನಾಗಿ ಪ್ರಸ್ತಾಪಿಸಲಾಗುತ್ತಿದೆ. ದೀಪ್ಸಿತಾ ಧರ್ ಅವರ ಆಕರ್ಷಕ ಮಾತುಗಳು ದೊಡ್ಡ ಪ್ರಮಾಣದಲ್ಲಿ ಜನರನ್ನು ಯುವಜನರನ್ನು ಸೆಳೆಯುತ್ತಿವೆ. ಭಾಷಣದ ನಡುವೆ ದೀಪ್ಸಿತಾ ಮಾತು ನಿಲ್ಲಿಸಿ

ಪುಟ 10 ಕ್ಕೆ

ಮಹಾರಾಷ್ಟ್ರ: ಕೋಮುವಾದಿ ಕೂಟದ ವಿರುದ್ಧ ಎಂ.ವಿ.ಎ.– ಇಂಡಿಯಾ ಕೂಟದ ಮೇಲುಗೈ



ಬೋಯ್ಸಾರ್‌ನಲ್ಲಿ ಬಹಿರಂಗ ಸಭೆ

ಉತ್ತರ ಪ್ರದೇಶದ ನಂತರ ಅತ್ಯಂತ ಹೆಚ್ಚು, ಅಂದರೆ 48 ಸಂಸದರನ್ನು ಆಯ್ಕೆ ಮಾಡುವ ದೊಡ್ಡ ರಾಜ್ಯ ಮಹಾರಾಷ್ಟ್ರ. ರಾಜ್ಯದ ಅರ್ಧದಷ್ಟು ಕ್ಷೇತ್ರಗಳಲ್ಲಿ ಚುನಾವಣೆ ಮುಗಿದ ಮೇಲೆ ಕಂಡು ಬಂದಿರುವ ಸನ್ನಿವೇಶ ಇದು. ಮಹಾರಾಷ್ಟ್ರದಲ್ಲಿ ಮಹಾವಿಕಾಸ ಅಗಾಡಿ–ಎಂ.ವಿ.ಎ. ಮತ್ತು ಇಂಡಿಯಾ ಒಕ್ಕೂಟಕ್ಕೆ ಸ್ಪಷ್ಟವಾಗಿ ಅನುಕೂಲಕರವಾದ ವಾತಾವರಣ ಸೃಷ್ಟಿಯಾಗಿದೆ. ರಾಜ್ಯದಲ್ಲಿ ಎಂ.ವಿ.ಎ. ಒಕ್ಕೂಟದಲ್ಲಿ ಎನ್.ಸಿ.ಪಿ.(ಶರದ್ ಪವಾರ್), ಕಾಂಗ್ರೆಸ್ ಮತ್ತು ಶಿವಸೇನೆ(ಉದ್ಧವ್ ಠಾಕ್ರೆ) ಅಲ್ಲದೇ ಎಡಪಕ್ಷಗಳು ಮತ್ತಿತರ ಸಣ್ಣ ಪಕ್ಷಗಳೂ ಇವೆ. ಮತ್ತೊಂದು ಕಡೆ ಶಿವಸೇನೆಯನ್ನು ಒಡೆದುಕೊಂಡು ಹೋಗಿರುವ ಏಕನಾಥ ಸಿಂಧೆ ಬಣ, ಎನ್.ಸಿ.ಪಿ.ಯನ್ನು ಒಡೆದುಕೊಂಡು ಹೋಗಿರುವ ಅಜಿತ್ ಪವಾರ್ ಬಣ, ರಾಜ್ ಠಾಕ್ರೆ ನೇತೃತ್ವದ ಮಹಾರಾಷ್ಟ್ರ ನವನಿರ್ಮಾಣ ಸೇನೆ ಮತ್ತು ಬಿಜೆಪಿಗಳು ಇವೆ.

ಎನ್.ಸಿ.ಪಿ. ಹಾಗೂ ಶಿವಸೇನೆಗಳನ್ನು ಮೋದಿ–ಶಾ ನೇತೃತ್ವದ ಸರಕಾರ ತನ್ನ ಎಲ್ಲ ಅಧಿಕಾರ ಬಲ ಮತ್ತು ಹಣ ಬಲಗಳನ್ನು ದುರ್ಬಳಕೆ ಮಾಡಿ, ಬೆದರಿಕೆ ತಂತ್ರಗಳ ಮೂಲಕ ಒಡೆದು ಎಂ.ವಿ.ಎ. ಸರಕಾರವನ್ನು ಉರುಳಿಸಿದ್ದು ದೇಶಕ್ಕೆಲ್ಲಾ ಗೊತ್ತಿದೆ.

ದಿಂಡೋರಿ ಬಿಟ್ಟು ಹಿಂಗೋಲಿಯಲ್ಲಿ ಸಿಪಿಐ(ಎಂ) ಸ್ಪರ್ಧೆ

ನಾಸಿಕ್ ಜಿಲ್ಲೆಯ ದಿಂಡೋರಿ(ಎಸ್.ಟಿ.) ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿ, ಏಳು ಬಾರಿ ಇಲ್ಲಿ ಶಾಸಕರಾಗಿರುವ ಜೆ.ಪಿ. ಗವಿತ್ ಕಳೆದ ಲೋಕಸಭಾ ಚುನಾವಣೆಯಲ್ಲಿ ಯಾವ ಪ್ರಮುಖ ಪಕ್ಷಗಳ ಬೆಂಬಲವೂ ಇಲ್ಲದೇ ಏಕಾಂಗಿಯಾಗಿ 1,09,000 ಮತಗಳನ್ನು ಪಡೆದುಕೊಂಡಿದ್ದರು. ಸಿಪಿಐ(ಎಂ) ಸತತ ಪ್ರಯತ್ನಗಳ ನಂತರವೂ ಈ ಕ್ಷೇತ್ರವು ಎನ್.ಸಿ.ಪಿ. ಪಾಲಾಯಿತು. ಮೈತ್ರಿಕೂಟದ ಒಟ್ಟು ಹಿತ, ಅಕ್ಟೋಬರ್‌ನಲ್ಲಿ ನಡೆಯಲಿರುವ ವಿಧಾನ ಸಭಾ ಚುನಾವಣೆ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಿಪಿಐ(ಎಂ) ಇಲ್ಲಿ ಸ್ಪರ್ಧಿಸದೇ ಇರಲು, ಪಕ್ಷದ ಕೇಂದ್ರ ಸಮಿತಿಯ ತೀರ್ಮಾನದಂತೆ ಹಿಂಗೋಲಿ ಕ್ಷೇತ್ರದಲ್ಲಿ ಸ್ಪರ್ಧಿಸಲು ತೀರ್ಮಾನಿಸಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ವಿಜಯ್ ಗಭಾನೆ ಹಿಂಗೋಲಿಯಲ್ಲಿ ಸ್ಪರ್ಧಿಸಿದ್ದು, ಉತ್ಸಾಹ ಪ್ರಚಾರ ನಡೆದಿದೆ. ಉಳಿದ 47 ಕ್ಷೇತ್ರಗಳಲ್ಲೂ ಬಿಜೆಪಿ–ಶಿವಸೇನೆ ನೇತೃತ್ವದ ಕೋಮುವಾದಿ ಕೂಟವನ್ನು ಸೋಲಿಸಲು ಸಿಪಿಐ(ಎಂ) ಗಂಭೀರವಾದ ಪ್ರಚಾರ ಕಾರ್ಯ ನಡೆಸುತ್ತಿದೆ.

ಈ ನಿಟ್ಟಿನಲ್ಲಿ ಪಾಲ್ಘರ್ ಕ್ಷೇತ್ರದ ಬೋಯ್ಸರ್‌ನಲ್ಲಿ ನಡೆದ ಇಪ್ಪತ್ತು ಸಾವಿರ ಜನರ ಬೃಹತ್ ಬಹಿರಂಗ ಸಭೆಯಲ್ಲಿ ಸುಮಾರು ಹತ್ತು ಸಾವಿರ ಜನರು ಸಿಪಿಐ(ಎಂ) ಅಣಿನೆರೆಸಿದವರಾಗಿದ್ದರು. ಮೈತ್ರಿಕೂಟದ ಈ ಬಹಿರಂಗ ಸಭೆಯಲ್ಲಿ ಹಾರಾಡುತ್ತಿದ್ದ ನೂರಾರು ಕೆಂಪು ಬಾವುಟಗಳು ವಿವಿಧ ಪಕ್ಷಗಳ ನಾಯಕರ ಮತ್ತು ನೆರೆದ ಜನರ ಗಮನ ಸೆಳೆದವು. ಶಿವಸೇನೆಯ ಮುಖಂಡರಾದ ಉದ್ಧವಠಾಕ್ರೆ, ಸಂಜಯ್ ರಾವತ್, ಸಿಪಿಐ(ಎಂ) ಪಾಲಿಟ್ ಬ್ಯುರೋ ಸದಸ್ಯರಾದ ಅಶೋಕ್ ಧವಳೆ ಮುಂತಾದವರು ಈ ಸಭೆಯಲ್ಲಿ ಮಾತನಾಡಿದರು.

ಭೀವಂಡಿ ಲೋಕಸಭಾ ಕ್ಷೇತ್ರದಲ್ಲಿಯೂ ಎನ್.ಸಿ.ಪಿ. ಅಭ್ಯರ್ಥಿಯ ಪರವಾಗಿ ಸಿಪಿಐ(ಎಂ) ವಾಡಾದಲ್ಲಿ ಬೃಹತ್ ಬಹಿರಂಗ ಸಭೆ ಸಂಘಟಿಸಿತ್ತು. ಇದಕ್ಕೂ ಮುಂಚೆ ಏಪ್ರಿಲ್ 30, 2024 ರಂದು ಎಂ.ವಿ.ಎ.–ಇಂಡಿಯಾ ಕೂಟದ ಪಕ್ಷಗಳು ಮತ್ತು ನಾನಾ ಸಾಮಾಜಿಕ ಸಂಘಟನೆಗಳ ಪ್ರತಿನಿಧಿಗಳು ಪಾಲ್ಗೊಂಡ ಸಂವಿಧಾನ ಮೌಲ್ಯಗಳ ರಕ್ಷಣೆಯ ಉದ್ದೇಶದ ಬೃಹತ್ ಸಮಾವೇಶವು ಮುಂಬೈನ ಶಿವಸೇನಾ ಭವನದಲ್ಲಿ ನಡೆದಿತ್ತು. ಈ ಸಭಾಂಗಣವು ರಾಜ್ಯದಲ್ಲಿ ಬಹಳ ದೀರ್ಘಕಾಲ ಪ್ರಜಾಪ್ರಭುತ್ವವಾದಿಗಳು, ಕಮ್ಯೂನಿಸ್ಟರು, ದಲಿತರು ಮತ್ತು ಅಲ್ಪಸಂಖ್ಯಾತರಿಗೆ ಇಷ್ಟವಾಗದ ಮತ್ತು ಒಗ್ಗದ ಜಾಗವಾಗಿತ್ತು. ಆಗಿನ ಕಾರಣವೂ ಸರಿಯಾದುದೇ ಆಗಿತ್ತು. ಆದರೆ ಈ ಅವಧಿಯಲ್ಲಿ ದೇಶದ ಮತ್ತು ಮಹಾರಾಷ್ಟ್ರದ ರಾಜಕಾರಣದಲ್ಲಿ ಮತ್ತು ಶಿವಸೇನೆಯ ಒಳಗೆ ಅತ್ಯಂತ ಮಹತ್ತರ ಬದಲಾವಣೆಗಳಾಗಿರುವುದನ್ನು ದೇಶದ ಜನ ಗುರುತಿಸಿದ್ದಾರೆ. ಎನ್.ಡಿ.ಎ. ಮತ್ತು ಮಿತ್ರಪಕ್ಷಗಳ ದೇಶವಿರೋಧಿ ನೀತಿಗಳ ವಿರುದ್ಧ ಸಂಘರ್ಷ ಮುಂದುವರೆದಿದೆ. ●

ಪ.ಬ.: ಗಮನ ಸೆಳೆಯುತ್ತಿರುವ ಎಡರಂಗ...... ಪುಟ 9 ರಿಂದ

ಹೋರಾಟದ ಹಾಡುಗಳನ್ನೂ ಹಾಡುತ್ತಾರೆ.

ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹೂಗ್ಲಿ ಕೈಗಾರಿಕಾ ಪ್ರದೇಶವನ್ನು ಒಂದೊಂದು ಕಾರ್ಖಾನೆಯನ್ನು ಜತನದಿಂದ ಸ್ಥಾಪಿಸುವ ಮೂಲಕ ಕಟ್ಟಲಾಗಿತ್ತು. ಸೆಣಬು, ಹತ್ತಿ ಗಿರಣಿಗಳು, ಕಾರು ಉತ್ಪಾದಕ ಕಾರ್ಖಾನೆಗಳು, ಟೈರು ಉತ್ಪಾದಕ ಕೈಗಾರಿಕೆಗಳು ಇಲ್ಲಿ ಹೀಗೆ ಸ್ಥಾಪಿತವಾಗಿದ್ದವು. ಈಗ ಈ ಕೈಗಾರಿಕೆಗಳು ವಿಶೇಷವಾಗಿ ಇಲ್ಲಿನ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಬಹಳ ದುಸ್ಥಿತಿಗೆ ತಲುಪಿವೆ.

ಕಳೆದ ಮೂರು ಬಾರಿ ಈ ಕ್ಷೇತ್ರದಿಂದ ಚುನಾಯಿತರಾಗಿರುವ ತೃಣಮೂಲ ಸಂಸದ ಈ ವಿಷಯದಲ್ಲಿ ಯಾವ ಕ್ರಮವನ್ನೂ ವಹಿಸಿಲ್ಲ. ಸಿಪಿಐ(ಎಂ) ರಾಜ್‌ಬಲ್ಹಾಟ್‌ನಲ್ಲಿ ಸೆಣಬು ಸಂಸ್ಕರಣಾ ಕೈಗಾರಿಕೆ ಸ್ಥಾಪಿಸಲು ಮುತುವರ್ಜಿ ವಹಿಸುವುದಾಗಿ ಭರವಸೆ ನೀಡಿದೆ. ಬಿಕ್ಕಟ್ಟಿನಲ್ಲಿರುವ ಸಾರ್ವಜನಿಕ ಕೈಗಾರಿಕೆಗಳಿಗೆ ಸಾರ್ವಜನಿಕ ಹೂಡಿಕೆಯನ್ನು ತರಲು ಪ್ರಯತ್ನಿಸುವುದಾಗಿಯೂ ಹೇಳಿದೆ. ಇದಕ್ಕೆ ತದ್ವಿರುದ್ಧವಾಗಿ ತೃಣಮೂಲ ಸಂಸದರು ದೀಪ್ಸಿತಾ ವಿರುದ್ಧ ಕೀಳು ಮಟ್ಟದ ವೈಯಕ್ತಿಕ ನಿಂದನೆಯಲ್ಲಿ ತೊಡಗಿದ್ದಾರೆ. ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಕಂಡು ಬರುತ್ತಿರುವ ವಿಶೇಷ ಅಂಶ ಎಂದರೆ ಬಿಜೆಪಿ ಪಕ್ಷದ ಅಸ್ತಿತ್ವವೇ ಕಾಣದಂತಾಗಿರುವುದು. ಹೀಗಾಗಿ ಈ ಕ್ಷೇತ್ರದಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಸಿಪಿಐ(ಎಂ) ಅಭ್ಯರ್ಥಿಗಳ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದೆ.

ಹಿರಿಯ ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್, ಮಹಮದ್ ಸಲೀಮ್ ಮುಂತಾದವರು ಇಲ್ಲಿ ಪ್ರಚಾರದಲ್ಲಿ ಭಾಗಿಯಾಗಿದ್ದಾರೆ. ವಿದ್ಯಾರ್ಥಿ ಯುವಜನರು ವಿಶೇಷ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ●

ರಾಜಸ್ಥಾನ: ಬಿಜೆಪಿ ಕನಿಷ್ಠ 10 ಸೀಟು ಕಳೆದುಕೊಳ್ಳಲಿದೆ....... ಪುಟ 8 ರಿಂದ

ಉತ್ತರ ರಾಜಸ್ಥಾನದ ರೈತ ಪ್ರಧಾನ ಕ್ಷೇತ್ರಗಳಲ್ಲಿ ಬಲವಾದ ನೆಲೆ ಹೊಂದಿರುವ ಸಿಪಿಐ(ಎಂ)ಗೆ ಸೀಕರ್, ರಾಜ್ಯದ ಹಲವು ಆದಿವಾಸಿ ಕ್ಷೇತ್ರಗಳಲ್ಲಿ ನೆಲೆ ಹೊಂದಿರುವ 'ಭಾರತ ಆದಿವಾಸಿ ಪಕ್ಷ' ಕ್ಕೆ ಬಾನ್ಸ್ ವಾರಾ–ದುಂಗರ್ಪುರ ಮತ್ತು ರಾಷ್ಟ್ರೀಯ ಲೋಕತಾಂತ್ರಿಕ ಪಕ್ಷಕ್ಕೆ ನಗೌರ್ ಕ್ಷೇತ್ರಗಳನ್ನು ತಲಾ ಒಂದು ಸೀಟು ಬಿಟ್ಟುಕೊಟ್ಟಿದ್ದು ಮಹತ್ವದ ಬೆಳವಣಿಗೆ.

ರಾಜಸ್ಥಾನದ ಕಳೆದ ತಲಾ 3 ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಗಳ ವಿವಿಧ ಪಕ್ಷಗಳ ಸೀಟು ಮತ್ತು ಮತಗಳಿಕೆ ಪ್ರಮಾಣ ಕೋಷ್ಟಕ–1ರಲ್ಲಿ ಕೊಟ್ಟಿದೆ. ಇದರಿಂದ ಕಂಡು ಬರುವುದೆಂದರೆ, ರಾಜಸ್ಥಾನದ ಜನತೆ ಕರ್ನಾಟದಂತೆ ವಿಧಾನಸಭಾ ಚುನಾವಣೆಗಳಲ್ಲಿ ಪ್ರತಿ ಬಾರಿ ಆಳುವ ಪಕ್ಷವನ್ನು ಬದಲಾಯಿಸುತ್ತದೆ ಮತ್ತು ಲೋಕಸಭಾ ಚುನಾವಣೆಯಲ್ಲಿ ವಿಧಾನಸಭೆಗಿಂತ ಬಹಳ ಭಿನ್ನವಾಗಿ ಮತದಾನ ಮಾಡುತ್ತದೆ. ಸೀಟುಗಳ ದೃಷ್ಟಿಯಿಂದ ರಾಜಸ್ಥಾನದ ದ್ವಿ–ಪಕ್ಷೀಯ ಧ್ರುವೀಕರಣದ ರಾಜ್ಯದಂತೆ ಕಂಡರೂ ಮೂರನೆಯ ಶಕ್ತಿ ನಗಣ್ಯವೇನಲ್ಲ. ಶೇ.15–20 ಮತ ಪಡೆಯುತ್ತದೆ. ಈ ಪಕ್ಷಗಳ ಜತೆ ಇಂಡಿಯಾ ಕೂಟ ರಚಿಸಿಕೊಂಡಿರುವುದರಿಂದ ಕಾಂಗ್ರೆಸ್ ಬಲ ಮತ್ತು ಗೆಲುವಿನ ಸಾಧ್ಯತೆ ಹೆಚ್ಚಿದೆ. ಕಳೆದ 6 ಚುನಾವಣೆಗಳಲ್ಲಿ 4 ಚುನಾವಣೆಗಳಲ್ಲಿ ಬಿಜೆಪಿಗಿಂತ ಮತ್ತು ಬಿಜೆಪಿಯೇತರ ಮತಗಳು ಹೆಚ್ಚಿವೆಯೆಂದು ಗಮನಿಸಬೇಕು. ಅಲ್ಲದೆ ಇತ್ತೀಚಿನ ಚುನಾವಣೆಯಲ್ಲಿ ಕಾಂಗ್ರೆಸ್–ಬಿಜೆಪಿ ನಡುವೆ ಕೇವಲ ಶೇ.2 ಮತಗಳ ವ್ಯತ್ಯಾಸವಷ್ಟೇಯಿದೆ ಎಂಬುದನ್ನು ಗಮನಿಸಬೇಕು. ವಿಧಾನಸಭಾ ಚುನಾವಣೆಯಲ್ಲಿ ಇಂಡಿಯಾ ಕೂಟವಾಗಿ ಸ್ಪರ್ಧಿಸಿದ್ದರೆ ಬಿಜೆಪಿ ಪರಾಭವಗೊಳ್ಳುತ್ತಿತ್ತು ಎಂಬುದು ಕೋಷ್ಟಕದಿಂದ ಸ್ಪಷ್ಟ.

ಸ್ಪರ್ಧೆ ಮತ್ತು ಫಲಿತಾಂಶದ ಊಹಾಪೋಹ

ರಾಜಸ್ಥಾನದ 25 ಸೀಟುಗಳಲ್ಲಿ 266 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇವರಲ್ಲಿ 19 ಮಹಿಳೆಯರು ಇದ್ದಾರೆ. ಬಿಜೆಪಿ 5 ಮತ್ತು ಕಾಂಗ್ರೆಸ್ 3 ಮಹಿಳೆಯರಿಗೆ ಟಿಕೆಟ್ ನೀಡಿದೆ. ಪ್ರಸ್ತುತ ಕೇಂದ್ರ ಸಚಿವರಾಗಿದ್ದ ಭೂಪೇಂದ್ರ ಚೌಧರಿ (ಅಲ್ವರ್), ಗಜೇಂದ್ರ ಸಿಂಗ್ ಶೇಕಾವತ್ (ಜೋಧಪುರ), ಕೈಲಾಶ್ ಚೌಧರಿ (ಬಾರ್ಮೇರ್), ಅರ್ಜುನ್ ರಾಮ್ ಮೇಘವಲ್ (ಬಿಕಾನೇರ್) ಮತ್ತು ಸ್ಪೀಕರ್ ಓಮ್ ಬಿರ್ಲಾ (ಕೋಟಾ) ಕಣದಲ್ಲಿರುವ ಬಿಜೆಪಿ ಪ್ರಮುಖರು. ಮಾಜಿ ಕೇಂದ್ರ ಸಚಿವ ಮತ್ತು ವಿಧಾನಸಭಾ ಸ್ಪೀಕರ್ ಸಿ.ಪಿ. ಜೋಷಿ (ಭಿಲ್ವಾರ), ವೈಭವ್ ಗೆಹಲೋಟ್ (ಜಲೋರ್) ಮತ್ತು ಮಾಜಿ ಕೇಂದ್ರ ಸಚಿವ ಪ್ರತಾಪ್ ಕಚರಿಯಾಸ್ (ಜೈಪುರ) ಮುಂತಾದ ಕಾಂಗ್ರೆಸ್ ಪ್ರಮುಖರು ಕಣದಲ್ಲಿದ್ದಾರೆ. ನಾಲ್ಕು ಬಾರಿಯ ಶಾಸಕ, ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಮತ್ತು ಕಿಸಾನ್ ಸಭಾದ ಹಿರಿಯ ನಾಯಕ ಅಮ್ರಾ ರಾಮ್ (ಸೀಕರ್), ಭಾರತ ಆದಿವಾಸಿ ಪಕ್ಷದ ರಾಜಕುಮಾರ್ ರೋತ್ (ಬಾನ್ಸ ವಾರಾ) ಕಣದಲ್ಲಿರುವ ಇಂಡಿಯಾ ಕೂಟದ ಪ್ರಮುಖರು. ಹೆಚ್ಚು ಕಡಿಮೆ ಎಲ್ಲಾ ಸೀಟುಗಳಲ್ಲಿ ಬಿಜೆಪಿ ಮತ್ತು ಇಂಡಿಯಾ ಕೂಟದ ಅಭ್ಯರ್ಥಿಗಳ ನಡುವೆ ನೇರ ಸ್ಪರ್ಧೆಯಿದೆ.

ಬಿಜೆಪಿ ಇಂಡಿಯಾ ಕೂಟದ ಬಿರುಸಿನ ಸ್ಪರ್ಧೆ ಎದುರಿಸುತ್ತಿದ್ದು, ಸೀಕರ್ ನಲ್ಲಿ ಸಿಪಿಐ(ಎಂ), ಬಾನ್ಸ್ ವಾರಾ ದಲ್ಲಿ ಬಿ.ಎ.ಪಿ. ಸೇರಿದಂತೆ 10 ಸೀಟುಗಳಲ್ಲಿ ಇಂಡಿಯಾ ಕೂಟದ ಅಭ್ಯರ್ಥಿಗಳು ಮುನ್ನಡೆಯಲ್ಲಿದ್ದಾರೆ. ಕಳೆದ ಎರಡು ಲೋಕಸಭಾ ಚುನಾವಣೆಯ ಬಿಜೆಪಿಯ ಕ್ಲೀನ್ ಸ್ವೀಪ್ ಅಸಂಭವ ಮತ್ತು ಅದು ತನ್ನ ಪ್ರಾಬಲ್ಯ ಕಳೆದುಕೊಳ್ಳಲಿದೆ ಎಂಬುದು ಖಚಿತ.

'ಅಮ್ರಾ ರಾಂ ದಿಲ್ಲಿ ಜಾಯೆಂಗೆ!'

'ಅಮ್ರಾ ರಾಂ ದಿಲ್ಲಿ ಜಾಯೆಂಗೆ!' ಸೀಕರ್ ನ ಚುನಾವಣಾ ಪ್ರಚಾರದಲ್ಲಿ ಕೇಳಿಬಂದ ಘೋಷಣೆ. ರಾಜಸ್ಥಾನದಲ್ಲಿ ಇಂಡಿಯಾ ಕೂಟದ ಪಕ್ಷಗಳ ನಡುವೆ ಸೀಟು ಹೊಂದಾಣಿಕೆಯಾಗಿದ್ದು ಸಿಪಿಐ(ಎಂ) ಅಭ್ಯರ್ಥಿ ಕಾ. ಅಮ್ರಾರಾಂ ಇಂಡಿಯಾ ಕೂಟದ ಅಭ್ಯರ್ಥಿಯಾಗಿ ಸೀಕರ್ ನಲ್ಲಿ ಸ್ಪರ್ಧಿಸುತ್ತಿದ್ದಾರೆ. ಉತ್ತರ ರಾಜಸ್ಥಾನದಲ್ಲಿ ಹರಿಯಾಣ ಗಡಿಗೆ ಹೊಂದಿಕೊಂಡಿರುವ ಸೀಕರ್ ಜಿಲ್ಲೆ ಅಖಿಲ ಭಾರತ ಕಿಸಾನ್ ಸಭಾ ನಾಯಕತ್ವದ ರೈತ ಚಳುವಳಿಯ ಕೇಂದ್ರ. ರೈತ ಚಳುವಳಿಯ ಪ್ರಭಾವದಿಂದ ಈ ಪ್ರದೇಶದ ಹಲವು ವಿಧಾನಸಭೆ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸತತವಾಗಿ ಸ್ಪರ್ಧಿಸುತ್ತಿದ್ದು ಒಂದು ಬಾರಿ ಮೂರು ಕ್ಷೇತ್ರಗಳಲ್ಲಿ ಜಯಗಳಿಸಿತ್ತು. ಅಮ್ರಾ ರಾಂ ಅವರೇ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಕಿಸಾನ್ ಸಭಾದ ಅಖಿಲ ಭಾರತ ಅಧ್ಯಕ್ಷರಾಗಿದ್ದ ಅವರ ನಾಯಕತ್ವದಲ್ಲಿ ರಾಜಸ್ಥಾನದ ರೈತರು ಹಲವು ಯಶಸ್ವಿ ಹೋರಾಟಗಳನ್ನು ಮುನ್ನಡೆಸಿದ್ದಾರೆ. 'ರೈತರ ದನಿಯೇ ಕೇಳದ ಲೋಕಸಭೆಯಲ್ಲಿ ಅವರಿಗೆ ದನಿಯಾಗಲಿರುವ ಅಮ್ರಾ ರಾಂ ಅವರನ್ನು ದೆಹಲಿಗೆ ಕಳಿಸಲೇಬೇಕೆಂದು ರೈತರು ಮತ್ತು ಸೀಕರ್ ಜನತೆ ಪಣ ತೊಟ್ಟಿದ್ದಾರೆ. ಅವರು ಸೀಕರ್ ನಿಂದ 2004ರಿಂದ ಲೋಕಸಭಾ ಸ್ಥಾನಕ್ಕೆ ಸತತವಾಗಿ ಸ್ಪರ್ಧಿಸುತ್ತಿದ್ದು, ಸ್ವತಂತ್ರವಾಗಿ (ಯಾವುದೇ ಸೀಟು ಹೊಂದಾಣಿಕೆಯಿಲ್ಲದೆ) 1.6 ಲಕ್ಷ ದವರೆಗೂ ಮತಗಳಿಸಿದ್ದಾರೆ. ಈ ಸೀಟನಿಂದ 1998ರಿಂದ (2009 ಬಿಟ್ಟು) ಬಿಜೆಪಿ ಗೆಲ್ಲುತ್ತಿದ್ದರೂ, ಈ ಬಾರಿ ಬಿಜೆಪಿ–ವಿರೋಧಿ ಮತಗಳನ್ನು ಕ್ರೋಢೀಕರಿಸಿ ಅಮ್ರಾ ರಾಂ ವಿಜಯಿಯಾಗುತ್ತಾರೆ ಎಂದು ನಿರೀಕ್ಷಿಸಲಾಗಿದೆ. ●

ಖಜುರಾಹೊ–ಇಂದೋರ್ ನಿಂದ ಸೂರತ್ ಮೂಲಕ ಚುನಾವಣಾ–ಮುಕ್ತ ಭಾರತದೆಡೆಗೆ

ಚುನಾವಣೆಯಲ್ಲಿ ಯಾರು ಬಹುಮತ ಪಡೆಯುತ್ತಾರೋ ಅವರು ಸರ್ಕಾರ ರಚಿಸುತ್ತಾರೆ. ಇಲ್ಲದವರು ಅಧಿಕಾರದಿಂದ ಹೊರಗುಳಿಯುತ್ತಾರೆ. ಹಾಗಾಗಿ ಚುನಾವಣೆ ರಾಜಕೀಯ ಹಬ್ಬವಾಗುತ್ತದೆ. ಆದರೆ ಈ ಚುನಾವಣೆಯೂ ಹೋದರೆ ಹೇಗೆ? ಎಲ್ಲಾ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರೆ? ವರ್ಣರಂಜಿತ, ಬಹುತ್ವದ ಪ್ರಜಾಪ್ರಭುತ್ವವು ಸಾಯುತ್ತದೆ. ಮೋದಿಯವರ ಭಾರತ ನಮ್ಮನ್ನು ಭಯಾನಕ ರಾಜಕೀಯ ವಾತಾವರಣಕ್ಕೆ ಕೊಂಡೊಯ್ಯುತ್ತಿದೆ.

ವಿ.ಬಿ. ಪರಮೇಶ್ವರನ್

18ನೇ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸೂರತ್ ನಿಂದ ಆರಂಭವಾಗಿದೆ. ಈ ಎರಡು ಸ್ಥಾನಗಳಲ್ಲಿ (ಸೂರತ್ ಮತ್ತು ಇಂದೋರ್) ಗೆಲುವು ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎಗೆ 400 ಕ್ಕೂ ಹೆಚ್ಚು ಸ್ಥಾನಗಳನ್ನು ಗಳಿಸುವ ಬಿಜೆಪಿಯ ಗುರಿಯ ಪ್ರಾರಂಭವಾಗಿದೆ. ಬಿಹಾರದ ಸರನ್ ನಲ್ಲಿ ಬಿಜೆಪಿ ಅಭ್ಯರ್ಥಿ ರಾಜೀವ್ ಪ್ರತಾಪ್ ರೂಡಿ ನಾಮಪತ್ರ ಸಲ್ಲಿಸಿದ ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಬಿಜೆಪಿ ನಾಯಕ ರಾಜನಾಥ್ ಸಿಂಗ್ ಅವರ ಹೇಳಿಕೆ ಇದು.

18ನೇ ಲೋಕಸಭಾ ಚುನಾವಣೆಯಲ್ಲಿ ಮೊದಲ ಕಮಲ ಅರಳಿದೆ ಎಂದು ಗುಜರಾತ್ ಬಿಜೆಪಿ ಅಧ್ಯಕ್ಷ ಸಿಆರ್ ಪಾಟೀಲ್ ಪ್ರತಿಕ್ರಿಯೆ ನೀಡಿದ್ದಾರೆ. ರಾಷ್ಟ್ರೀಯ ರಕ್ಷಣಾ ಸಚಿವರು ಮತ್ತು ಪಾಟೀಲ್ ಅವರ ಪ್ರತಿಕ್ರಿಯೆಗಳು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರಿಗೆ ಭಯ ಹುಟ್ಟಿಸುವಂತಿವೆ. ಈ ಹೇಳಿಕೆಗಳು ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂಬ ವಿರೋಧ ಪಕ್ಷಗಳ ನಿರೂಪಣೆಯನ್ನು ಬಲಪಡಿಸುತ್ತದೆ.

ರಾಜನಾಥ್ ಸಿಂಗ್ ಇಲ್ಲಿ ಹೇಳುವ ಸೂರತ್ ಮತ್ತು ಇಂದೋರ್ ನಲ್ಲಿ ಬಿಜೆಪಿ ಹೇಗೆ ಗೆದ್ದಿತು ಎಂಬ ಪ್ರಶ್ನೆಯು ಆ ವಿಜಯದಲ್ಲಿ ಒಳಗೊಂಡಿರುವ ಪ್ರಜಾಸತ್ತಾತ್ಮಕ ನಿರಾಶೆಯತ್ತ ನಮ್ಮ ಗಮನವನ್ನು ಸೆಳೆಯುತ್ತದೆ. ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯುವ ಚುನಾವಣೆಯೇ ಸಂಸತ್ತಿನಲ್ಲಿ ಪ್ರಜಾಪ್ರಭುತ್ವದ ಸಾರ. ಈ ಒಪ್ಪಿಗೆಯ ಹಕ್ಕು ಭಾರತದ ಪ್ರಜೆಗೆ ಸಂವಿಧಾನ ನೀಡಿರುವ ಅತಿ ದೊಡ್ಡ ಹಕ್ಕು.

ಚುನಾವಣೆಯಲ್ಲಿ ಯಾರು ಬಹುಮತ ಪಡೆಯುತ್ತಾರೋ ಅವರು ಸರ್ಕಾರ ರಚಿಸುತ್ತಾರೆ. ಇಲ್ಲದವರು ಅಧಿಕಾರದಿಂದ ಹೊರಗುಳಿಯುತ್ತಾರೆ. ಹಾಗಾಗಿ ಚುನಾವಣೆ ರಾಜಕೀಯ ಹಬ್ಬವಾಗುತ್ತದೆ. ಆದರೆ ಈ ಚುನಾವಣೆಯೂ ಹೋದರೆ ಹೇಗೆ? ಎಲ್ಲಾ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರೆ? ವರ್ಣರಂಜಿತ, ಬಹುತ್ವದ ಪ್ರಜಾಪ್ರಭುತ್ವವು ಸಾಯುತ್ತದೆ. ಮೋದಿಯವರ ಭಾರತ ನಮ್ಮನ್ನು ಭಯಾನಕ ರಾಜಕೀಯ ವಾತಾವರಣಕ್ಕೆ ಕೊಂಡೊಯ್ಯುತ್ತಿದೆ.

ಇಲ್ಲಿ ಹೇಳಬೇಕಾದ ಇನ್ನೊಂದು ಅಂಶವಿದೆ. ಈ ಎರಡು ಕ್ಷೇತ್ರಗಳಲ್ಲಿ ವಿರೋಧ ಪಕ್ಷದ ಅಭ್ಯರ್ಥಿಗಳು ಗೈರುಹಾಜರಾಗಲು ಆಡಳಿತ ಪಕ್ಷದ ಉತ್ತಮ ಸಾಧನೆಯಿಂದ ತೃಪ್ತರಾಗಿರುವ ಜನತೆ ಸ್ಪರ್ಧಿಸಲು ಆಸಕ್ತಿ ತೋರದ ಕಾರಣ ಅಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಕಣಕ್ಕಿಳಿದ ಅಭ್ಯರ್ಥಿಗಳನ್ನು ಹೆದರಿಸಿ, ಆಮಿಷ ಒಡ್ಡಿ ಕೊನೆ ಕ್ಷಣದಲ್ಲಿ ನಾಮಪತ್ರ ಹಿಂಪಡೆಯುವಂತೆ ಮಾಡಲಾಗಿದೆ.

'ಒಂದು ದೇಶ, ಒಂದು ಚುನಾವಣೆ' ಎಂಬ ಘೋಷಣೆಯನ್ನು ಎತ್ತುತ್ತಿರುವ ಬಿಜೆಪಿಯೇ ವಿರೋಧ ಪಕ್ಷದ ಅಭ್ಯರ್ಥಿಗಳನ್ನು ಬಲವಂತವಾಗಿ ವಾಪಸ್ ಕರೆಸಿ ಚುನಾವಣೆಯನ್ನೇ ರದ್ದುಪಡಿಸುತ್ತಿದೆ. ಮತ್ತೊಂದೆಡೆ, ಚುನಾವಣೆಯನ್ನು ಏಳನೇ ಹಂತಕ್ಕೆ ಎಳೆದುಕೊಂಡು ಪ್ರತಿ ಕ್ಷೇತ್ರದಲ್ಲಿ ಪ್ರಚಾರಕ್ಕೆ ಆಡಳಿತಕ್ಕೆ ಅವಕಾಶ ಕಲ್ಪಿಸುವವರೇ ಅನಗತ್ಯ ಖರ್ಚು ಕಡಿಮೆ ಮಾಡಲು ಚುನಾವಣೆಯೇ ಬೇಡ ಎಂಬ ಸ್ಥಿತಿಗೆ ತಂದಿದ್ದಾರೆ.

ಮೋದಿಯವರ ಪ್ರಜಾಪ್ರಭುತ್ವ ಹೇಗಿದೆ? ಸೂರತ್ನಲ್ಲಿ ಚುನಾವಣೆಯನ್ನು ತಪ್ಪಿಸುವ ಹೊಸ ವಿರೋಧ ಮುಕ್ತ ಭಾರತವನ್ನು ಬಿಜೆಪಿ



ಪ್ರಾರಂಭಿಸಿದೆ. ಪ್ರಸಿದ್ಧ 'ಮೋದಿಯ ಭಾರತ' ಪುಸ್ತಕದ ಲೇಖಕ ಕ್ರಿಸ್ಟೋಫ್ ಗೆಫ್ರಾಲಾಟ್ ಹೇಳುವಂತೆ ಮೋದಿಯವರು ಭಾರತವನ್ನು 'ಚುನಾವಣಾ ನಿರಂಕುಶಾಧಿಕಾರ'ದಿಂದ ಚುನಾವಣೆಗಳಿಲ್ಲದ ಕಳಂಕಿತ ಸರ್ವಾಧಿಕಾರದತ್ತ ಮುನ್ನಡೆಸುತ್ತಿದ್ದಾರೆ.

ಫಾರ್ವರ್ಡ್ ಬ್ಲಾಕ್ ನ ಅಭ್ಯರ್ಥಿ ಇದ್ದುದರಿಂದ ಖಜುರಾಹೊದಲ್ಲಿ ವಿಫಲವಾದರು

2024 ಚುನಾವಣೆ ಎದುರಿಸದೇ ಗೆಲ್ಲುವ ಬಿಜೆಪಿಯ ತಂತ್ರ ಹೊರತಂದ ಮೊದಲ ಚುನಾವಣೆಯೂ ಹೌದು. ಸೂರತ್ನಿಂದ ಮುಖೇಶ್ ಕುಮಾರ್ ದಲಾಲ್ ಅವರು ಅವಿರೋಧವಾಗಿ ಆಯ್ಕೆಯಾದ ಮೊದಲ ಬಿಜೆಪಿ ಸಂಸದರಾಗಿದ್ದಾರೆ. ಆದರೆ ಈ ಪ್ರಜಾಪ್ರಭುತ್ವದ ಕೊಲೆ ಆರಂಭವಾದದ್ದು ಮಧ್ಯಪ್ರದೇಶದ ಖಜುರಾಹೊದಿಂದ. ನವೆಂಬರ್ ನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಇತರೆ ಜಾತ್ಯತೀತ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳದೆ ಸ್ಪರ್ಧಿಸಿ ದಯನೀಯವಾಗಿ ಸೋತಿದ್ದ ಕಾಂಗ್ರೆಸ್, ಲೋಕಸಭೆ ಚುನಾವಣೆಯಲ್ಲಿ ಸಮಾಜವಾದಿ ಪಕ್ಷಕ್ಕೆ ಸ್ಥಾನ ನೀಡಲು ಸಿದ್ಧವಾಗಿದೆ.

ಉತ್ತರ ಪ್ರದೇಶದ ಗಡಿಯನ್ನು ಹಂಚಿಕೊಂಡಿರುವ ಮಧ್ಯಪ್ರದೇಶದ ಬುಂದೇಲ್ಗಢ ಪ್ರದೇಶದಲ್ಲಿ ಎಸ್‌ಪಿಯ ಪ್ರಭಾವವನ್ನು ಪರಿಗಣಿಸಿ ಖಜುರಾಹೊ ಸ್ಥಾನವನ್ನು ಕಾಂಗ್ರೆಸ್ ಸಮಾಜವಾದಿ ಪಕ್ಷಕ್ಕೆ ನೀಡಿತು. ಈ ಸ್ಥಾನಕ್ಕೆ ಎಸ್‌ಪಿಯ ಮಿರಾಯದವ್ ಕೂಡ ನಾಮಪತ್ರ ಸಲ್ಲಿಸಿದ್ದಾರೆ. ಆದರೆ ಬಿ ಫಾರಂನಲ್ಲಿ ಅಭ್ಯರ್ಥಿಯ ಸಹಿ ಇಲ್ಲ ಎಂದು ಪನ್ನಾ ಜಿಲ್ಲಾಧಿಕಾರಿ ಸುರೇಶ್ ಕುಮಾರ್ ನಾಮಪತ್ರವನ್ನು ತಿರಸ್ಕರಿಸಿದರು.


ನಾಮಪತ್ರ ಸಲ್ಲಿಕೆ ವೇಳೆಯೇ ಅಧಿಕಾರಿಗಳು ಇದನ್ನು ಗಮನಕ್ಕೆ ತಂದು ಸರಿಪಡಿಸಬಹುದಿತ್ತು. ಅದನ್ನು ಮಾಡದೆ ಬಿಜೆಪಿಯೊಂದಿಗೆ ಸೇರಿ ನಾಮಪತ್ರ ತಿರಸ್ಕರಿಸಿದ್ದಾರೆ ಎಂದು ಎಸ್ಪಿ ಮತ್ತು ಪ್ರತಿಪಕ್ಷಗಳು ಟೀಕಿಸಿವೆ. ಖಜುರಾಹೊದಲ್ಲಿ ಪ್ರಜಾಪ್ರಭುತ್ವದ ಕೊಲೆ ನಡೆದಿದೆ ಎಂದು ಎಸ್ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ.

ಇಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷ ವಿ.ಡಿ.ಶರ್ಮಾ ಅಭ್ಯರ್ಥಿಯಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಸುಮಾರು ಐದು ಲಕ್ಷ ಮತಗಳಿಂದ ಗೆದ್ದಿರುವ ಬಿಜೆಪಿ ಈ ಸ್ಥಾನವನ್ನು ಗೆಲ್ಲಲು ವಿರೋಧ ಪಕ್ಷದ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸುವ ಅಗತ್ಯವಿಲ್ಲ. ಆದರೂ ಪ್ರತಿಪಕ್ಷಗಳನ್ನು ತಟಸ್ಥಗೊಳಿಸುವ ಉದ್ದೇಶದಿಂದ ಬಿಜೆಪಿ ಇಂತಹ ಷಡ್ಯಂತ್ರದಲ್ಲಿ ತೊಡಗಿದೆ. ಆದರೆ ಇಲ್ಲಿ ಎಡಪಂಥೀಯ ಪಕ್ಷದ ಫಾರ್ವರ್ಡ್ ಬ್ಲಾಕ್ ನ ಅಭ್ಯರ್ಥಿ ಇರುವುದರಿಂದ ಹೆಸರಿಗಾದರೂ ಚುನಾವಣೆ ನಡೆಯಲಿದೆ. ಏಕೆಂದರೆ ಫಾರ್ವರ್ಡ್ ಬ್ಲಾಕ್ ಅಭ್ಯರ್ಥಿ ಆರ್.ಬಿ.ಪ್ರಜಾಪತಿಗೆ ಇಂಡಿಯಾ ಒಕ್ಕೂಟದ ಬೆಂಬಲ ಸಿಕ್ಕಿದೆ. ಎಡಪಕ್ಷಗಳು ಸ್ಪರ್ಧಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾಗುವ ಬಿಜೆಪಿಯ ಪ್ರಯತ್ನ ನಡೆಯಲಿಲ್ಲ.

ಸೂರತ್ನಲ್ಲಿ ಕಾಂಗ್ರೆಸ್ ಅಭ್ಯರ್ಥಿಯೂ ಭಾಗಿಯಾಗಿದ್ದಾರೆ

ಆದರೆ ಗುಜರಾತ್ನ ಸೂರತ್‌ನಲ್ಲಿ ಬಿಜೆಪಿ ಅಭ್ಯರ್ಥಿ ಮುಖೇಶ್ ಕುಮಾರ್ ದಲಾಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ನೀಲೇಶ್ ಕುಂಭಾಣಿ ಹಾಗೂ ಅದರ ಡಮ್ಮಿ ಅಭ್ಯರ್ಥಿ ಸುರೇಶ ಪಡಸಾಲ ಈ ಇಬ್ಬರ ನಾಮಪತ್ರ ತಿರಸ್ಕೃತಗೊಂಡಿದ್ದರಿಂದ ಬಿಜೆಪಿ ಅಭ್ಯರ್ಥಿಗೆ ಅವಿರೋಧವಾಗಿ ಆಯ್ಕೆಯಾಗುವ ಅವಕಾಶ ಸಿಕ್ಕಿತ್ತು. ಆದರೆ ಸೂರತ್ ನಲ್ಲಿ ನಡೆದ ಪ್ರಜಾಪ್ರಭುತ್ವ ಹತ್ಯೆಯು ಚುನಾವಣೆಯಿಲ್ಲದೆ ಗೆಲ್ಲುವ ಬಿಜೆಪಿಯ ಯೋಜನೆಯ ಭಾಗವಾಗಿದೆ.

ನೋವಿನ ಸಂಗತಿ ಎಂದರೆ ಈ ಷಡ್ಯಂತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯೂ ಭಾಗಿಯಾಗಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ನೀಲೇಶ್ ಕುಂಭಾಣಿ ಅವರ ನಾಮಪತ್ರದ ಸಹಿ ತಮ್ಮದಲ್ಲ ಎಂದು ಅಫಿಡವಿಟ್ ನೀಡಿದ ಮೂವರೂ ಕೂಡಾ ಕುಂಭಣಿಯವರ ಸಂಬಂಧಿಕರು. ಇವರಲ್ಲಿ ಜಗದೀಶ್ ಸಾವಲಿಯಾ ಕುಂಭಣಿಯವರ ಸೋದರಮಾವ. ಧ್ರುವಿನ್ ಧಮೇಲಿಯಾ ಸೋದರಳಿಯ ಮತ್ತು ರಮೇಶ್ ಪೋಲಾರ ವ್ಯಾಪಾರ ಪಾಲುದಾರರಾಗಿದ್ದಾರೆ.



ವ್ಯಂಗ್ಯ ಚಿತ್ರ: ಸಂದೀಪ ಅಧ್ವರ್ಯು

ಅರ್ಥಾತ್, ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಘರ್ಷಣೆಯ ಪರಿಣಾಮವಾಗಿ ಸೂರತ್ ನಲ್ಲಿ ಸುಮಾರು 17 ಲಕ್ಷ ಮತದಾರರು ತಮ್ಮ ಒಪ್ಪಿಗೆಯ ಹಕ್ಕನ್ನು ಚಲಾಯಿಸುವ ಅವಕಾಶವನ್ನು ಕಳೆದುಕೊಂಡಿದ್ದಾರೆ. ಇದು ಬಿಜೆಪಿಯಿಂದ ಹಣ ಪಡೆದು ಕಾಂಗ್ರೆಸ್ ಮಾಡಿರುವ ವಂಚನೆ ಎಂದು ಸ್ಥಳೀಯ ಮಾಧ್ಯಮಗಳು ನಿರೂಪಣೆ ನೀಡಿವೆ. ಇದು ಕೂಡ ಕಾಂಗ್ರೆಸ್ ನ ರಾಜಕೀಯ ಇಚ್ಛಾಶಕ್ತಿ ಕೊರತೆಗೆ ಒಂದು ನಿದರ್ಶನ.

ಸೂರತ್ ನಲ್ಲಿ 15 ಅಭ್ಯರ್ಥಿಗಳು ಕಣದಲ್ಲಿದ್ದರು. ಈ ಪೈಕಿ 4 ಮಂದಿಯ ನಾಮಪತ್ರಗಳು ತಿರಸ್ಕೃತಗೊಂಡಿವೆ. ಬಿಜೆಪಿ ಮಧ್ಯಪ್ರವೇಶಿಸಿ ಉಳಿದ 11 ಮಂದಿಯನ್ನು ಹಿಂದೆಸರಿಯುವಂತೆ ಮಾಡಿತು. ಬಿಜೆಪಿ ನಾಯಕರು ಮಾತ್ರವಲ್ಲದೆ ಸ್ಥಳೀಯ ಪೊಲೀಸ್ ವರಿಷ್ಠರು, ಸರ್ಕಾರಿ ಅಧಿಕಾರಿಗಳು ಕೂಡ ಬಿಜೆಪಿ ಪರವಾಗಿ ತಮ್ಮ ಅಸ್ತ್ರವನ್ನು ಬಳಸಿದ್ದಾರೆ.

ಇಲ್ಲಿ ಬಿಎಸ್‌ಪಿ ಅಭ್ಯರ್ಥಿಯಾಗಿ ಪ್ಯಾರೇಲಾಲ್ ಭಾರತಿ ಇದ್ದರು. 25 ವರ್ಷಗಳ ಹಿಂದೆ ವಾರಣಾಸಿಯಿಂದ ಸೂರತ್ ಗೆ ಉದ್ಯೋಗ ಅರಸಿ ಬಂದಿದ್ದ ಅವರು ಬಿಜೆಪಿ ಸದಸ್ಯರ ತೀವ್ರ ಒತ್ತಡಕ್ಕೆ ಮಣಿದು ನಾಮಪತ್ರ ವಾಪಸ್ ಪಡೆದರು. ನಾಮಪತ್ರ ಹಿಂಪಡೆಯಬೇಡಿ ಎಂದು ಬಿಎಸ್‌ಪಿ ರಾಜ್ಯ ನಾಯಕತ್ವ ಹೇಳಿದ್ದರೂ ಪ್ರಯೋಜನವಾಗಲಿಲ್ಲ. 400 ಸ್ಥಾನಗಳ ಗುರಿಯನ್ನು ಸಾಧಿಸಲು ಬಿಜೆಪಿ ದೇಶಾದ್ಯಂತ ವಿಸ್ತಾರವಾದ ಯೋಜನೆಗಳನ್ನು ಅಭಿವೃದ್ಧಿಪಡಿಸಿದೆ ಎಂಬುದನ್ನು ಇದು ತೋರಿಸುತ್ತದೆ.

ಇಂದೋರ್ ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ವಾಪಸ್

ಇಂದಿನ ಕಾಂಗ್ರೆಸ್ ನಾಳಿನ ಬಿಜೆಪಿ ಎಂಬ ಎಡಪಕ್ಷಗಳ ಟೀಕೆ ಸರಿ ಎಂಬುದನ್ನು ಇಂದೋರ್ ನ ಘಟನೆಯೂ ತಿಳಿಸುತ್ತದೆ. ಇಂದೋರ್ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಅಮಿತ್ ಶಾ ಅವರ ಬಲಗೈ ಬಂಟ ಮತ್ತು ಮಧ್ಯಪ್ರದೇಶದ ಲೋಕೋಪಯೋಗಿ ಸಚಿವ ಕೈಲಾಸ್ ವಿಜಯವರ್ಗಿಯ ಅವರ ಕಾರ್ಯಾಚರಣೆಯಾಗಿದೆ.

ಮಧ್ಯಪ್ರದೇಶದ ವಾಣಿಜ್ಯ ರಾಜಧಾನಿ ಇಂದೋರ್ ನಲ್ಲಿ ಕ್ರೈಂ ಥ್ರಿಲ್ಲರ್ ಸಿನಿಮಾದಲ್ಲಿ ಕಂಡುಬರುವ ದೃಶ್ಯಗಳು ನಡೆದಿವೆ. ನಾಮಪತ್ರ ಸಲ್ಲಿಕೆಗೆ ಕೆಲವೇ ಗಂಟೆಗಳು ಬಾಕಿ ಇರುವಾಗ ಸ್ಥಳೀಯ ಬಿಜೆಪಿ ಶಾಸಕ ರಮೇಶ ಬಂಡೋಲ ಅವರೊಂದಿಗೆ ಆಗಮಿಸಿದ ಕಾಂಗ್ರೆಸ್ ಅಭ್ಯರ್ಥಿ ಅಕ್ಷಯಕಾಂತಿ ಬಮ್ ಅವರು ನಾಮಪತ್ರ ಹಿಂಪಡೆದರು. ನಂತರ ತಕ್ಷಣ ಬಿಜೆಪಿಗೆ ಸೇರ್ಪಡೆಗೊಂಡ ಬಮ್ ಕೈಲಾಸ್ ವಿಜಯವರ್ಗೀಯರ ಜತೆ ಕಾರಿನಲ್ಲಿ ತೆರಳುತ್ತಿದ್ದ ದೃಶ್ಯ ಕಂಡುಬಂತು. ಇದು ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಹಿನ್ನಡೆಯಾಗಿದೆ.

ಇವರನ್ನು ಕಮಲ್ ನಾಥ್ ಆಸಕ್ತಿ ವಹಿಸಿ ಕಾಂಗ್ರೆಸ್ ಗೆ ಕರೆತಂದರು. ಕಾಂಗ್ರೆಸ್ಸಿಗ ಇಂದೋರ್ ನಿವಾಸಿ ಜಿತು ಪಟ್ವಾರಿ ಅವರ ನಾಮನಿರ್ದೇಶಿತರಾಗಿದ್ದಾರೆ, ಅವರು ವಿಧಾನಸಭಾ ಚುನಾವಣೆಯಲ್ಲಿ ಸೋತ ನಂತರ ಕಮಲ್ ನಾಥ್ ಅವರನ್ನು ಪಿಸಿಸಿ ಅಧ್ಯಕ್ಷರನ್ನಾಗಿ ಮಾಡಿದರು. ಆದ್ದರಿಂದ, ಬಾಮ್ ಅವರ ಪಕ್ಷಾಂತರವು ಕಮಲ್ ನಾಥ್, ಜಿತು ಪಟ್ವಾರಿ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಭಾರೀ ಹೊಡೆತವಾಗಿದೆ. ಇಂದೋರ್

ಪುಟ 14 ಕ್ಕೆ

‘ಅಮೃತ ಕಾಲ’ದ ಚುನಾವಣಾ ಮಾಡೆಲ್‌ಗಳು: ಚಂಡೀಗಡದಿಂದ ವಾರಣಾಸಿಯ ವರೆಗೆ

ಮೇಡ್ ಇನ್ ಗುಜರಾತ್–ಮತಯಂತ್ರ ಅನಾವರಣ!



ಇದರಿಂದ ಪ್ರಯೋಜನವಿದೆ ಹಣಉಳಿಸಬಹುದು
ವ್ಯಂಗ್ಯ ಚಿತ್ರ: ಸತೀಶ ಆಚಾರ್ಯ, ಸೌತ್ ಫಸ್ಟ್



ಅಬ್‌ಕೀ ಬಾರ್–400 ಪಾರ್ ಅಬ್‌ಕೀ ಬಾರ್–400 ಪಾರ್
ಅಬ್‌ಕೀ ಬಾರ್–400 ಪಾರ್ ಅಬ್‌ಕೀ ಬಾರ್–400 ಪಾರ್
ವ್ಯಂಗ್ಯ ಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

“ಮಿ.ಸಾಲಿಸಿಟರ್, ಇದು ಪ್ರಜಾಪ್ರಭುತ್ವದ ಅಪಹಾಸ್ಯ ಮತ್ತು ಪ್ರಜಾಪ್ರಭುತ್ವದ ಕೊಲೆ”–ಇದು ಮೂರು ತಿಂಗಳ ಹಿಂದೆ ಚಂಡೀಗಡ ಮೇಯರ್ ಚುನಾವಣೆಗಳಲ್ಲಿ ನಡೆದ ಅಕ್ರಮದ ಬಗ್ಗೆ ಅರ್ಜಿ ವಿಚಾರಣೆಯ ಸಂದರ್ಭದಲ್ಲಿ ಸರಕಾರದ ವಕೀಲರನ್ನು ಉದ್ದೇಶಿಸಿ ಮಾಡಿದ ದೇಶದ ಮುಖ್ಯ ನ್ಯಾಯಾಧೀಶರ ಟಿಪ್ಪಣಿ. ಅಂತಿಮವಾಗಿ ಸುಪ್ರೀಂ ಕೋರ್ಟ್ ಈ ಚುನಾವಣೆಯ ಘೋಷಿತ ಪ್ರಕಟಣೆಯನ್ನು ರದ್ದು ಮಾಡಿ ಎಎಪಿ–ಕಾಂಗ್ರೆಸ್ ಅಭ್ಯರ್ಥಿಯನ್ನು ಚುನಾಯಿತರು ಎಂದು ಘೋಷಿಸಿತು. ಈ ಚುನಾವಣೆಯ ಪೀಠಾಸೀನ ಅಧಿಕಾರಿ ಪ್ರತಿಪಕ್ಷಗಳ ಅಭ್ಯರ್ಥಿಗೆ ಬಿದ್ದ 8 ಮತಗಳನ್ನು ಅಸಿಂಧು ಎಂದು ತಿರಸ್ಕರಿಸಿ ಬಿಜೆಪಿ ಅಭ್ಯರ್ಥಿ 16–12 ಮತಗಳಿಂದ ಗೆದ್ದಿದಾರೆ ಎಂದು ಘೋಷಿಸಿದರು. ಈ ಅಧಿಕಾರಿಯ ನಡತೆಯನ್ನು ಬಲವಾಗಿ ಟೀಕಿಸುತ್ತ ಮುಖ್ಯ ನ್ಯಾಯಾಧೀಶರು “ಮತಪತ್ರಗಳನ್ನು ವಿರೂಪಗೊಳಿಸಿರುವುದು ಸ್ಪಷ್ಟವಾಗಿದೆ. ಆತನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾಗಿದೆ. ಅವರು ಕ್ಯಾಮೆರಾವನ್ನು ಏಕೆ ನೋಡುತ್ತಿದ್ದಾರೆ? ಮಿ. ಸಾಲಿಸಿಟರ್, ಇದು ಪ್ರಜಾಪ್ರಭುತ್ವದ ಅಪಹಾಸ್ಯ ಮತ್ತು ಪ್ರಜಾಪ್ರಭುತ್ವದ ಕೊಲೆ. ನಾವು ಗಾಬರಿಗೊಂಡಿದ್ದೇವೆ. ಇದು ಒಬ್ಬ ಚುನಾವಣಾಧಿಕಾರಿಯ ವರ್ತನೆಯೇ? ಕೆಳಭಾಗದಲ್ಲಿ ಕ್ರಾಸ್ ಇರುವಲ್ಲೆಲ್ಲಾ ಅವರು ಅದನ್ನು ಮುಟ್ಟುವುದಿಲ್ಲ ಆದರೆ ಅದು ಮೇಲ್ಭಾಗದಲ್ಲಿದ್ದಾಗ ಅವರು ಅದನ್ನು ಬದಲಾಯಿಸುತ್ತಾರೆ. ಸುಪ್ರೀಂ ಕೋರ್ಟ್ ಅವರನ್ನು ಗಮನಿಸುತ್ತಿದೆ ಎಂದು ದಯವಿಟ್ಟು ಚುನಾವಣಾಧಿಕಾರಿಗೆ ತಿಳಿಸಿ.” ಎಂದು ಕಟುವಾಗಿ ಟಿಪ್ಪಣಿ ಮಾಡಿದರು.

ಇಲ್ಲೇನೋ ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದ ಚುನಾವಣಾ ಫಲಿತಾಂಶ ಕದಿಯುವುದನ್ನು ತಡೆಯಲಾಯಿತು, ಆದರೆ ಇದು ಮುಂಬರಲಿದ್ದ ಸಾರ್ವತ್ರಿಕ ಚುನಾವಣೆಗಳ ಟ್ರೇಲರ್ ಆಗಿದೆಯೇ ಎಂದು ಹಲವು ರಾಜಕೀಯ ವೀಕ್ಷಕರು ಟಿಪ್ಪಣಿ ಮಾಡಿದರು. ಸಾರ್ವತ್ರಿಕ ಚುನಾವಣೆಗಳಲ್ಲಿ ಇದುವರೆಗೆ ಸೂರತ್, ಇಂದೋರ್, ಖಜುರಾಹೊ ಮತ್ತು ವಾರಣಾಸಿಯಲ್ಲಿ ಸಂಭವಿಸಿರುವ ಘಟನೆಗಳು ಒಂದು ರೀತಿಯಲ್ಲಿ ಇದನ್ನು ಟ್ರೇಲರ್ ಆಗಿಸುವ ಪ್ರಯತ್ನದಂತೆ ಕಾಣಿಸುತ್ತದೆ.

ಎಪ್ರಿಲ್ 22ರಂದು ಗುಜರಾತಿನ ಸೂರತ್ ಲೋಕಸಭಾ ಸ್ಥಾನದಲ್ಲಿ ಬಿಜೆಪಿ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಲಾಯಿತು. ಇಲ್ಲಿಯ ಕಾಂಗ್ರೆಸ್ ಅಭ್ಯರ್ಥಿಯ ಉಮೇದುವಾರಿಕೆಯನ್ನು ಅವರ ಪ್ರಸ್ತಾವಕರ ಸಹಿಗಳಲ್ಲಿ ವ್ಯತ್ಯಾಸಗಳಿದ್ದು, ಅವರು ಅವು ತಮ್ಮ ಸಹಿಗಳಲ್ಲ ಎಂದು ಹೇಳಿದ್ದಾರೆ ಎಂದು ತಿರಸ್ಕರಿಸಲಾಯಿತು. ಕಾಂಗ್ರೆಸ್‌ನ ಪರ್ಯಾಯ ಅಭ್ಯರ್ಥಿಯ ನಾಮಪತ್ರವನ್ನು ಕೂಡ ಅದೇ ಕಾರಣಕೊಟ್ಟು ತಿರಸ್ಕರಿಸಲಾಯಿತು. “ಉಳಿದ ಎಂಟೂ ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆಯನ್ನು ತಾವಾಗಿಯೇ ಹಿಂತೆಗೆದುಕೊಂಡಿದ್ದಾರೆ. ಆದ್ದರಿಂದ ಬಿಜೆಪಿ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ” ಎಂದು ಚುನಾವಣಾಧಿಕಾರಿ ಘೋಷಿಸಿದರು ಎಂದು ವರದಿಯಾಗಿದೆ. ನಾಲ್ಕೂ ಪ್ರಸ್ತಾವಕರ ಅಫಿಡವಿಟ್‌ಗಳಿಗೆ ಸಹಿ ಹಾಕಿದವರು ಒಬ್ಬ ವಕೀಲರು ಮತ್ತು ಬಿಜೆಪಿ ಮುಖಂಡರು ಮತ್ತು ಬಿಜೆಪಿ ಅಭ್ಯರ್ಥಿ ಅವರ ಸಹಿಗಳು ಖೋಟಾ, ಅವನ್ನು ಪರೀಕ್ಷಿಸಬೇಕು ಎಂದು ಚುನಾವಣಾಧಿಕಾರಿಯನ್ನು ಕೇಳುವ ಹಿಂದಿನ ದಿನವೇ ಅದು ಸಿದ್ಧವಾಗಿತ್ತು ಎನ್ನಲಾಗಿದೆ. ಕಾಂಗ್ರೆಸ್ ಅಭ್ಯರ್ಥಿ ನಾಪತ್ತೆಯಾಗಿದ್ದರು, ಅವರು ಬಿಜೆಪಿ ಸೇರಲಿದ್ದಾರೆ ಎಂಬ ಸುದ್ದಿಯನ್ನು ಅವರ ಪತ್ನಿ ಅಲ್ಲಗಳೆದಿದ್ದಾರೆ, ಬದಲಾಗಿ ಪ್ರಸ್ತಾವಕರು ಬಿಜೆಪಿಯೊಂದಗೆ ಕೈ ಜೋಡಿಸಿದ್ದರು ಎಂದು ಹೇಳಿದ್ದಾರೆ.

ಬಿಜೆಪಿಯ ಸೂರತ್ ಜಿಲ್ಲಾಧ್ಯಕ್ಷರು ಸೂರತ್ ಪ್ರಧಾನ ಮಂತ್ರಿಗಳಿಗೆ ಮೊದಲ ಕಮಲವನ್ನು ಸಮರ್ಪಿಸಿದೆ ಎಂದರೆ, ಒಬ್ಬ ವಿಶ್ಲೇಷಕರು ಇದನ್ನು ಚುನಾವಣಾ ಬಾಂಡ್‌ಗಳ ಮೂಲಕ ಪೇರಿಸಿಕೊಂಡ ಭ್ರಷ್ಟ ಹಣದಿಂದ ನಡೆಸಿರುವ ಆಪರೇಷನ್ ಕಪ್ಪು ಕಮಲ ಎಂದು ವರ್ಣಿಸಿದ್ದಾರೆ.

ಕೆಲವು ದಿನಗಳ ನಂತರ ಮಧ್ಯಪ್ರದೇಶದ ಇಂದೋರಿನಲ್ಲಿ ಇದರ ಪುನರಾವರ್ತನೆಯ ಪ್ರಯತ್ನ ನಡೆಯಿತು. ಇಲ್ಲಿ ಕಾಂಗ್ರೆಸ್ ಅಭ್ಯರ್ಥಿಯೇ ತಮ್ಮ ನಾಮಪತ್ರವನ್ನು ಹಿಂತೆಗೆದುಕೊಂಡರು, ನಂತರ ಅವರನ್ನು ತಮ್ಮ ಕಾರಿನಲ್ಲಿ ಬಿಜೆಪಿ ಮುಖಂಡರು ರಾಜಾರೋಷವಾಗಿ ಒಯ್ದ ಫೋಟೋಗಳು ಮಾಧ್ಯಮಗಳಲ್ಲಿ ಪ್ರಕಟವಾದವು. ಅವರನ್ನು ಬಿಜೆಪಿಗೆ ಸೇರಿಸಿಕೊಳ್ಳಲಾಯಿತು. ಕಾಂಗ್ರೆಸಿನ ಪರ್ಯಾಯ ಅಭ್ಯರ್ಥಿಯ ನಾಮಪತ್ರವನ್ನು ಮುಖ್ಯ ಅಭ್ಯರ್ಥಿಯ ನಾಮಪತ್ರ ಸ್ವೀಕೃತವಾಗಿದೆ ಎಂಬ ಕಾರಣಕೊಟ್ಟು ಹಿಂದಿನ ದಿನವೇ ತಿರಸ್ಕರಿಸಲಾಗಿತ್ತು. ನಾಲ್ಕು ಅಭ್ಯರ್ಥಿಗಳ ಮೇಲೆ ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಡ ಹಾಕುವ ಕರೆಗಳು ಹೋದವು, ಮತ್ತು ಹಿಂತೆಗೆದುಕೊಳ್ಳುವ ಪತ್ರಗಳಿಗೆ ಖೋಟಾ ಸಹಿಗಳನ್ನು ಸಂಗ್ರಹಿಸಲಾಯಿತು ಎಂದು ವರದಿಯಾಗಿದೆ (ದಿ ವೈರ್, ಮೇ 12). ಆದರೂ ಇಂದೋರಿನಲ್ಲಿ ಸೂರತನ್ನು ಪುರಾವರ್ತಿಸುವ ಪ್ರಯತ್ನ ಫಲಿಸಿಲ್ಲ. ಮೇ 13ರಂದು ಅಲ್ಲಿ ಮತದಾನ ನಡೆದಿದೆ. ಹಿಂದಿನ ಚುನಾವಣೆಗೆ ಹೋಲಿಸಿದರೆ, ಮತದಾನದಲ್ಲಿ 7.5% ಇಳಿಕೆಯಾಗಿದೆ ಎಂದು ವರದಿಯಾಗಿದೆ.

ಮಧ್ಯಪ್ರದೇಶದ ಖಜುರಾಹೋದಲ್ಲಿಯೂ ಕಾಂಗ್ರೆಸ್–ಸಮಾಜವಾದಿ ಪಕ್ಷದ ಜಂಟಿ ಅಭ್ಯರ್ಥಿಯ ನಾಮಪತ್ರವನ್ನು ಹಳೆಯ ಮತದಾರರ ಪಟ್ಟಿಯನ್ನು ಸಲ್ಲಿಸಲಾಗಿದೆ ಮತ್ತು ನಾಮಪತ್ರದಲ್ಲಿ ಒಂದು ಕಡೆ ಅಭ್ಯರ್ಥಿ ಸಹಿ ಮಾಡಿಲ್ಲ ಎಂಬ ಎರಡು ತಾಂತ್ರಿಕ ಕಾರಣಗಳನ್ನು ಕೊಟ್ಟು ತಿರಸ್ಕರಿಸಲಾಗಿದೆ. ವಾಸ್ತವವಾಗಿ ನಾಮಪತ್ರವನ್ನು ಸ್ವೀಕರಿಸುವ ಮೊದಲು ತಾಂತ್ರಿಕ ದೋಷಗಳಿದ್ದರೆ ಅದನ್ನು ಅಭ್ಯರ್ಥಿಯ ಗಮನಕ್ಕೆ ತರಬೇಕಾಗಿತ್ತು. ಇದನ್ನು ಮಾಡದೆ ಅದನ್ನು ತಿರಸ್ಕರಿಸುವ ನೆಪಗಳಾಗಿ ಮಾಡಲಾಗಿದೆ ಎಂದು ಇದರ ವಿರುದ್ಧ ಕಾನೂನು ಕ್ರಮಗಳನ್ನು ನಡೆಸಲು ಕಾಂಗ್ರೆಸ್–ಎಸ್‌ಪಿ ಯೋಚಿಸುತ್ತಿದ್ದಾರಂತೆ.

ಪ್ರಧಾನ ಮಂತ್ರಿಗಳು ಸ್ಪರ್ಧಿಸುತ್ತಿರುವ ವಾರಣಾಸಿಯಲ್ಲೂ ಇಂತಹುದೇ ‘ತಾಂತ್ರಿಕ’ ಕಾರಣಗಳಿಗಾಗಿ ಹಾಸ್ಯ ಕಲಾವಿದ ಶ್ಯಾಮ್ ರಂಗೀಲ ಅವರ ನಾಮಪತ್ರವನ್ನು ತಿರಸ್ಕರಿಸಲಾಗಿದೆ. ಮೇ 13ರಂದು ನಾಮಪತ್ರ ಸಲ್ಲಿಸಲು ಬಂದಾಗ ತನ್ನನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ಕಚೇರಿಯೊಳಕ್ಕೆ ಬಿಡಲಿಲ್ಲ. ಮರುದಿನ ಪ್ರಧಾನಿಗಳು ನಾಮಪತ್ರ ಸಲ್ಲಿಸಲು ಬಂದಿದ್ದರಿಂದ ನಾಮಪತ್ರವನ್ನು ಸಲ್ಲಿಸುವ ಅವಧಿ ಮುಗಿಯಲು 2 ನಿಮಿಷಗಳಿದ್ದಾಗಲಷ್ಟೇ ತನಗೆ ಕಚೇರಿಯೊಳಕ್ಕೆ ಹೋಗಲು ಅವಕಾಶ ದೊರೆಯಿತು ಎನ್ನುತ್ತಾರೆ ಶ್ಯಾಮ್ ರಂಗೀಲಾ. ನಾಮಪತ್ರದಲ್ಲಿ ಒಂದು ಅಫಿಡವಿಟ್ ಇಲ್ಲ ಎಂದು ಹೇಳಲಾಯಿತು. ಆದಿನ ಸಂಜೆಯ ವೇಳೆಗೆ ಅದನ್ನು ಸಲ್ಲಿಸಲಾಯಿತು. ಆಗ ಅಭ್ಯರ್ಥಿ ಪ್ರತಿಜ್ಞೆ ತಗೊಂಡಿಲ್ಲ ಎಂದು ಹೇಳಲಾಯಿತು, ಆದರೆ ತನಗೆ ಗೊತ್ತಿರಲಲ್ಲ, ಚುನಾವಣಾಧಿಕಾರಿಯೂ ಹೇಳಲಿಲ್ಲ ಎಂದು ಶ್ಯಾಮ್ ಹೇಳುತ್ತಾರೆ. ಕೊನೆಗೆ ಅದೇ ಕಾರಣ ಕೊಟ್ಟು ಅವರ ನಾಮಪತ್ರವನ್ನು ತಿರಸ್ಕರಿಸಲಾಯಿತು. ಚುನಾವಣಾಧಿಕಾರಿಗಳ ಕೈಪಿಡಿಯ ಪ್ರಕಾರ ಸಲ್ಲಿಸಿದ ನಾಮಪತ್ರವನ್ನು ಪರಿಶೀಲಿಸಿ ಅದು ಅಪೂರ್ಣವಾಗಿದ್ದರೆ ಅದನ್ನು ಅಭ್ಯರ್ಥಿಯ ಗಮನಕ್ಕೆ ತರಬೇಕು.

2014ರಲ್ಲಿ ತಾನು ಮೋದಿಯವರ ಅಭಿಮಾನಿಯಾಗಿದ್ದೆ ಎನ್ನುವ ಶ್ಯಾಮ್ ರಂಗೀಲ ಪ್ರಧಾನಿಗಳ ಭಾಷಣಗಳ ನಕಲು ಮಾಡಿ ಪ್ರಸಿದ್ಧಿಗೆ ಬಂದಿದ್ದಾರೆ, **“ಇಂದು ರಾಜಕೀಯವೇ ಕಾಮಿಡಿಯಾಗಿದೆ”** ಎನ್ನುವ ಅವರು ಸೂರತ್‌ನಲ್ಲಿ ಅವಿರೋಧ ಆಯ್ಕೆಯನ್ನು ನೋಡಿ, ವಾರಾಣಸಿಯಲ್ಲಿ ಹಾಗಾಗಬಾರದು, ಲಕ್ಷಾಂತರ ಮತದಾರರ ಮತದಾನದ ಹಕ್ಕನ್ನು ವಂಚಿಸಬಾರದು ಎಂಬ ಕಾರಣಕ್ಕೆ ತಾನು ಸ್ಪರ್ಧಿಸಲು ನಿರ್ಧರಿಸಿರುವುದಾಗಿ ಈ ಮೊದಲು ಹೇಳಿದ್ದರು.

“ನಿರಾಸೆಯಾಗಿದೆ, ಆದರೆ ಉತ್ಸಾಹ ಕುಂದಿಲ್ಲ” ಎಂದಿದ್ದಾರೆ ಶ್ಯಾಮ್ ರಂಗೀಲ ತನ್ನ ನಾಮಪತ್ರವನ್ನು ತಿರಸ್ಕರಿಸಿದ ನಂತರ.

ಈ ನಾಲ್ಕೂ ಕ್ಷೇತ್ರಗಳಲ್ಲಿ ಬಿಜೆಪಿ ಬಹಳ ಸಮಯದಿಂದ ಸತತವಾಗಿ ಗೆಲ್ಲುತ್ತ ಬಂದಿದೆ. ಆದರೂ ಇಂತಹ ತಂತ್ರಗಳೇಕೆ ಎಂಬ ಪ್ರಶ್ನೆ ಸಹಜವಾಗಿ ಎದ್ದಿದೆ. ಈ ನಡುವೆ ಚುನಾವಣಾ ಆಯೋಗ ಮೊದಲ ಎರಡು ಹಂತಗಳ ಮತದಾನದ ಅಂತಿಮ ಅಂಕಿ–ಅಂಶಗಳನ್ನು ಪ್ರಕಟಿಸುವಲ್ಲಿ ವಿಪರೀತ ವಿಳಂಬಮಾಡಿರುವುದು ಮತ್ತು ಗಮನಾರ್ಹ ವ್ಯತ್ಯಾಸದ ಬಗ್ಗೆಯೂ ಪ್ರಶ್ನೆಗಳೆದ್ದಿವೆ.



ಒಂದು ಚುನಾವಣಾ ಕ್ಷೇತ್ರ–ಒಂದು ಅಭ್ಯರ್ಥಿ!
ವ್ಯಂಗ್ಯಚಿತ್ರ: ಆರ್. ಪ್ರಸಾದ್ ಇಕನಾಮಿಕ್ ಟೈಮ್ಸ್



ವಾರಣಾಸಿಯಲ್ಲಿ 56”– ಕಾಮಿಡಿಯನ್ ಶ್ಯಾಮ್ ರಂಗೀಲ ಉಮೇದುವಾರಿಕೆ ತಿರಸ್ಕೃತ
ವ್ಯಂಗ್ಯ ಚಿತ್ರ: ಸತೀಶ ಆಚಾರ್ಯ, ಸೌತ್ ಫಸ್ಟ್



‘ಉದಾರವಾದ’ (ಲಿಬರಲಿಸಂ) ಎಂದು ಕರೆಯಲ್ಪಡುವ ಮಾನವ ಸ್ವಾತಂತ್ರ್ಯದ ಸಾಧನೆ ತನ್ನ ಗುರಿ ಎಂದು ಹೇಳಿಕೊಂಡ ರಾಜಕೀಯ ತತ್ವಶಾಸ್ತ್ರವು ಬಿಕ್ಕಟ್ಟನ್ನು ಎದುರಿಸುತ್ತಿದೆ, ಆಧುನಿಕ ಉದಾರವಾದ ಬೆಳೆದು ಬಂದದ್ದು ಬೋಲ್ಶೆವಿಕ್ ಕ್ರಾಂತಿಗೆ ಪ್ರತಿಕ್ರಿಯೆಯಾಗಿ, ಎರಡು ಮಹಾಯುದ್ಧಗಳ ನಡುವಿನ ಅವಧಿಯಲ್ಲಿ ಬಂಡವಾಳಶಾಹಿಗೆ ಉಂಟಾದ ಬಿಕ್ಕಟ್ಟಿನ ಸಮಯದಲ್ಲಿ. ಭವಿಷ್ಯದಲ್ಲಿ ಉದ್ಭವಿಸಬಹುದಾದ ಬಿಕ್ಕಟ್ಟುಗಳನ್ನು, ಬಂಡವಾಳಶಾಹೀ ವ್ಯವಸ್ಥೆಯ ಆಚೆಗೆ ಹೋಗದೆಯೇ, ಪರಿಹರಿಸುವ ಮಾರ್ಗವಾಗಿ ಅದನ್ನು ಅಭಿವೃದ್ಧಿಪಡಿಸಲಾಯಿತು. ಆದರೆ ಉದಾರವಾದದ ಹಿಂದಿನ ಆ ಆವೃತ್ತಿ ‘ಮಹಾಕುಸಿತ’ ಅವಧಿಯಲ್ಲಿ ಕಂಗಾಲಾದಂತೆ, ಕೀನ್ಸ್ ಪ್ರತಿಪಾದಿಸಿದ ಹೊಸ ಉದಾರವಾದ, ನವ–ಉದಾರವಾದದ ಬಿಕ್ಕಟ್ಟಿನಿಂದ ಕಂಗಾಲಾಗಿದೆ. ಅರ್ಥವ್ಯವಸ್ಥೆಗಳನ್ನು ಅವುಗಳ ಬಂಡವಾಳಶಾಹಿ ಗೂಡಿನೊಳಗೇ ಇಟ್ಟು, ಅವುಗಳನ್ನು ಪ್ರಸಕ್ತ ಸ್ಥಗಿತತೆಗಳಿಂದ ಹೊರತರಬಲ್ಲ, ಉದಾರವಾದದ ಬೇರೆ ಯಾವುದೇ ಆವೃತ್ತಿಗಳು ಲಭ್ಯವಿಲ್ಲ, ಅಥವ ಅದು ಸಾಧ್ಯವೂ ಇಲ್ಲ.

ಮಾನವ ಸ್ವಾತಂತ್ರ್ಯ ಮತ್ತು ರಾಜಕೀಯ ತತ್ವಶಾಸ್ತ್ರವಾಗಿ ಉದಾರವಾದದ ಬಿಕ್ಕಟ್ಟು

ಪ್ರೊ. ಪ್ರಭಾತ್ ಪಟ್ನಾಯಕ್

ರಾಜಕೀಯ ಕ್ರಿಯೆಯ ಪ್ರತಿಯೊಂದು ತೊರೆಯ ಹಿಂದೆ ಒಂದು ರಾಜಕೀಯ ತತ್ವಶಾಸ್ತ್ರವಿರುತ್ತದೆ, ಅದು ನಮ್ಮ ಸುತ್ತಲಿನ ಪ್ರಪಂಚವನ್ನು, ವಿಶೇಷವಾಗಿ ಆಧುನಿಕ ಕಾಲದಲ್ಲಿ ಅದರ ಆರ್ಥಿಕ ಗುಣಲಕ್ಷಣಗಳನ್ನು ವಿಶ್ಲೇಷಿಸುತ್ತದೆ, ಈ ವಿಶ್ಲೇಷಣೆಯ ಆಧಾರದ ಮೇಲೆ, ಆ ನಿರ್ದಿಷ್ಟ ರಾಜಕೀಯ ತತ್ವಶಾಸ್ತ್ರವು ಹೋರಾಟದ ಗುರಿಗಳನ್ನು ನಿಗದಿಪಡಿಸುತ್ತದೆ ಮತ್ತು ಅದರ ಮೂಲಕ ರಾಜಕೀಯ ಕ್ರಿಯೆಯು ಈ ಹೋರಾಟವನ್ನು ನಡೆಸುತ್ತದೆ. ಆ ಗುರಿಯನ್ನು ಸಾಧಿಸಲು ಕಷ್ಟವಾಗಬಹುದು, ಕೆಲವು ಸಂದರ್ಭಗಳಲ್ಲಿ ಬೇರೆ ಸಂದರ್ಭಗಳಿಗಿಂತ ಹೆಚ್ಚು ಕಷ್ಟವಾಗಬಹುದು, ಮತ್ತು ಈ ಕಷ್ಟವು ರಾಜಕೀಯ ಕ್ರಿಯೆಗೆ ಅಡಚಣೆ ಉಂಟು ಮಾಡಬಹುದು; ಆದರೆ ಇದು ಆ ರಾಜಕೀಯ ತತ್ವಶಾಸ್ತ್ರಕ್ಕೆ ಒಂದು ಬಿಕ್ಕಟ್ಟಾಗಿ ಪರಿಣಮಿಸುವುದಿಲ್ಲ. ಒಂದು ಗುರಿಯನ್ನು ಸಾಧಿಸುವ ಕಷ್ಟದಿಂದಾಗಿಯೇ ಅದು ಬಿಕ್ಕಟ್ಟಾಗಿ ಪರಿಣಮಿವುದಿಲ್ಲ. ರಾಜಕೀಯ ತತ್ವಶಾಸ್ತ್ರದ ಬಿಕ್ಕಟ್ಟು ಅದೊಂದು ಆಂತರಿಕ ವೈರುಧ್ಯವನ್ನು ಹೊಂದಿರುವಾಗ, ಅದು ಮುಂದಿಡುವ ಗುರಿಯು ತಾರ್ಕಿಕವಾಗಿ ಅದು ನಂಬುವ ಇತರ ಕೆಲವು ಲಕ್ಷಣಗಳೊಂದಿಗೆ ವೈರುಧ್ಯವನ್ನು ಹೊಂದಿರುವಾಗ ಉದ್ಭವಿಸುತ್ತದೆ.

ಒಂದು ರಾಜಕೀಯ ತತ್ವಶಾಸ್ತ್ರವಾದ ಮಾರ್ಕ್ಸ್‌ವಾದವು ಮುಂದಿಡುವ ಸಮಾಜವಾದದ ಗುರಿಯನ್ನು ಸಾಧಿಸುವುದು ಪ್ರಸ್ತುತ ಸಂದರ್ಭದಲ್ಲಿ ಸಾಧಿಸಲು ಹೆಚ್ಚು ಕಷ್ಟಕರವಾಗಿದೆ ಎಂದು ಹಲವರು ವಾದಿಸಬಹುದು. ಆದರೆ ಇದು ಎಡಪಕ್ಷಗಳ ಪ್ರಸ್ತುತ ದೌರ್ಬಲ್ಯವನ್ನು ತೋರಿಸುತ್ತದೆಯೇ ಹೊರತು, ಮಾರ್ಕ್ಸ್‌ವಾದಕ್ಕೆ ಯಾವುದೇ ಬಿಕ್ಕಟ್ಟು ಬಂದಿದೆ ಎಂದು ತೋರಿಸುವುದಿಲ್ಲ. ಆದರೆ, ಅತ್ತ ‘ಉದಾರವಾದ’ (ಲಿಬರಲಿಸಂ) ಎಂದು ಕರೆಯಲ್ಪಡುವ ರಾಜಕೀಯ ತತ್ವಶಾಸ್ತ್ರವು ಬಿಕ್ಕಟ್ಟನ್ನು ಎದುರಿಸುತ್ತಿದೆ, ತಾರ್ಕಿಕವಾಗಿ, ಅದು ಮಾನವ ಸ್ವಾತಂತ್ರ್ಯವೆಂದು ಭಾವಿಸುವ ಸಾಧನೆಗಾಗಿ ಮುಂದಿಡುವ ಗುರಿಯನ್ನು, ಅದರ ಬಹುಪ್ರಿಯವಾದ ಜಗತ್ತಿನಲ್ಲಿ ಈಡೇರಿಸಿಕೊಳ್ಳಲು ಸಾಧ್ಯವಿಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ, ತನ್ನೊಳಗೇ ಅದು ಹೊಂದಿರುವ ತಾರ್ಕಿಕ ವೈರುಧ್ಯದಿಂದಾಗಿಯೇ ಅರ್ಥವ್ಯವಸ್ಥೆಯ ಅಭಿವೃದ್ಧಿಯ ಹಾದಿಯಲ್ಲಿ ಉದ್ಭವಿಸಿರುವ ಸಂಕಟಕ್ಕೆ ಅದರ ಬಳಿ ಉತ್ತರವಿಲ್ಲದಂತಾಗಿದೆ. ಉದಾರವಾದವು ಎದುರಿಸುತ್ತಿರುವ ಬಿಕ್ಕಟ್ಟು ಈ ಸ್ವರೂಪದ್ದು.

“ಉದಾರವಾದ”ದ ಕೀನ್ಸ್ ಆವೃತ್ತಿ

ಆಧುನಿಕ ಉದಾರವಾದವು ಬೆಳೆದು ಬಂದದ್ದು ಬೋಲ್ಶೆವಿಕ್ ಕ್ರಾಂತಿಗೆ ಪ್ರತಿಕ್ರಿಯೆಯಾಗಿ, ಎರಡು ಮಹಾಯುದ್ಧಗಳ ನಡುವಿನ ಅವಧಿಯಲ್ಲಿ ಬಂಡವಾಳಶಾಹಿಗೆಉಂಟಾದ ಬಿಕ್ಕಟ್ಟಿನ ಸಮಯದಲ್ಲಿ ಮತ್ತು ಭವಿಷ್ಯದಲ್ಲಿ ಉದ್ಭವಿಸಬಹುದಾದ ಇತರ ರೀತಿಯ ಬಿಕ್ಕಟ್ಟುಗಳನ್ನು, ಬಂಡವಾಳಶಾಹಿಯ ವ್ಯವಸ್ಥೆಯ ಆಚೆಗೆ ಹೋಗದೆಯೇ, ಅವುಗಳನ್ನು ಪರಿಹರಿಸುವ ಮಾರ್ಗವಾಗಿ ಆ ‘ಉದಾರವಾದ’ವನ್ನು ಅಭಿವೃದ್ಧಿಪಡಿಸಲಾಯಿತು. ಪಾಶ್ಚಿಮಾತ್ಯ–ಶೈಲಿಯ ಉದಾರವಾದಿ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಸಂಯೋಜನೆಯನ್ನು, ಪ್ರಭುತ್ವದ ಮಧ್ಯಪ್ರವೇಶದಿಂದ ಹದಗೊಳಿಸಿದರೆ ಅದು ಮಾನವ ಸ್ವಾತಂತ್ರ್ಯವನ್ನು ಸಾಧಿಸಲು ಅತ್ಯುತ್ತಮ ಚೌಕಟ್ಟನ್ನು ಒದಗಿಸುತ್ತದೆ ಎಂದು ಅದು ನಂಬಿತ್ತು. ಪಾಶ್ಚಿಮಾತ್ಯ–ಶೈಲಿಯ ಉದಾರ ಪ್ರಜಾಪ್ರಭುತ್ವದ ಸಂಸ್ಥೆಗಳ ಅಡಿಯಲ್ಲಿ, ಪ್ರಭುತ್ವವು ಒಂದು ವರ್ಗ ಪ್ರಭುತ್ವವಾಗಿರದೆ, ಸಾಮಾಜಿಕ "ವಿವೇಚನೆ"ಯನ್ನು ವ್ಯಕ್ತಪಡಿಸುತ್ತದೆ ಮತ್ತು ಬೇರೆ ಯಾವುದೇ ಸಾಂಸ್ಥಿಕ ಚೌಕಟ್ಟಿನ ಅಡಿಯಲ್ಲಿ ಇರುವುದಕ್ಕಿಂತ ಉತ್ತಮವಾಗಿ ಮಾಡುತ್ತದೆ ಎಂದು ಅದು ನಂಬಿತ್ತು.



ಆದ್ದರಿಂದ ಇಂತಹ ಉದಾರ ಪ್ರಜಾಸತ್ತಾತ್ಮಕ ಪ್ರಭುತ್ವ ಬಂಡವಾಳಶಾಹಿಯ ಸ್ವಯಂಪ್ರೇರಿತ ಕೆಲಸದಿಂದಾಗಿ ಉದ್ಭವಿಸಬಹುದಾದ ಯಾವುದೇ ಅಸಮರ್ಪಕತೆಯನ್ನು ಸರಿಪಡಿಸಲು ಆರ್ಥಿಕ ವ್ಯವಸ್ಥೆಯಲ್ಲಿ ಮಧ್ಯಪ್ರವೇಶಿಸಬಹುದು ಮತ್ತು ಈ ಸ್ವಯಂಪ್ರೇರಿತ ಕೆಲಸದಲ್ಲಿ ಅಸಮರ್ಪಕತೆ ಇಲ್ಲದಾಗಲೂ, ಅದು ಸಾಮಾಜಿಕ ವಿವೇಚನೆಗೆ ಅನುಗುಣವಾಗಿರುತ್ತದೆ ಎಂದು ಅದು ನಂಬಿತ್ತು. ಉದಾರವಾದದ ಈ ಆವೃತ್ತಿಯನ್ನು ರೂಪಿಸುವಲ್ಲಿ ಇಂಗ್ಲಿಷ್ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್ ಪ್ರಮುಖ ಪಾತ್ರವನ್ನು ವಹಿಸಿದ್ದರು, ಅದನ್ನು ಅವರು "ಹೊಸ ಉದಾರವಾದ" ಎಂದು ಕರೆದರು, ಇದು ಉದಾರವಾದದ ಹಿಂದಿನ ಆವೃತ್ತಿಗಳಿಗಿಂತ ಭಿನ್ನವಾಗಿತ್ತು, ಆ ಹಿಂದಿನ ಆವೃತ್ತಿಗಳು ಪ್ರಭುತ್ವದ ಮಧ್ಯಪ್ರೇಶವನ್ನು ಕನಿಷ್ಟ ಮಟ್ಟದಲ್ಲಿರಿಸಬೇಕು ಎಂದು ಬಯಸಿದ್ದವು ಏಕೆಂದರೆ, ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಯಾವಾಗಲೂ "ಪೂರ್ಣ ಉದ್ಯೋಗ"ವಿರುತ್ತದೆ ಎಂಬ ತಪ್ಪು ಕಲ್ಪನೆಯನ್ನು ಅವು ನಂಬಿದ್ದವು.

ಉದಾರವಾದದ ಈ ಹೊಸ ಆವೃತ್ತಿಯು, ಅದು ಕಲ್ಪಿಸಿಕೊಳ್ಳುವ ಸಾಂಸ್ಥಿಕ ಚೌಕಟ್ಟಿನೊಳಗೂ ಸಮಂಜಸವಾಗಿರಲಿಲ್ಲ, ಏಕೆಂದರೆ, ಅದು ಸಾಮ್ರಾಜ್ಯಶಾಹಿ ಎಂಬ ವಿದ್ಯಮಾನವಿದೆ ಎಂಬುದನ್ನೇ ಪರಿಗಣಿಸಲಿಲ್ಲ. ಹಣಕಾಸು ಬಂಡವಾಳ ಕೂಡಾ ಸೇರಿದಂತೆ, ಬಂಡವಾಳವು ಜಾಗತೀಕರಣಗೊಂಡಾಗಲಂತೂ ಅದು ಖಂಡಿತವಾಗಿಯೂ ಅಮಾನ್ಯವಾಗುತ್ತದೆ. ಏಕೆಂದರೆ ಈ ಸಂದರ್ಭದಲ್ಲಿ ಮೂಲತಃ ರಾಷ್ಟ್ರೀಯವೇ ಆಗಿರುವ ಬಂಡವಾಳದ ಮೇಲೆ ರಾಷ್ಟ್ರ–ಪ್ರಭುತ್ವವು ಉಸ್ತುವಾರಿಯನ್ನು ಹೊಂದಿರುವುದಿಲ್ಲ, ಬದಲಿಗೆ ಜಾಗತೀಕರಣಗೊಂಡ ಬಂಡವಾಳವನ್ನು ಎದುರಿಸಬೇಕಾದ ರಾಷ್ಟ್ರ–ಪ್ರಭುತ್ವವನ್ನು ಕಾಣುತ್ತೇವೆ. ಮತ್ತು ಅಂತಹ ಯಾವುದೇ ಮುಖಾಮುಖಿಯಲ್ಲಿ ರಾಷ್ಟ್ರ–ಪ್ರಭುತ್ವವು ಬಂಡವಾಳ ತನ್ನ ದೇಶದಿಂದ ಹಾರಿಹೋಗದಂತೆ ಪ್ರಚೋದನೆಯಾಗಬಾರದು ಎಂಬ ಭಯದಿಂದ ಜಾಗತೀಕರಣಗೊಂಡ ಬಂಡವಾಳದ ಬೇಡಿಕೆಗಳಿಗೆ ಮಣಿಯಬೇಕು, ಅಂದರೆ ಪ್ರಭುತ್ವವು ಸಾಮಾಜಿಕ ವೈಚಾರಿಕತೆಯ ಸಾಕಾರವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಾರದು. ಇದನ್ನು ಅತ್ಯಂತ ಉತ್ಕಟ "ಹೊಸ ಉದಾರಿ" ಸಹ ಒಪ್ಪಿಕೊಳ್ಳಬೇಕಾಗುತ್ತದೆ.

ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರಭುತ್ವದ ಅಧಿಕಾರಕ್ಷೇತ್ರ ಮತ್ತು ಆ ದೇಶದಲ್ಲಿ ಹುಟ್ಟುವ ಬಂಡವಾಳದ ಕಾರ್ಯಕ್ಷೇತ್ರ ಹೆಚ್ಚು–ಕಡಿಮೆ ಅದೇ ಆಗಿರುತ್ತದೆ ಎಂಬುದು "ಹೊಸ ಉದಾರವಾದ" ದ ಹಿಂದಿರುವ ಊಹನೆ. ಇದು ವಾಸ್ತವವಾಗಿ ಕೀನ್ಸ್ ಬರೆಯುವಾಗ ಮತ್ತು ನಂತರವೂ ನಿಜವಾಗಿತ್ತು. ಆದರೆ ಬಂಡವಾಳದ ಜಾಗತೀಕರಣ ಹೆಚ್ಚುತ್ತ ಹೋದಂತೆ, ಇದು ಅವಾಸ್ತವವಾಗುತ್ತದೆ. ಇದು ಸಂಭವಿಸಿದಾಗ, ಪ್ರಭುತ್ವದ ಕಾರ್ಯಾಂಗವು ತಾನು ಸಾಮಾಜಿಕ ವಿವೇಚನೆ ಎಂದು ಭಾವಿಸುವ ಕ್ರಮಗಳನ್ನು ಜಾಗತೀಕರಣಗೊಂಡ ಬಂಡವಾಳವು ಅಂತಹ ಕ್ರಮಕ್ಕೆ ಸಮ್ಮತಿಸುತ್ತದೆಯೇ, ಇಲ್ಲವೇ ಎಂಬುದನ್ನು ಲೆಕ್ಕಿಸದೆಯೇ, ಸಾರ್ವಜನಿಕ ಅಭಿಪ್ರಾಯದ ಒತ್ತಡದಿಂದ ಜಾರಿಗೊಳಿಸಲು ಮುಂದಾಗಬಹುದು ಎಂದು ನಟಿಸುವುದು ಸಹ ಅವಾಸ್ತವಿಕವಾಗುತ್ತದೆ.

ಬಿಕ್ಕಟ್ಟಿನ ಬೇರುಗಳು

ಆದ್ದರಿಂದ ಉದಾರವಾದದ ಬಿಕ್ಕಟ್ಟಿನ ಬೇರುಗಳು ಜಾಗತೀಕರಣವೆಂಬ ವಿದ್ಯಮಾನದಲ್ಲಿವೆ; ಈ ಬಿಕ್ಕಟ್ಟು ನವ–ಉದಾರವಾದದ ಬಿಕ್ಕಟ್ಟಿನ ಅವಧಿಯಲ್ಲಿ ದೊಡ್ಡ ಪ್ರಮಾಣದ ಸಾಮೂಹಿಕ ನಿರುದ್ಯೋಗವು ಕಾಣಬಂದಾಗ ಸ್ಪಷ್ಟವಾಗಿ ಗೋಚರಿಸುತ್ತದೆ, ಇದನ್ನೇ ಕೀನ್ಸ್ ಬಂಡವಾಳಶಾಹಿಯ ಮುಖ್ಯ ದೌರ್ಬಲ್ಯ, ಅದನ್ನು ಪ್ರಭುತ್ವದ ಮಧ್ಯಪ್ರವೇಶದ ಮೂಲಕ ಮೀರಿ ಹೋಗದಿದ್ದರೆ, ಆ ವ್ಯವಸ್ಥೆ ಬೋಲ್ಶೆವಿಕ್–ಶೈಲಿಯ ಕ್ರಾಂತಿಗೆ ಗುರಿಯಾಗುವಂತೆ ಮಾಡುತ್ತದೆ ಎಂದು ಯೋಚಿಸಿದ್ದರು.

ಬಂಡವಾಳಶಾಹಿಯನ್ನು ಬಾಧಿಸುವ ಅತ್ಯುತ್ಪಾದನೆಯ ಬಿಕ್ಕಟ್ಟುಗಳನ್ನು ನಿವಾರಿಸಲು ಕೀನ್ಸ್‌ರ "ಬೇಡಿಕೆ ನಿರ್ವಹಣೆ" ಯನ್ನು ಅನುಸರಿಸಬೇಕಾದರೆ, ಅದಕ್ಕೆ ದಿವ್ಯೌಷಧಿಯೆಂದರೆ ಪ್ರಭುತ್ವ ವೆಚ್ಚವನ್ನು ಬಹಳಷ್ಟು ಹೆಚ್ಚಿಸುವುದು. ಇದು ಶ್ರೀಮಂತರ ಮೇಲೆ ತೆರಿಗೆಗಳನ್ನು ಹೆಚ್ಚಿಸುವ ಮೂಲಕ ಆಗಬೇಕು; ಯಾವುದೇ ತೆರಿಗೆ ಹೆಚ್ಚಬಾರದು ಎಂದರೆ ವಿತ್ತೀಯ ಕೊರತೆಯನ್ನು ಹೆಚ್ಚಿಸುವ ಮೂಲಕ ಒದಗಿಸಬೇಕು. ತೆರಿಗೆ ಆದಾಯವನ್ನು ದುಡಿಯುವ ಜನರ ವೆಚ್ಚದಲ್ಲಿ ಹೆಚ್ಚಿಸುವುದಾದರೆ, ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆ ಬೇಡಿಕೆ ಹೆಚ್ಚುವುದಿಲ್ಲ, ಏಕೆಂದರೆ ದುಡಿಯುವ ಜನ ತಮ್ಮ ಆದಾಯವನ್ನೆಲ್ಲವನೂ ವೆಚ್ಚ ಮಾಡಬೇಕಾಗುತ್ತದೆ. ಆದ್ದರಿಂದ ಇದು ಬಿಕ್ಕಟ್ಟನ್ನು ತಗ್ಗಿಸುವುದಿಲ್ಲ. ಆದರೆ ಹೆಚ್ಚುವರಿ ಪ್ರಭುತ್ವ ವೆಚ್ಚಗಳಿಗೆ ಹಣಕಾಸು ಒದಗಿಸುವ ಈ ಎರಡೂ ಮಾರ್ಗಗಳನ್ನು, ಶ್ರೀಮಂತರ ಮೇಲೆ ತೆರಿಗೆ ವಿಧಿಸುವುದನ್ನೂ ಮತ್ತು ವಿತ್ತೀಯ ಕೊರತೆಯನ್ನು ಹೆಚ್ಚಿಸುವುದನ್ನೂ ಜಾಗತೀಕರಣಗೊಂಡ ಹಣಕಾಸು ಬಂಡವಾಳವು ವಿರೋಧಿಸುತ್ತದೆ, ಆದ್ದರಿಂದ ಬಿಕ್ಕಟ್ಟಿನ ವಿರುದ್ಧ ಪ್ರಭುತ್ವದ ಆರ್ಥಿಕ ಮಧ್ಯಪ್ರವೇಶಕ್ಕೆ ಅವಕಾಶವೇ ಇಲ್ಲದಂತಾಗುತ್ತದೆ. ನಿಜ, ಪ್ರಭುತ್ವವು ಹಣಸಂಬಂಧೀ ಸಾಧನಗಳ ಮೂಲಕ ಮಧ್ಯಪ್ರವೇಶಿಸಬಹುದು. ಆದರೆ ಇವು ಏನೇನೂ ಮೊನಚಿಲ್ಲದ ಕ್ರಮಗಳು ಎಂದು ಎಲ್ಲರಿಗೂ ತಿಳಿದಿದೆ, ಇವು ಸಾಮಾನ್ಯವಾಗಿ ದೊಡ್ಡ ಖಾಸಗಿ ಖರ್ಚುಗಳನ್ನು ಉತ್ತೇಜಿಸುವ ಬದಲು, ಬಿಕ್ಕಟ್ಟನ್ನು ಉಲ್ಬಣಗೊಳಿಸುವ ಹಣದುಬ್ಬರವನ್ನು ಉತ್ತೇಜಿಸುತ್ತವೆ. ಹೀಗೆ ನವ–ಉದಾರವಾದದೊಳಗೆ ಈ ಬಿಕ್ಕಟ್ಟನ್ನು ನಿವಾರಿಸಲು ಯಾವುದೇ ಮಾರ್ಗವಿಲ್ಲ; ಕೀನ್ಸ್‌ನ "ಹೊಸ ಉದಾರವಾದ" ನೆಲಕಚ್ಚುತ್ತದೆ. ಆದ್ದರಿಂದ ನವ–ಉದಾರವಾದಿ ಆರ್ಥಿಕ ವ್ಯವಸ್ಥೆ ದಾರಿಗಾಣದಂತ ಕುರುಡುಗಲ್ಲಿಯನ್ನು ಪ್ರವೇಶಿಸುವುದು ಅಥವಾ ಅದರ ಅಂತ್ಯವು ಉದಾರವಾದದ ರಾಜಕೀಯ ತತ್ವಶಾಸ್ತ್ರಕ್ಕೆ ಒಂದು ಬಿಕ್ಕಟ್ಟಾಗುತ್ತದೆ.

ಈ ಆರ್ಥಿಕ ಕುರುಡು ಗಲ್ಲಿಯ ಪ್ರವೇಶವನ್ನು ಯುರೋಪಿನ ಉದಾಹರಣೆಯೊಂದಿಗೆ ವಿವರಿಸಬಹುದು. ಎಪ್ಪತ್ತರ ದಶಕದ ಮಧ್ಯಭಾಗದವರೆಗೆ ಯುರೋಪಿಯನ್ ಒಕ್ಕೂಟದ (ಆಗ 15)ದೇಶಗಳಲ್ಲಿ ನಿರುದ್ಯೋಗ ದರವು ದೀರ್ಘ ಕಾಲ 3 ಶೇಕಡಾಕ್ಕಿಂತ ಕಡಿಮೆಯಿತ್ತು. ಜಾಗತೀಕರಣವು ಮುಂದುವರೆದಂತೆ ಇದು ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ಮತ್ತು ಎಂಬತ್ತರ ದಶಕದಲ್ಲಿ ಸರಾಸರಿ 7 ಶೇಕಡಾಕ್ಕೆ ಏರಲಾರಂಭಿಸಿತು. ಪ್ರಭುತ್ವದ ಮಧ್ಯಪ್ರವೇಶ ಅದನ್ನು ತಗ್ಗಿಸಲು ಅಸಮರ್ಥವಾಯಿತು.

ಒಂದು ರಾಷ್ಟ್ರ–ಪ್ರಭುತ್ವ ಜಾಗತೀಕರಣಗೊಂಡ ಬಂಡವಾಳವನ್ನು ಎದುರಿಸಿಕೊಂಡು ಒಟ್ಟು ಬೇಡಿಕೆಯನ್ನು ಹೆಚ್ಚಿಸಲು ಮತ್ತು ನಿರುದ್ಯೋಗವನ್ನು ಕಡಿಮೆ ಮಾಡುವುದಕ್ಕಾಗಿ ಮಧ್ಯಪ್ರವೇಶಿಸಲು ಸಾಧ್ಯವಿಲ್ಲವಾದ್ದರಿಂದ, ಅದು ಜಾಗತೀಕರಣಗೊಂಡ ಹಣಕಾಸಿನ ಸುಳಿಯಿಂದ

ಪುಟ 14 ಕ್ಕೆ

ಮಾನವ ಸ್ವಾತಂತ್ರ್ಯ ಮತ್ತು ರಾಜಕೀಯ ತತ್ವಶಾಸ್ತ್ರವಾಗಿ......

ಪುಟ 13 ರಿಂದ

ಸಂಪೂರ್ಣವಾಗಿ ಹೊರಬರಲು ಬಂಡವಾಳ ನಿಯಂತ್ರಣಗಳನ್ನು ಹೇರಬಹುದು ಅಥವಾ ಇತರ ದೇಶಗಳೊಂದಿಗೆ ಸಂಘಟಿತ ಹಣಕಾಸು ಉತ್ತೇಜನವನ್ನು ಹೊಂದಿರಬಹುದು. ಆಗ ಎಲ್ಲಾ ದೇಶಗಳು ಪ್ರಭುತ್ವ ವೆಚ್ಚವನ್ನು ವಿಸ್ತರಿಸುವ ಒಂದೇ ರೀತಿಯ ನೀತಿಯನ್ನು ಅನುಸರಿಸುವುದರಿಂದ ಬೇಡಿಕೆಯನ್ನು ವಿಸ್ತರಿಸುವ ಕ್ರಮಗಳಿಂದಾಗಿ ದೇಶದಿಂದ ಹೊರಹಾರುವ ಬಂಡವಾಳದ ಪ್ರವೃತ್ತಿಯನ್ನು ತಡೆಯಬಹುದು. ಇವುಗಳಲ್ಲಿ ಮೊದಲನೆಯದರಲ್ಲಿ, ದೇಶಗಳು ನವ–ಉದಾರವಾದಿ ವ್ಯವಸ್ಥೆಯಿಂದ ಹೊರಬರಬೇಕಾಗುತ್ತದೆ. ಬಂಡವಾಳ ನಿಯಂತ್ರಣಗಳ ನಂತರ ಇಂದಲ್ಲ ನಾಳೆ ವ್ಯಾಪಾರ ನಿಯಂತ್ರಣಗಳ ಅಗತ್ಯವೂ ಬರುತ್ತದೆ, ಇದರರ್ಥ ಬಂಡವಾಳ ಮತ್ತು ಸರಕುಗಳು ಹಾಗೂ ಸೇವೆಗಳ ತುಲನಾತ್ಮಕವಾಗಿ ಅನಿಯಂತ್ರಿತವಾದ ಹರಿವುಗಳಿಗೆ ತಡೆ ಉಂಟಾಗುತ್ತದೆ. ಆದರೆ ಇಂತಹ ಹರಿವುಗಳೇ ನವ–ಉದಾರವಾದಿ ವ್ಯವಸ್ಥೆಯ ಮೂಲ ಸ್ವಭಾವವಾದ್ದರಿಂದ ಅಂತರಾಷ್ಟ್ರೀಯ ಹಣಕಾಸು ಬಂಡವಾಳವು ಇದನ್ನು ಉಗ್ರವಾಗಿ ವಿರೋಧಿಸುತ್ತದೆ, ಆದ್ದರಿಂದ ಅಂತಹ ದಾರಿಯೊಂದನ್ನು ಅನುಸರಿಸಬೇಕಾದರೆ, ಒಂದು ಪರ್ಯಾಯ ವರ್ಗ ಅಣಿನೆರಿಕೆ ಅಗತ್ಯವಿರುತ್ತದೆ, ಅದು ಏಕಸ್ವಾಮ್ಯ ಬಂಡವಾಳಶಾಹಿಯನ್ನು ಸಂರಕ್ಷಿಸುವ ಒಂದು ಕಾರ್ಯಕ್ರಮಕ್ಕೆ ಸೀಮಿತವಾಗಿ ಉಳಿಯಲು ಸಾಧ್ಯವಿಲ್ಲ.

ಉದಾರವಾದದ ಸೋಲು

ಈ ಮಾರ್ಗಗಳಲ್ಲಿ ಎರಡನೆಯದು, ಅಂದರೆ ಇದು ಎಲ್ಲಾ ದೇಶಗಳಾದ್ಯಂತ ನಿಜವಾದ ಸಂಘಟಿತ ವಿತ್ತೀಯ ಉತ್ತೇಜಕವಾಗಬೇಕಾದರೆ, ಒಂದು ಮಟ್ಟದ ಅಂತರಾಷ್ಟ್ರೀಯತೆ ಬೇಕಾಗುತ್ತದೆ. ಆದರೆ ಬಂಡವಾಳಶಾಹಿ ಆ ಸಾಮರ್ಥ್ಯವನ್ನು ಪ್ರದರ್ಶಿಸಲಾರದು. ಏಕೆಂದರೆ ಅಂಚಿನಲ್ಲಿರುವುದರ ಮೇಲೆ ಪ್ರಾಬಲ್ಯ ನಡೆಸುವ ಪ್ರವೃತ್ತಿ ಅದರೊಳಗೇ ಹುದುಗಿದೆ. ಆದ್ದರಿಂದ ಅದು ಹೆಚ್ಚೆಂದರೆ, ಮುಂದುವರೆದ ಮಹಾನಗರೀಯ ದೇಶಗಳ ನಡುವೆ ಮಾತ್ರವೇ ಸಂಯೋಜಿತ ವಿತ್ತೀಯ ಉತ್ತೇಜನೆಯಷ್ಟೇ ತರಬಲ್ಲುದು. ಅದೇ ವೇಳೆಗೆ ಇದರ ಪರಿಧಿಯ ಹೊರಗಿರುವ ದೇಶಗಳ ಮೇಲೆ ವೆಚ್ಚ ಕಡಿತದ ಆರ್ಥಿಕ ಕ್ರಮಗಳನ್ನು ಹೇರಲಾಗುತ್ತದೆ. ಅಂದರೆ ಸಾಮ್ರಾಜ್ಯಶಾಹಿಯನ್ನು ಬಿಗಿಗೊಳಿಸುವುದು ಎಂದೇ ಅರ್ಥ. ಬಂಡವಾಳಶಾಹಿಯು ಇದನ್ನೂ ಪ್ರಯತ್ನಿಸಬಹುದು, ಆದರೆ ಈ ರೀತಿ ಸಾಮ್ರಾಜ್ಯಶಾಹಿಯನ್ನು ಬಿಗಿಗೊಳಿಸುವುದನ್ನು ಅದರ ಕಿರೀಟದಲ್ಲಿ ಇನ್ನೊಂದು ಗರಿ ಎಂದು ಹೇಳಲು ಸಾಧ್ಯವಿಲ್ಲ. ಬದಲಾಗಿ ಇದು ಉದಾರವಾದದ ಸೋಲೇ ಆಗಿದೆ, ಏಕೆಂದರೆ ಇದನ್ನು ಮಾನವ ಸ್ವಾತಂತ್ರ್ಯಕ್ಕೆ ಒಂದು ಪರ್ಯಾಯ ಸಮಾಜವಾದಿಯೇತರ ಮಾರ್ಗವೆಂದೇ ಪ್ರಸ್ತುತಪಡಿಸಬೇಕಾಗುತ್ತದೆ.

ಉದಾರವಾದದ ಈ ಪೇಚಿನ ಸ್ಥಿತಿಯೇ ಅದರ ಬಿಕ್ಕಟ್ಟು. ದೊಡ್ಡ ಪ್ರಮಾಣದ ನಿರುದ್ಯೋಗ ಇರುವಾಗ, ಅದು ಕೂಲಿ–ಸಂಬಳಗಳನ್ನು ಕೆಳಗೊತ್ತುತ್ತಿರುವಾಗ, ಈ ಮೂಲಕ ಒಟ್ಟಾರೆ ಸ್ಥಗಿತತೆಯನ್ನು ಉಂಟು ಮಾಡುತ್ತಿರುವಾಗ ಅಥವ ಶ್ರಮಜೀವಿಗಳ ಪರಿಸ್ಥಿತಿಗಳು ಇನ್ನಷ್ಟು ಹದಗೆಡುವಂತೆ ಮಾಡುತ್ತಿರುವಾಗ, ಬಂಡವಾಳಶಾಹಿಯ ಒಳಗೇ ಅಂತಹ ಸ್ವಾತಂತ್ರ್ಯ ಸಾಧ್ಯ ಎಂದು ಹೇಳಿಕೊಳ್ಳುವುದು ಅದಕ್ಕೆ ಹೇಗೆ ತಾನೇ ಸಾಧ್ಯ? ಈ ಭೌತಿಕ ವಾಸ್ತವತೆಯನ್ನು ನಿವಾರಿಸುವುದು, ನವ–ಉದಾರವಾದಿ ಬಂಡವಾಳಶಾಹಿಯನ್ನು ಮೀರಿ ಹೋಗದೆ ಸಾಧ್ಯವಿಲ್ಲ. ಅದಕ್ಕೆ ಅಗತ್ಯವಾದ ವರ್ಗ ಮೈತ್ರಿಯು ಅರ್ಥವ್ಯವಸ್ಥೆಯನ್ನು ಸ್ವತಃ ಬಂಡವಾಳಶಾಹಿಯ ಆಚೆಗೇ ಒಯ್ಯುತ್ತದೆ. (ನವ ಉದಾರವಾದೀ ವ್ಯವಸ್ಥೆಯ ಹಿಂದೆ ಇದ್ದ ವ್ಯವಸ್ಥೆಗೆ ಹಿಂದೆ ಸರಿಯುವ ಮಾತೇನಾದರೂ ಇದ್ದರೆ, ಅದು ಲೆನಿನ್ ತನ್ನ ಕೃತಿ 'ಸಾಮ್ರಾಜ್ಯಶಾಹಿ' ಯಲ್ಲಿ ಗೇಲಿ ಮಾಡಿದಂತೆ, ಏಕಸ್ವಾಮ್ಯ ಬಂಡವಾಳಶಾಹಿಯ ದುಷ್ಪರಿಣಾಮಗಳನ್ನು ತೊಡೆದು ಹಾಕುವ ಸಾಧನವಾಗಿ ಯಾವಾಗಲೂ 'ಮುಕ್ತ ಸ್ಪರ್ಧೆಯ ಬಂಡವಾಳಶಾಹಿ' ಎಂಬ ಮಿಥ್ಯೆಗೆ ಮರಳುವ ಮಾತಿನಂತಾಗುತ್ತದೆ.) ನಿರುದ್ಯೋಗವನ್ನು ಕಡಿಮೆ ಮಾಡಲು ಮಹಾನಗರೀಯ ದೇಶಗಳ ನಡುವೆ ಮಾತ್ರ ಸಂಯೋಜಿಸುವ ವಿತ್ತೀಯ ಉತ್ತೇಜನೆಯನ್ನು ಒಪ್ಪಿಕೊಳ್ಳುವುದು ಅದರ ಪರಿಧಿಯ ಹೊರಗಿರುವ ದೇಶಗಳನ್ನು ಅದರ ವ್ಯಾಪ್ತಿಯಿಂದ ಹೊರಗಿಡುವುದು ಎಂದರೆ ಉದಾರವಾದ ತಾನು ಪ್ರತಿಪಾದಿಸುವುದಾಗಿ ಹೇಳಿಕೊಳ್ಳುವ ಆಶಯಗಳಿಗೆ ವಿಶ್ವಾಸದ್ರೋಹ ಬಗೆದಂತೆಯೇ.

ಹಿಂದಿನ ಉದಾರವಾದವು 'ಮಹಾಕುಸಿತ' ಅವಧಿಯಲ್ಲಿ ಕಂಗಾಲಾದಂತೆ, ಕೀನ್ಸ್ ಪ್ರತಿಪಾದಿಸಿದ ಹೊಸ ಉದಾರವಾದ, ನವ–ಉದಾರವಾದದ ಬಿಕ್ಕಟ್ಟಿನಿಂದ ಕಂಗಾಲಾಗಿದೆ. ಅರ್ಥವ್ಯವಸ್ಥೆಗಳನ್ನು ಅವುಗಳ ಬಂಡವಾಳಶಾಹಿ ಗೂಡಿನೊಳಗೇ ಇಟ್ಟು, ಅವುಗಳನ್ನು ಪ್ರಸಕ್ತ ಸ್ಥಗಿತತೆಗಳಿಂದ ಹೊರತರಬಲ್ಲ, ಉದಾರವಾದದ ಬೇರೆ ಯಾವುದೇ ಆವೃತ್ತಿಗಳು ಲಭ್ಯವಿಲ್ಲ, ಅಥವ ಅದು ಸಾಧ್ಯವೂ ಇಲ್ಲ.

ಖಜುರಾಹೊ–ಇಂದೋರ್ ನಿಂದ ಸೂರತ್ ಮೂಲಕ ಚುನಾವಣಾ.....

ಪುಟ 11 ರಿಂದ

ಕಾನೂನು ಕಾಲೇಜು ಸೇರಿದಂತೆ ಮೂರು ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ.

17 ವರ್ಷಗಳ ಹಿಂದಿನ ಕೊಲೆ ಯತ್ನ ಪ್ರಕರಣ

ಬಾಮ್ ಅವರನ್ನು ಉರುಳಿಸುವುದಕ್ಕಾಗಿ 17 ವರ್ಷಗಳ ಹಿಂದಿನ ಕೊಲೆ ಯತ್ನ ಪ್ರಕರಣವನ್ನು ಹೊರ ತಂದರು. ಭೂ ವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕೆಲ ಕಾರ್ಮಿಕರನ್ನು ಹತ್ಯೆ ಮಾಡಲು ಯತ್ನಿಸಿದ ಪ್ರಕರಣ ದಿಢೀರ್ ಮಾಯವಾಗಿತ್ತು. ಏಪ್ರಿಲ್ 24 ರಂದು, ಬಾಮ್ ಅವರು ನಾಮಪತ್ರ ಸಲ್ಲಿಸಿದಾಗ, ಜಿಲ್ಲಾ ಸೆಷನ್ಸ್ ನ್ಯಾಯಾಲಯವು ಈ ಪ್ರಕರಣದಲ್ಲಿ ಅಕ್ಷಯ್ ಕಾಂತಿ ಬಾಮ್ ಮತ್ತು ಅವರ ತಂದೆ ವಿರುದ್ಧ ಆರೋಪಗಳನ್ನು ಸಲ್ಲಿಸಿತು. ಹಾಗಾಗಿ ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿಗೆ ಬಾಮ್ ಅವರನ್ನು ಉರುಳಿಸುವುದು ಸುಲಭವಾಯಿತು.

ನ್ಯಾಯಾಲಯದ ಈ ಹಸ್ತಕ್ಷೇಪವನ್ನು ಎತ್ತಿ ತೋರಿಸಿದ ಬಿಜೆಪಿ, ಬಾಮ್ ಅವರ ನಾಮಪತ್ರವನ್ನು ತಿರಸ್ಕರಿಸುವಂತೆ ಕೇಳಿಕೊಂಡಿತು, ಆದರೆ ಚುನಾವಣಾಧಿಕಾರಿ ಅದನ್ನು ಮಾಡಲು ನಿರಾಕರಿಸಿದರು. ಬಾಮ್ ಪ್ರಚಾರದಲ್ಲಿ ಸಕ್ರಿಯರಾದರು. ನಾಮಪತ್ರ ಹಿಂಪಡೆಯುವ ದಿನ ಬೆಳಗಿನ ಜಾವದವರೆಗೂ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಪ್ರಚಾರ ನಡೆಸಿದ ವ್ಯಕ್ತಿ ನಾಮಪತ್ರ ಹಿಂಪಡೆದು ಸಂಜೆ ಬಿಜೆಪಿಯವರಾಗುತ್ತಾರೆ.

ಇಂತಹವರನ್ನು ಅರ್ಥ ಮಾಡಿಕೊಳ್ಳದ ಕಾಂಗ್ರೆಸ್ ನಾಯಕತ್ವದ ರಾಜಕೀಯ ಭಾರತದ ಶಾಪ. ಇಡಿ, ಸಿಬಿಐ, ಐಟಿ ಬಳಸಿ ಶಾಸಕ, ಸಂಸದರನ್ನು ಅಧಿಕಾರದಿಂದ ಕೆಳಗಿಳಿಸಿ ಪ್ರಜಾಪ್ರಭುತ್ವವನ್ನು ಕೊಂದು ಹಾಕಲು ಯತ್ನಿಸುತ್ತಿರುವ ಬಿಜೆಪಿ ಮತ್ತು ಮೋದಿ ಈಗ ಚುನಾವಣೆಯನ್ನು ಹಾಳು ಮಾಡುತ್ತಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಹಿಂಪಡೆಯುವುದರೊಂದಿಗೆ ಕ್ಷೇತ್ರದ ಎಲ್ಲ ಅಭ್ಯರ್ಥಿಗಳ ನಾಮಪತ್ರ ಹಿಂಪಡೆಯಲು ಬಿಜೆಪಿ ಯತ್ನಿಸುತ್ತಿದೆ. ಬಿಜೆಪಿ ತನ್ನ ಅಭ್ಯರ್ಥಿ ಶಂಕರ್ ಲಾಲ್ವಾನಿ ಅವರನ್ನು ಅವಿರೋಧವಾಗಿ ಗೆಲ್ಲಿಸಲು ಇತರ ಅಭ್ಯರ್ಥಿಗಳನ್ನು ಹಿಂಪಡೆಯುವಂತೆ ಮಾಡಲು ಪ್ರಯತ್ನಿಸಿತು. 2019 ರಲ್ಲಿ, ಬಿಜೆಪಿ ಐದು ಲಕ್ಷಕ್ಕೂ ಹೆಚ್ಚು ಬಹುಮತದೊಂದಿಗೆ ಗೆದ್ದಿತು ಮತ್ತು ಈ ಪ್ರಜಾಸತ್ತಾತ್ಮಕ ದಂಗೆಯನ್ನು ಸಿದ್ಧಪಡಿಸಲಾಯಿತು.

ನಾಗಪುರದ ನಂತರ ಇಂದೋರ್ ಉತ್ತರ ಭಾರತದಲ್ಲಿ ಆರ್‌ಎಸ್‌ಎಸ್‌ನ ಎರಡನೇ ಪ್ರಧಾನ ಕಛೇರಿಯಾಗಿದೆ. ಬಿಜೆಪಿಗೆ ಇಂತಹ ನಾಟಕ ಮಾಡಿ ಗೆಲ್ಲುವ ಅಗತ್ಯವಿರಲಿಲ್ಲ. ಆದರೂ ಪ್ರಜಾಪ್ರಭುತ್ವ ವಿರೋಧಿ ಧೋರಣೆಯು ಸಂಘಪರಿವಾರದ ಪ್ರಜಾಪ್ರಭುತ್ವದ ಮೇಲಿನ ಆಳವಾದ ದ್ವೇಷವನ್ನು ತೋರಿಸುತ್ತದೆ.

ಬಿಜೆಪಿಯಲ್ಲೂ ಈ ಪ್ರಜಾಪ್ರಭುತ್ವದ ವಿರುದ್ಧ ಪ್ರತಿಭಟನೆ ನಡೆಯುತ್ತಿದೆ. ಬಿಜೆಪಿಯ ಕಾರ್ಯವೈಖರಿ ಬಗ್ಗೆ ಸುಮಿತ್ರ ಮಹಾಜನ್ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಸುಮಿತ್ರ ಮಹಾಜನ್ ಅವರು ಮಾಜಿ ಲೋಕಸಭಾ ಸ್ಪೀಕರ್ ಆಗಿದ್ದು, ಅವರು 1989 ರಿಂದ 2014 ರವರೆಗೆ ಇಂದೋರ್‌ನಿಂದ ಸತತ ಎಂಟು ಬಾರಿ ಗೆದ್ದಿದ್ದಾರೆ. ಇಂದೋರ್‌ನ ಹಲವು ಪ್ರಮುಖರು ತಮಗೆ ಕರೆ ಮಾಡಿ ನೋಟಾಗೆ ಮತ ಹಾಕುತ್ತೇವೆಯೇ ಹೊರತು ಬಿಜೆಪಿಗೆ ಅಲ್ಲ ಎಂದು ಹೇಳುತ್ತಿದ್ದಾರೆ ಎಂದು ಅವರು 'ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್'ಗೆ ತಿಳಿಸಿದರು. ಬಿಜೆಪಿ ಭಾರಿ ಬಹುಮತದೊಂದಿಗೆ ಗೆಲ್ಲಬಹುದು ಎಂದಾಗಿದ್ದಲ್ಲಿ ಈ ಪ್ರಜಾಸತ್ತಾತ್ಮಕ ಹತ್ಯೆಯನ್ನು ಏಕೆ ನಡೆಸಲಾಯಿತು ಎಂಬ ಪ್ರಶ್ನೆಯನ್ನೂ ಸುಮಿತ್ರಾ ಮಹಾಜನ್ ಎತ್ತಿದ್ದಾರೆ. ಅದಕ್ಕೆ ಮೋದಿ, ಅಮಿತ್ ಶಾ, ಬಿಜೆಪಿ ಉತ್ತರ ಕೊಡಬೇಕು.

ಎಸ್‌ಯುಸಿಐ (ಕಮ್ಯೂನಿಸ್ಟ್) ಅಭ್ಯರ್ಥಿ ಹಿಂದೆ ಸರಿಯಲಿಲ್ಲ: ನೋಟಾಕ್ಕೆ ಮತ ಹಾಕುವಂತೆ ಕಾಂಗ್ರೆಸ್ ಕರೆ

ಆದರೆ ಸೂರತ್‌ನಂತೆ ಇಂದೋರ್ ನಲ್ಲಿ ಬಿಜೆಪಿ ಅವಿರೋಧವಾಗಿ ಗೆಲ್ಲುವ ಸ್ಥಿತಿಯಲ್ಲಿಲ್ಲ. ಅಜಿತ್ ಸಿಂಗ್ ಪನ್ವಾರ್ ಅವರು ಇಂದೋರ್ ನಿಂದ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಈ ಪಕ್ಷ ಮಧ್ಯಪ್ರದೇಶದ ಆರು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಆದರೆ ಪನ್ವಾರ್ ಅವರನ್ನು ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಮಾಡಲು ಬಿಜೆಪಿ ಸಾಕಷ್ಟು ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಬಿಜೆಪಿ ನಾಯಕರ ಹೊರತಾಗಿ ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ಪೊಲೀಸರು ತೀವ್ರ ಒತ್ತಡ ಹೇರಿದರೂ ಪನ್ವಾರ್ ಅದಕ್ಕೆ ಮಣಿಯಲಿಲ್ಲ ಎಂದು ಸುದ್ದಿ ಪೋರ್ಟಲ್ 'ದಿ ವೈರ್' ವರದಿ ಮಾಡಿದೆ.

ಅದೇ ನ್ಯೂಸ್ ಪೋರ್ಟಲ್ ಮಧ್ಯಪ್ರದೇಶದ ಗುನಾ ಮೂಲದ ಪನ್ವಾರ್ ಅವರನ್ನು ಸ್ಥಳೀಯ ಪೊಲೀಸ್ ಅಧಿಕಾರಿ ಕರೆದು ಬಿಜೆಪಿ ನಾಯಕರನ್ನು ಭೇಟಿಯಾಗುವಂತೆ ಕೇಳಿಕೊಂಡಿದ್ದಾರೆ ಎಂದು ವರದಿ ಮಾಡಿದೆ. ಅದೂ ವಿಫಲವಾದಾಗ, ಬಿಜೆಪಿ ಕಾರ್ಯಕರ್ತರು ಪನ್ವಾರ್ ಅವರ ಹೆಸರನ್ನು ಸೂಚಿಸಿದ ಎಸ್‌ಯುಸಿಐ ಕಾರ್ಯಕರ್ತನ ಮನೆಗೆ ಹೋದರು ಮತ್ತು ಜಿಲ್ಲಾಧಿಕಾರಿ ಕಚೇರಿಗೆ ಬಂದು ನಾಮಪತ್ರದ ಮೇಲಿನ ಸಹಿ ತಮ್ಮದಲ್ಲ ಎಂದು ಅಧಿಕಾರಿಗಳಿಗೆ ತಿಳಿಸುವಂತೆ ಒತ್ತಾಯಿಸಿದರು. ಆದರೆ ಎಡಪಂಥೀಯ ಪಕ್ಷದ ಕಾರ್ಯಕರ್ತರು ಹೆದರಲಿಲ್ಲ ಮತ್ತು ಹಿಂದೆ ಸರಿಯಲು ನಿರಾಕರಿಸಿದರು.

ಪನ್ವಾರ್ ಅವರನ್ನು ಕಣದಿಂದ ಹಿಂದೆ ಸರಿಸಲು ಬಿಜೆಪಿ ವಿಫಲವಾದ ನಂತರ, ಇತರ ಸ್ವತಂತ್ರ ಅಭ್ಯರ್ಥಿಗಳನ್ನು ಕಣದಿಂದ ಹಿಂದೆ ಸರಿಸುವ ಪ್ರಯತ್ನವನ್ನು ನಿಲ್ಲಿಸಿದೆ. ಬ್ಯಾಲೆಟ್ ಪೇಪರ್ ನಲ್ಲಿ ಪನ್ವಾರ್ ಹೆಸರು ಇರುವವರೆಗೂ ಮತದಾನ ತಪ್ಪಿಸಲು ಸಾಧ್ಯವಿಲ್ಲ. ನಿರಾಶೆಗೊಂಡ ಕಾಂಗ್ರೆಸ್ ನೋಟಾಕ್ಕೆ ಮತ ಹಾಕುವಂತೆ ಕರೆ ನೀಡಿದೆ. ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಇಂಧೋರ್ ಮತ್ತು ಖಜುರಾಹೊ ಕೂಡ ಬಿಜೆಪಿಯ ವಿರುದ್ಧ ಕಾಂಗ್ರೆಸ್ ಮಾತ್ರವಲ್ಲ ಎಡಪಕ್ಷಗಳು ಹೇಗೆ ಹೋರಾಡುತ್ತಿವೆ ಎಂಬುದಕ್ಕೆ ಉದಾಹರಣೆಗಳಾಗಿವೆ.

ಗಾಂಧಿನಗರ ಕ್ಷೇತ್ರದಲ್ಲಿ ಪ್ರಯತ್ನ

ಬಿಜೆಪಿಯ ನಂಬರ್ ಟು ಮತ್ತು ಚಾಣಕ್ಯ ಅಮಿತ್ ಶಾ ಸ್ಪರ್ಧಿಸುತ್ತಿರುವ ಗಾಂಧಿನಗರ ಕ್ಷೇತ್ರದಿಂದ ಅಭ್ಯರ್ಥಿಗಳನ್ನು ಹಿಂತೆಗೆಯುವಂತೆ ಮಾಡುವ ಇತ್ತೀಚಿನ ಪ್ರಯತ್ನವಾಗಿದೆ. ಇಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿರುವ ಜಿತೇಂದ್ರ ಸಿಂಗ್ ಚೌಹಾಣ್ ಅವರ ವಿಡಿಯೋದಿಂದ ಇದು ಬಹಿರಂಗವಾಗಿದೆ.

ಚೌಹಾಣ್ ಅವರದು ಎಂದು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ವೀಡಿಯೊದಲ್ಲಿ, ತನ್ನನ್ನು ಅಪಹರಿಸಿ ನಾಮಪತ್ರ ಹಿಂಪಡೆಯುವಂತೆ ಬೆದರಿಕೆ ಹಾಕಲಾಗಿದೆ ಎಂದು ಹೇಳಿದ್ದಾರೆ. ಅಮಿತ್ ಶಾ ಅವರ ಆಳುಗಳು ನನ್ನನ್ನು ಅಪಹರಿಸಿದ್ದಾರೆ. ನನಗೆ ಏನು ಬೇಕಾದರೂ ಆಗಬಹುದು. ಈ ದೇಶವನ್ನು ಉಳಿಸಿ ಎಂಬುದು ಈ ದೇಶದ ನಾಗರಿಕರಲ್ಲಿ ನನ್ನ ವಿನಂತಿ.

'ಈ ದೇಶ ಅಪಾಯದಲ್ಲಿದೆ' ಎಂದು ಚೌಹಾಣ್ ಅಳುತ್ತಾ ಹೇಳಿದರು. ಅಹಮದಾಬಾದ್ ನ ಬಾಪು ನಗರದ ಬಿಜೆಪಿ ಶಾಸಕ ದಿನೇಶ್ ಸಿಂಗ್ ಕುಶ್ವಾಹಾ ಅವರು ಚೌಹಾಣ್ ಗೆ ನಾಮಪತ್ರ ಹಿಂಪಡೆಯುವಂತೆ ಒತ್ತಾಯಿಸಿದರು. ಪೊಲೀಸ್ ಅಧಿಕಾರಿಗಳು ಪ್ರಜಾತಂತ್ರ ಆಧಾರ್ ಪಕ್ಷದ ಸುಮಿತ್ರಾ ಮೌರ್ಯ ಅವರ ನಾಮಪತ್ರವನ್ನು ಹಿಂಪಡೆಯುವಂತೆ ಒತ್ತಾಯಿಸಿದರು. ಆದರೆ ಚೌಹಾಣ್ ಅವರಂತೆ ಸುಮಿತ್ರಾ ಮೌರ್ಯ ಅವರು ನಾಮಪತ್ರ ಹಿಂಪಡೆಯಲು ಸಿದ್ಧರಿರಲಿಲ್ಲ. 1989 ರಿಂದ ಬಿಜೆಪಿ ಸತತವಾಗಿ ಗೆದ್ದಿರುವ ಗುಜರಾತ್‌ನ ಕ್ಷೇತ್ರಗಳಲ್ಲಿ ಗಾಂಧಿನಗರವೂ ಒಂದು. ಕಳೆದ ಚುನಾವಣೆಯಲ್ಲಿ ಅಮಿತ್ ಶಾ 5.5 ಲಕ್ಷಕ್ಕೂ ಹೆಚ್ಚು ಮತಗಳಿಂದ ಗೆದ್ದಿದ್ದ ಕ್ಷೇತ್ರದಲ್ಲಿ ಅಮಿತ್ ಶಾ ಮತ್ತು ಅವರ ಸಹೋದ್ಯೋಗಿಗಳು ಅವಿರೋಧವಾಗಿ ಆಯ್ಕೆಯಾಗಲು ಪ್ರಯತ್ನಿಸಿದರು. ಇದು ಪ್ರಜಾಪ್ರಭುತ್ವದ ಕೊಲೆಯಲ್ಲದೇ ಮತ್ತೇನು?

ವಿರೋಧ ಮುಕ್ತ ಭಾರತದ ಗುರಿಯನ್ನು ಸಾಧಿಸಲು ಬಿಜೆಪಿ ಅನುಸರಿಸುತ್ತಿರುವ ಹಲವು ಮಾರ್ಗಗಳಲ್ಲಿ ಕೊನೆಯದು ಚುನಾವಣೆಯನ್ನೇ ತಪ್ಪಿಸಿ ತನ್ನದೇ ಅಭ್ಯರ್ಥಿಗಳನ್ನು ಗೆಲ್ಲಿಸುವುದು. ಗೆದ್ದ ನಂತರ ಅವರನ್ನು ಕಣಕ್ಕಿಳಿಸುವ ಬದಲು, ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿಯೇ ಪ್ರತಿಪಕ್ಷಗಳ ಅಭ್ಯರ್ಥಿಗಳನ್ನು ಹೆದರಿಸಿ, ಬೆದರಿಸಿ ಕಣದಿಂದ ಹಿಂದೆ ಸರಿಸುವಂತಹ ವಿನೂತನ ತಂತ್ರಗಾರಿಕೆಯನ್ನು ಬಿಜೆಪಿ ಹೊಂದಿದೆ. ಚುನಾವಣೆಯ ಮುಸುಕಿನ ಹಿಂದೆ ಅಡಗಿರುವ ಸರ್ವಾಧಿಕಾರವೇ ಮೋದಿಯವರ ಭಾರತ.

(ಪೇಟ್ರಿಯಾಟ್ ವೀಕ್ಲಿಯಿಂದ)–ಅನು:ಸಿ.ಸಿದ್ದಯ್ಯ

ಮಹಾಘಟಬಂಧನ್ ರ‍್ಯಾಲಿ



ಬಿಹಾರ: ಫಲಿಸದ ಕೋಮು ವಿಭಜನೆಯ ಪ್ರಯತ್ನ 'ಇಂಡಿಯಾ' ಕೂಟದ ಸ್ಪಷ್ಟ ಮೇಲುಗೈ

ಎಲ್ಲ ಏಳು ಹಂತಗಳಲ್ಲೂ ಚುನಾವಣೆಗಳು ನಡೆಯುತ್ತಿರುವ ಬಿಹಾರ ರಾಜ್ಯದಲ್ಲಿ ಈಗಾಗಲೇ ಮೂರು ಹಂತಗಳ ಚುನಾವಣೆಗಳು ಮುಗಿದಿದ್ದು, ನಾಲ್ಕನೇ ಹಂತದ ಚುನಾವಣೆಗೆ ವೇದಿಕೆ ಸಜ್ಜುಗೊಂಡಿದೆ. ಆಡಳಿತರೂಢ, ಜೆಡಿ(ಯು)–ಬಿಜೆಪಿ, ಮತ್ತು ಇತರ ಕೆಲವು ಸಣ್ಣ ಪಕ್ಷಗಳನ್ನು ಒಳಗೊಂಡ ಎನ್.ಡಿ.ಎ. ಕೂಟದ ಪರವಾಗಿ ನರೇಂದ್ರ ಮೋದಿ, ಅಮಿತ್ ಶಾ ಆದಿಯಾಗಿ ಘಟಾನುಘಟಿಗಳು ರೋಡ್ ಷೋ ಸೇರಿದಂತೆ ನಾನಾ ರೀತಿಯ ಚುನಾವಣಾ ಪ್ರಚಾರಗಳಲ್ಲಿ ಭಾಗಿಯಾಗಿ ಬೆವರು ಸುರಿಸುತ್ತಿದ್ದರೂ ಸಹ ದಿನೇ ದಿನೇ 'ಇಂಡಿಯಾ' ಕೂಟದ ಪರವಾಗಿ ಏರುತ್ತಿರುವ ಜನಬೆಂಬಲವನ್ನು ಕಂಡು ಬಿಜೆಪಿ ನಾಯಕರು ಅಕ್ಷರಶಃ ನಿದ್ದೆಗೆಟ್ಟಿದ್ದಾರೆ.

ಈಗಾಗಲೆ ನಡೆದ ಮೂರು ಹಂತಗಳ ಚುನಾವಣೆಗಳಲ್ಲಿ ಎನ್.ಡಿ.ಎ. ಕೂಟಕ್ಕೆ ದೊಡ್ಡ ಸೋಲು ಖಚಿತ ಎನ್ನುವ ಸ್ಪಷ್ಟ ಸೂಚನೆಗಳನ್ನು ಗ್ರಹಿಸಿರುವ ನಾಯಕರು ಎನ್.ಡಿ.ಎ. ಕಾರ್ಯಕರ್ತರಲ್ಲಿನ ಹತಾಶೆಯನ್ನು ತಗ್ಗಿಸಿ ಹೇಗಾದರೂ ಉತ್ಸಾಹ ಉಳಿಸಿಕೊಳ್ಳುವಂತೆ ಮಾಡಲು ಹೆಣಗುತ್ತಿದ್ದಾರೆ. ಲಾಲನ್ ಸಿಂಗ್, ನಿತ್ಯಾನಂದ ರಾಯ್, ಗಿರಿರಾಜ್ ಮುಂತಾದ ನಾಯಕರು ಮನೆ ಮನೆ ಭೇಟಿಗಾಗಿ ತಿರುಗುತ್ತಿದ್ದಾರೆ. ಆದರೆ ಪರಿಸ್ಥಿತಿ ಅವರ ಆಶಯಕ್ಕೆ ವಿರುದ್ದವಾಗಿ ಅವರ ಕೈಮೀರಿ ಹೋಗುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ.

ದರ್ಭಾಂಗ ಕ್ಷೇತ್ರವು ಸಾಂಪ್ರದಾಯಿಕವಾಗಿ ಬಿಜೆಪಿಯ ಸುರಕ್ಷಿತ ಕ್ಷೇತ್ರ ಎಂದು ಪರಿಗಣಿಸಲಾದ ಕ್ಷೇತ್ರ. ದರ್ಭಾಂಗದಲ್ಲಿಯೇ ಈ ಸಾರಿ ಬಿಜೆಪಿಗೆ ಗೆಲುವು ಅಷ್ಟು ಸುಲಭವಿಲ್ಲ ಎಂಬ ವಾತಾವರಣ ಸೃಷ್ಟಿಯಾಗಿದೆ.

ಪ್ರಧಾನಿ ನರೇಂದ್ರ ಮೋದಿಯವರು ಪ್ರಧಾನಿ ಸ್ಥಾನದ ಘನತೆಯನ್ನೂ ಮರೆತು ದೇಶದಲ್ಲೆಡೆ ಮಾಡಿರುವಂತೆಯೇ ಬಿಹಾರದಲ್ಲಿಯೂ ಸಮಾಜವನ್ನು ಕೋಮು ಆಧಾರದಲ್ಲಿ ವಿಭಜಿಸುವ ಮತಾಂಧ ಮಾತುಗಳನ್ನೇ ಆಡಿದರೂ, ವಿರೋಧ ಪಕ್ಷಗಳ ನಾಯಕರ ಕುರಿತು ಭಾವನಾತ್ಮಕವಾದ ಮತ್ತು ಕ್ಷುಲ್ಲಕವಾದ ಟೀಕೆಗಳನ್ನು ಮಾಡಿದರೂ ಜನರು ಆ ಮಾತುಗಳಿಗೆ ಸ್ಪಂದಿಸುತ್ತಿಲ್ಲ. ಬದಲಿಗೆ ಉದ್ಯೋಗ ಸೃಷ್ಟಿ, ಕೃಷಿ ಬಿಕ್ಕಟ್ಟು, ನಗರ ಪ್ರದೇಶಗಳಿಗೆ ಗ್ರಾಮೀಣ ಜನರು ಗುಳೆ–ವಲಸೆ ಹೋಗಬೇಕಾದ ಪರಿಸ್ಥಿತಿಗಳು, ಮನೆ–ನಿವೇಶನ, ಶಿಕ್ಷಣ, ಆರೋಗ್ಯದ ಪ್ರಶ್ನೆಗಳನ್ನು ಸಾರ್ವಜನಿಕರು ಪ್ರಧಾನ ವಿಷಯಗಳಾಗಿ ಚರ್ಚಿಸುತ್ತಿದ್ದಾರೆ. ಈ ಸಂಬಂಧ ಬಿಹಾರ ರಾಜ್ಯದಲ್ಲಿ ನಿರಂತರವಾಗಿ ಜನರ ಬದುಕಿನ ಈ ಪ್ರಶ್ನೆಗಳನ್ನು ಎತ್ತಿಕೊಂಡು ಹೋರಾಟ ನಡೆಸುತ್ತಿರುವ ಎಡಪಕ್ಷಗಳ ಪ್ರಯತ್ನಗಳೂ ಈ ಬೆಳವಣಿಗೆಗೆ ಸಹಾಯಕವಾಗಿವೆ. ಎಡಪಕ್ಷಗಳ ಪ್ರಭಾವಶಾಲಿ ಪ್ರಚಾರವು ಮಹಾಘಟಬಂಧನದ ಆರ್.ಜೆ.ಡಿ., ಕಾಂಗ್ರೆಸ್ ಪಕ್ಷಗಳೂ ಇವೇ ವಿಷಯಗಳನ್ನು ಪ್ರಧಾನವಾಗಿ ಚರ್ಚಿಸುವಂತೆ ಮಾಡಿದೆ. ಜನರು ಅದರಲ್ಲೂ ಬಹಳ ಮುಖ್ಯವಾಗಿ ರಾಜ್ಯದ ಯುವಜನರು ಉದ್ಯೋಗದ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸಿರುವುದು ಎಲ್ಲೆಲ್ಲೂ ಕಂಡು ಬರುತ್ತಿದೆ.

ರೋಡ್ ಷೋ ನಲ್ಲಿ ಸ್ವತಃ ನಿತಿಶ್ ಕುಮಾರ್, ಎದೆಯ ಮೇಲೆ ಬಿಜೆಪಿಯ ಕಮಲದ ಗುರುತಿನ ಬ್ಯಾಡ್ಜ್ ಅನ್ನು ಧರಿಸಿ ಷೋ ಕೊಟ್ಟರೂ, ರಾಜ್ಯಾದ್ಯಂತ ಟಿವಿಗಳಲ್ಲಿ ಈ ವಿಷಯಕ್ಕೆ ಭಾರಿ ಪ್ರಚಾರ ಕೊಟ್ಟು ಪ್ರಸಾರ ಮಾಡಿದರೂ ಬೆಗುಸರಾಯ್, ಮುಂಗೇರ್, ದರ್ಭಾಂಗ್, ಉಜಿಯಪುರ್, ಸಮಸ್ತಿಪುರ್ ಯಾವ ಕ್ಷೇತ್ರಗಳಲ್ಲಿಯೂ ಅದು ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗಿಲ್ಲ.

ಜನರು ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಆರ್.ಜೆ.ಡಿ., ಕಾಂಗ್ರೆಸ್, ಎಡಪಕ್ಷಗಳು ಸೇರಿದ ಮಹಾಘಟಬಂಧನವು ನೀಡಿದ್ದ ಚುನಾವಣಾ ಭರವಸೆಗಳನ್ನು ಹಾಗೂ ಎನ್.ಡಿ.ಎ.ಯ ಚುನಾವಣಾ ಭರವಸೆಗಳನ್ನು ಮತ್ತು ಸಾಧನೆಗಳನ್ನು ಹೋಲಿಕೆ ಮಾಡಿ ನೋಡುತ್ತಿದ್ದಾರೆ. ಮಹಾಘಟಬಂಧನ್ ಕಳೆದ ಚುನಾವಣೆಯ ಸಂದರ್ಭದಲ್ಲಿ ಹತ್ತು ಲಕ್ಷ ಉದ್ಯೋಗ ನೇಮಕಾತಿಯ ಭರವಸೆ ನೀಡಿತ್ತು. ಆದರೆ ಆಗ ಜೆಡಿಯು ಮತ್ತು ಬಿಜೆಪಿಗಳು ಈ ಭರವಸೆ ಬಗೆಗೆ ಕುಹಕವಾಡಿದ್ದವು. ನಂತರದ ರಾಜಕೀಯ ಬದಲಾವಣೆಯ ಹಿನ್ನೆಲೆಯಲ್ಲಿ ಬಿಹಾರದಲ್ಲಿ ಮಹಾಘಟಬಂಧನ್ ಸರಕಾರ ರಚನೆಯಾದಾಗ, ಬಿಹಾರ ಮುಖ್ಯಮಂತ್ರಿ ನಿತಿಶ್ ಕುಮಾರ್ ಅವರ ಮೇಲೆ ಒತ್ತಡ ಹೇರಿ, 17 ತಿಂಗಳ ಅವಧಿಯಲ್ಲಿ 5 ಲಕ್ಷ ಉದ್ಯೋಗ ನೇಮಕಾತಿ ಮಾಡುವಂತೆ ಮಾಡುವಲ್ಲಿ ಮಹಾಘಟಬಂಧನದ ಪಕ್ಷಗಳು ಯಶಸ್ವಿಯಾಗಿದ್ದವು. ಜನರು ಇದನ್ನು ಚರ್ಚಿಸುತ್ತಿದ್ದಾರೆ. ಅಲ್ಲದೇ, ಎನ್.ಡಿ.ಎ. ಹೇಳುತ್ತಿರುವ ಅಭಿವೃದ್ಧಿ ಎಂದರೆ ಅದು ಕೇವಲ, ಆಧಿಕಾರಸ್ಥರಿಗೆ ಆಪ್ತರಾದ ಕೆಲವೇ ಬಂಡವಾಳಿಗರ ಅಭಿವೃದ್ಧಿ ಎಂಬುದು ಜನರ ಅನುಭವಕ್ಕೆ ಬರುತ್ತಿದೆ.

ಮಹಾಘಟಬಂಧನದ ಭಾಗವಾಗಿ, ಎಡಪಕ್ಷಗಳ ಪೈಕಿ ಸಿಪಿಐ(ಎಂ) ಖಗರಿಯ ಕ್ಷೇತ್ರದಲ್ಲೂ, ಸಿಪಿಐ ಬೆಗುಸರಾಯ್ ಕ್ಷೇತ್ರದಲ್ಲೂ, ಸಿಪಿಐ(ಎಂಎಲ್) ಅರ, ಕರ್ಕಟ್, ನಳಂದ ಈ ಮೂರು ಕ್ಷೇತ್ರಗಳಲ್ಲೂ ಸ್ಪರ್ಧಿಸಿದ್ದು ಕಾರ್ಯಕರ್ತರು ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ಬಿಜೆಪಿಯ ಪ್ರಾಬಲ್ಯವಿರುವ ಪಾಟ್ನಾ ನಗರದ ಪಾಟಲಿಪುತ್ರ, ಹಾಗೂ ಪಾಟ್ನಾ ಸಾಹಿಬ್ ಕ್ಷೇತ್ರಗಳಲ್ಲಿಯೂ ಆರ್.ಜೆ.ಡಿ. ಮತ್ತು ಕಾಂಗ್ರೆಸ್ ಪಕ್ಷಗಳು ಈ ಬಾರಿ ಪ್ರಬಲ ಸ್ಪರ್ಧೆ ಒಡ್ಡಿದ್ದು, ಎನ್.ಡಿ.ಎ. ಕೂಟ ಗೆಲುವಿಗಾಗಿ ತಿಣಕಾಡುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ●

ಹರ್ಯಾಣ: ಜನಾಕ್ರೋಶದಿಂದ ತತ್ತರಿಸಿರುವ ಬಿಜೆಪಿ

ಪುಲ್ವಾಮ ಭಯೋತ್ಪಾದಕ ದಾಳಿಯ ವಿಶೇಷ ಸನ್ನಿವೇಶದಲ್ಲಿ 2019 ರಲ್ಲಿ ಬಿಜೆಪಿಯು ಹರ್ಯಾಣ ರಾಜ್ಯದಲ್ಲಿನ ಎಲ್ಲ 10 ಸ್ಥಾನಗಳನ್ನೂ ಗೆದ್ದಿತ್ತು. ಈ ಬಾರಿ ಗೆದ್ದ ಸ್ಥಾನಗಳಲ್ಲಿ ಅರ್ಧದಷ್ಟನ್ನಾದರೂ ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಪರಿಸ್ಥಿತಿ ಬಂದಿದೆ. ಈ ಮಧ್ಯೆ ದಿಢೀರನೆ ರಾಜ್ಯದ ಬಿಜೆಪಿ ಸರಕಾರ ಬಹುಮತ ಕಳೆದುಕೊಂಡಿದೆ. ಕೇವಲ ಎರಡು ತಿಂಗಳ ಹಿಂದೆ ಮುಖ್ಯಮಂತ್ರಿ ಮನೋಹರ ಲಾಲ್ ಕಟ್ಟರ್ ಅವರನ್ನು ಬದಲಿಸಿ ಬಿಜೆಪಿ ಸಂಸದ ನಯಾಬ್ ಸಿಂಗ್ ಸೈನಿಯವರನ್ನು ಆ ಜಾಗದಲ್ಲಿ ಕೂರಿಸಿತ್ತು.

88 ಸದಸ್ಯರ ವಿಧಾನ ಸಭೆಯಲ್ಲಿ 40 ಸದಸ್ಯರನ್ನು ಹೊಂದಿರುವ ಬಿಜೆಪಿ ಜನಾದೇಶಕ್ಕೆ ವಿರುದ್ಧವಾಗಿ ಬಿಜೆಪಿ ವಿರೋಧಿ ಅಲೆಯಲ್ಲಿ 10 ಸ್ಥಾನ ಗೆದ್ದಿದ್ದ ಜೆಜೆಪಿ ಮತ್ತು ಸ್ವತಂತ್ರ ಶಾಸಕರ ಬೆಂಬಲದೊಂದಿಗೆ ಸರಕಾರ ಮಾಡುತ್ತಿತ್ತು. ಮೇ 7 ರಂದು ಮೂವರು ಸ್ವತಂತ್ರ ಅಭ್ಯರ್ಥಿಗಳು ಬೆಂಬಲ ವಾಪಸ್ ಪಡೆದು ಕಾಂಗ್ರೆಸ್ ಜೊತೆಗೆ ಸೇರಿದ್ದಾರೆ. ಜೆಜೆಪಿಯೂ ಬಿಜೆಪಿ ಮೈತ್ರಿ ಕಡಿದುಕೊಂಡಿದೆ. ಈ ಎಲ್ಲ ಬೆಳವಣಿಗೆಗಳಿಗೆ ಕಾರಣವಾಗಿರುವುದು ಪ್ರಧಾನವಾಗಿ ರಾಜ್ಯ ಬಿಜೆಪಿ ಸರಕಾರದ ವಿರುದ್ಧದ ಜನಾಕ್ರೋಶ. ಅದರಲ್ಲೂ ಮುಖ್ಯವಾಗಿ ರೈತರ ಜನಾಕ್ರೋಶ.

ಕೊರೊನ ಸಾಂಕ್ರಾಮಿಕದ ಬಿಕ್ಕಟ್ಟಿನ ಕಾಲದಲ್ಲಿ




ಸಿಪಿಐ(ಎಂ) ಪ್ರಚಾರ ಸಭೆ

ಮೋದಿ ಸರಕಾರವು ಮೂರು ಕರಾಳ ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ಕಳ್ಳಮಾರ್ಗದಲ್ಲಿ ಜಾರಿಗೆ ತಂದಿದ್ದನ್ನು ಹಾಗೂ ಈ ಕಾಯ್ದೆಗಳ ವಿರುದ್ಧ ರೈತರು 13 ತಿಂಗಳುಗಳ ಕಾಲ ಚಳಿ–ಗಾಳಿ–ಮಳೆ ಎನ್ನದೇ ಬೀದಿಯಲ್ಲಿ ಹೋರಾಟ ನಿರತವಾಗಿದ್ದಾಗ ಮೋದಿ ಸರಕಾರ ಹಾಗೂ ರಾಜ್ಯದ ಬಿಜೆಪಿ ಸರಕಾರಗಳು ಅವರು 'ನಕಲಿ ರೈತರು' ಎಂದೂ, 'ಆಂದೋಲನ ಜೀವಿಗಳೂ' ಎಂದು ಹಂಗಿಸಿ, ರೈತರ ಮೇಲೆ ಹರ್ಯಾಣ ಸರಕಾರದ ಪೊಲೀಸರು ಲಾಠಿ ಪ್ರಹಾರ ಟಿಯರ್ ಗ್ಯಾಸ್ ಹಾಕಿ ಗುಂಡು ಹಾರಿಸಿದ್ದನ್ನು ಮರೆತಿಲ್ಲ. ಈ ಚಳುವಳಿಯಲ್ಲಿ ಶುಭ್ ಕರಣ ಸಿಂಗ್ ಎಂಬ ಯುವ ರೈತ, ಹಾಗೂ ನೂರಾರು ರೈತರು ಪ್ರಾಣ ತೆತ್ತರು. ಆಶಾ, ಅಂಗನವಾಡಿಗಳಂತಹ ಸ್ಕೀಂ ನೌಕಕರ ಹೋರಾಟಗಳ ವಿಷಯದಲ್ಲೂ ಸರಕಾರ ಹೀಗೆ ನಿರ್ದಯವಾಗಿ ನಡೆದುಕೊಂಡಿರುವುದು ಜನರ ಮನಸ್ಸಿನಲ್ಲಿ ಹಸಿಯಾಗಿದೆ. ಒಲಂಪಿಕ್ ಪದಕ ವಿಜೇತರಾದ ಹರ್ಯಾಣ ಮೂಲದ ಮಹಿಳಾ ಕ್ರೀಡಾಪಟುಗಳು ಕೇಂದ್ರ ಸಚಿವ ಬ್ರಿಜ್ ಭೂಷಣನ ಲೈಂಗಿಕ ಕಿರುಕುಳದ ವಿರುದ್ಧ ದೆಹಲಿಯ ಬೀದಿಯಲ್ಲಿ ಪ್ರತಿಭಟನೆ ಮಾಡಿದಾಗ ಈ ಸರಕಾರಗಳು ಕ್ರೂರವಾಗಿ ನಡೆದುಕೊಂಡಿದ್ದನ್ನೂ ಹಾಗೂ ಹರ್ಯಾಣ ಸಚಿವ ಸಂಪುಟದಲ್ಲೂ ಒಬ್ಬ 'ಮರಿ ಬ್ರಿಜ್ ಭೂಷಣ ಸಿಂಗ್' ಇರುವುದನ್ನು ಜನ ಮರೆತಿಲ್ಲ. ರಾಜ್ಯದಲ್ಲಿ ಶಿಕ್ಷಣ, ಆರೋಗ್ಯ, ಸಾರಿಗೆ, ವಿದ್ಯುತ್ ಮುಂತಾದ ಕ್ಷೇತ್ರಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸೊರಗಿಸಲಾಗಿದೆ. ಗೋರಕ್ಷಣೆಯ ಹೆಸರಿನಲ್ಲಿ ಅಲ್ಪ ಸಂಖ್ಯಾತರ ಮೇಲೆ ಗೂಂಡಾಗಿರಿಗಳು ನಡೆದಿವೆ. ನಿರುದ್ಯೋಗ ಹೆಚ್ಚಳ, ಮೋದಿ ಸರಕಾರದ 'ಅಗ್ನಿವೀರ್' ಯೋಜನೆಯ ವಂಚನೆ, ಎಲ್ಲವೂ ಸೇರಿ ರಾಜ್ಯದ ಉದ್ದಗಲ ಬಿಜೆಪಿ ನಾಯಕರು, ಅಭ್ಯರ್ಥಿಗಳಿಗೆ ಜನರು ಕಪ್ಪು ಬಾವುಟ ತೋರಿಸಿ ಪ್ರತಿಭಟಿಸುವುದು, ಸಭೆ ನಡೆಯುವಲ್ಲೇ ತೀಕ್ಷ್ಣವಾಗಿ ಪ್ರಶ್ನಿಸುವುದು ಮಾಡುತ್ತಿದ್ದಾರೆ.


ಇಂಡಿಯಾ ಕೂಟದ ಪರವಾಗಿ ಕಾಂಗ್ರೆಸ್ 9, ಆಪ್ 1 ಸ್ಥಾನದಲ್ಲಿ ಸ್ಪರ್ಧಿಸುತ್ತಿದ್ದು ಸಿಪಿಐ, ಸಿಪಿಐ(ಎಂ) ಪಕ್ಷಗಳು ಜನರ ಬದುಕಿನ ಪ್ರಶ್ನೆಗಳ ಆಧಾರದಲ್ಲಿ ಇಂಡಿಯಾ ಕೂಟದ ಪರವಾಗಿ ಸಕ್ರಿಯವಾಗಿ ಪ್ರಚಾರ ನಡೆಸುತ್ತಿವೆ. ●

NEW No. MAG(3)/NPP/205/2021-2022
JANASHAKTHI KANNADA VARA PATRIKE May 20-26, 2024 Price: Rs. 10/- Date of Publication: 17 May 2024 RNI No. KARKAN /2006/17926 Posted on 21-05-2024
Posted at BG PSO, BG - 560026 **Posted at Periodical Rate -** Rs. 2

ಬಂಡವಾಳ ಸಂಪುಟ–2 ಬಿಡುಗಡೆಗೆ ಜೂನ್ 2ರಂದು ಬನ್ನಿ!



ಬಂಡವಾಳ ಸಂಪುಟ–2 ಇದೀಗ ಪ್ರಕಟವಾಗಿದೆ. ಈ ಪ್ರಕಟಣೆಯೊಂದಿಗೆ ಏಂಗೆಲ್ಸ್ 200 ಮಾಲಿಕೆಯ ಪ್ರಕಟಣೆ ಸಹ ಪೂರ್ಣವಾಗಿದೆ. ಬಂಡವಾಳ ಸಂಪುಟ–2 ಜೂನ್ 2 ರಂದು ಬೆಂಗಳೂರಿನ ಬಸವನಗುಡಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್ ಸಭಾಂಗಣದಲ್ಲಿ ಬೆಳಿಗ್ಗೆ 10ಕ್ಕೆ ಆರಂಭವಾಗುವ ಸಮಾರಂಭದಲ್ಲಿ ಬಿಡುಗಡೆಯಾಗಲಿದೆ. ಇದೇ ಸಂದರ್ಭದಲ್ಲಿ ಬಂಡವಾಳ ಸಂಪುಟ–2 ರ ಓದಿಗೆ ಸಹಾಯಕವಾಗಿರುವ ಪೂರಕವಾಗಬಲ್ಲ ಬಂಡವಾಳ ಸಂಪುಟ–1 ರ ಪ್ರವೇಶಿಕೆ ಮತ್ತು ಗೈಡ್ ಎಂಬ ಪುಸ್ತಕಗಳನ್ನು ಸಹ ಬಿಡುಗಡೆ ಮಾಡಲಾಗುತ್ತಿದೆ.



ಜೊತೆಗೆ ಈ ಪುಸ್ತಕ ಏಂಗೆಲ್ಸ್ 200 ಮಾಲಿಕೆಯ ಕೊನೆಯ ಪುಸ್ತಕವಾಗಿದ್ದು ಈ ಸರಣಿಯ ಸಮಾರೋಪವೂ ಆಗಿರುತ್ತದೆ.

ಬಿಡುಗಡೆ ಸಮಾರಂಭದ ಪ್ರಧಾನ ಆಶಯ "ಇಂದಿನ ಬಂಡವಾಳಶಾಹಿ ವ್ಯವಸ್ಥೆಯ ಅರ್ಥೈಸುವಿಕೆ ಮತ್ತು 'ಬಂಡವಾಳ'ದ ಓದು" ಆಗಿದ್ದು ನಾಡಿನ ಹಲವು ಪ್ರಗತಿಪರ ಚಿಂತಕರು ಭಾಗವಹಿಸಲಿದ್ದಾರೆ. ಡಾ.ಜಿ. ರಾಮಕೃಷ್ಣ, ಪ್ರೊ.ಟಿ.ಆರ್.ಚಂದ್ರಶೇಖರ್, ಪ್ರೊ.ವೆಂಕಟೇಶ ಆತ್ರೇಯ, ಪ್ರೊ.ರಾಜೇಂದ್ರ ಚೆನ್ನಿ, ಡಾ. ರತಿ ರಾವ್ ಮತ್ತು ಕಾ. ಕೆ.ಎನ್.ಉಮೇಶ್ ಅವರು ಈ ಆಶಯದ ಸುತ್ತ ನಡೆಯುವ ಮಾತುಕತೆಯಲ್ಲಿ ಭಾಗವಹಿಸಲಿದ್ದಾರೆ. ಈ ಕೃತಿಯ ಅನುವಾದಕರಾದ ಪಿ.ಎ.ಕುಮಾರ್ ಮತ್ತು ವಿ.ಎನ್. ಲಕ್ಷ್ಮೀನಾರಾಯಣ ಅವರೂ ಭಾಗವಹಿಸಲಿದ್ದಾರೆ. ಏಂಗೆಲ್ಸ್ 200 ಸರಣಿಯ ಇತರ ಪುಸ್ತಕಗಳ ಅನುವಾದಕರಾದ ಡಾ.ಎಚ್.ಜಿ.ಜಯಲಕ್ಷ್ಮಿ, ಸುಬ್ರಮಣ್ಯ ಗುಡ್ಗೆ, ನಾ ದಿವಾಕರ ಅವರೂ ಸಮಾರಂಭದಲ್ಲಿ ಭಾಗವಹಿಸುತ್ತಾರೆ.

ಬಂಡವಾಳ ಸಂಪುಟ 2 ಬಂಡವಾಳದ ಮೂರು ಸಂಪುಟಗಳ ಮಾಲಿಕೆಯಲ್ಲಿ ನಡುವಿನ ಸಂಪುಟವಾಗಿದೆ. ಬಂಡವಾಳ ಸಂಪುಟ 1ರಲ್ಲಿ ಮಾರ್ಕ್ಸ್ ಬಂಡವಾಳಶಾಹಿ ಉತ್ಪಾದನೆಯ ಪ್ರಕ್ರಿಯೆಯನ್ನು ಅನ್ವೇಷಿಸಿ ನಿರೂಪಿಸುತ್ತಾರೆ. ಮಾರ್ಕ್ಸ್ ಸಂಪುಟ 2 ರಲ್ಲಿ ಬಂಡವಾಳಶಾಹಿ ಚಲಾವಣೆಯ ವಿಶ್ಲೇಷಣೆಗೆ, ಅಂದರೆ ಬಂಡವಾಳದ ಚಲಾವಣೆಯ ಪ್ರಕ್ರಿಯೆಯ ವಿಶ್ಲೇಷಣೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಬಂಡವಾಳದ ವಿಸ್ತರಣೆಗೆ ಚಲಾವಣೆ ನಿರ್ಣಾಯಕವಾಗಿದೆ, ಏಕೆಂದರೆ ಚಲಾವಣೆಯ ಪ್ರಕ್ರಿಯೆಯಲ್ಲಿ ಮಿಗುತಾಯ–ಮೌಲ್ಯವನ್ನು ಉತ್ಪಾದಿಸುವ ಸರಕುಗಳ ಮಾರಾಟದಲ್ಲಿ ಲಾಭದ ರೂಪದಲ್ಲಿ ಸಾಕಾರಗೊಳ್ಳುವ ಮೂಲಕ ಮತ್ತು ಅದನ್ನು ಮತ್ತೆ ಬಂಡವಾಳವಾಗಿ ಹೂಡುವ ಮೂಲಕ ಮಾತ್ರ ಬಂಡವಾಳದ ವಿಸ್ತರಣೆ ಸಾಧ್ಯವಾಗುತ್ತದೆ. ಮೊದಲ ಎರಡು ಸಂಪುಟಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಉತ್ಪಾದನಾ ಮತ್ತು ಚಲಾವಣಾ ಪ್ರಕ್ರಿಯೆಯ ನಿರೂಪಣೆ ಮತ್ತು ವಿಶ್ಲೇಷಣೆಯ ಆಧಾರದ ಮೇಲೆನೇ ಸಂಪುಟ 3ರಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಕಾರ್ಯಸಾಧ್ಯತೆ ಅಥವಾ ಅಸಾಧ್ಯತೆ, ಅದರ ಬಿಕ್ಕಟ್ಟು ಹಾಗೂ ಅಂತಿಮವಾಗಿ ಅದು ಬಿದ್ದು ಹೋಗುವ ಪ್ರಕ್ರಿಯೆಯ ವಿಶ್ಲೇಷಣೆಗೆ ತೊಡಗುತ್ತಾರೆ.



ಮಾರ್ಕ್ಸ್ ಸಂಪುಟ–2 ಮತ್ತು 3 ರ ಪ್ರಕಟಣೆಯ ಮೊದಲೇ ನಿಧನ ಹೊಂದಿದ್ದು, ಅವುಗಳ ವಿವರವಾದ ಟಿಪ್ಪಣಿಗಳನ್ನಷ್ಟೇ ಬರೆದಿದ್ದರು. ಏಂಗೆಲ್ಸ್ ಅದನ್ನು ಸಂಸ್ಕರಿಸಿ, ಜೋಡಿಸಿ ಪ್ರಕಟಣೆಗೆ ಸಿದ್ಧ ಪಡಿಸಿದ್ದರು. ಹಾಗಾಗಿ ಸಂಪುಟ–2 ಮಾರ್ಕ್ಸ್–ಏಂಗೆಲ್ಸ್ ಜಂಟಿ ಕೃತಿಯೆಂದೇ ಹೇಳಬೇಕು

ಬಂಡವಾಳ ಸಂಪುಟ 2 ಓದನ್ನು ನೆರವಾಗಲು ಸಂಪುಟ–1ರ ಸಾರಾಂಶವನ್ನೊಳಗೊಂಡ ಪ್ರವೇಶಿಕೆ, ಮತ್ತು ಪ್ರತಿ ಭಾಗ ಮತ್ತು ಅಧ್ಯಾಯಗಳ ಮುಖ್ಯಾಂಶಗಳನ್ನು ಕೊಡಲಾಗಿದೆ. ಓದನ್ನು ಹೆಚ್ಚು ಆಸಕ್ತಿಕಾರ ಮತ್ತು ಸುಗಮಗೊಳಿಸಲು ಹಲವು ಚಿತ್ರಗಳು, ಚಾರ್ಟ್ ಗಳನ್ನು ಸೇರಿಸಲಾಗಿದೆ. ಪುಸ್ತಕದ ಒಳ ರಕ್ಷಾಪುಟಗಳಲ್ಲಿ ಭಾರತದ, ಜಗತ್ತಿನ ವಿವಿಧ ಭಾಷೆಗಳಲ್ಲಿ ಪ್ರಕಟವಾಗಿರುವ ಬಂಡವಾಳದ ಮುಖಪುಟಗಳ ಸುಂದರ ಕೋಲಾಜ್ ಇದೆ.

ಬಿಡುಗಡೆಯ ದಿನದ ವರೆಗೆ ಅಂದರೆ ಜೂನ್ 2 ರ ವರೆಗೆ ಅಂದು ಬಿಡುಗಡೆಯಾಗುವ ಮೂರು ಪುಸ್ತಕಗಳಿಗೂ ಮತ್ತು ಏಂಗೆಲ್ಸ್ 200 ಮಾಲಿಕೆಯ ವಿವಿಧ ಸೆಟ್ ಗಳಿಗೆ ಶೇ.25+ ವಿಶೇಷ ರಿಯಾಯಿತಿ ಇರುತ್ತದೆ.

ಪುಸ್ತಕಗಳ ಮುಖಪುಟ, ಒಳ ರಕ್ಷಾಪುಟಗಳ ಝಲಕ್ ತೋರಿಸುವ ಮತ್ತು ರಿಯಾಯಿತಿಯ ಪೋಸ್ಟರುಗಳು ಇಲ್ಲಿವೆ.

ಬಂಡವಾಳ ಸಂಪುಟ–2 ಬಿಡುಗಡೆಗೆ ಮತ್ತು ಏಂಗೆಲ್ಸ್ 200 ಮಾಲಿಕೆ ಸಮಾರೋಪಕ್ಕೆ ಜೂನ್ 2ರಂದು ಬನ್ನಿ!



JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**